ಸಂಪುಟ: 14 Volume ಸಂಚಿಕೆ: 97 Issue ಪುಟಗಳು 08 Pages ಮಂಗಳವಾರ 21 ಜುಲೈ 2026 ₹4 PRGINO.120927 (RNINO:KARKAN/2011/48371) BDR/054/2026-2027 www.mallammanudi.in
mallammanudi@gmail.com 9448604450, 9845028349
ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ
Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ
ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಕ್ಷಮಿಸುವುದು ಉತ್ತಮ. ಮರೆತುಬಿಡುವುದು ಸರ್ವೋತ್ತಮ.
–ರಾಬರ್ಟ್ ಬ್ರೌನಿಂಗ್



ಜಿಲ್ಲಾಸ್ಪತ್ರೆ ಶಸ್ತ್ರಚಿಕಿತ್ಸಕ ಶಿವಾನಂದ ಮಾಸ್ತಿಹೋಳಿ ಮತ್ತು ಜಿಲ್ಲಾ ಆರೋಗ್ಯ ಅಧಿಕಾರಿ ಮಲ್ಲನಗೌಡ ಬಿರಾದಾರ ವಿದ್ಯಾರ್ಥಿಗಳೊಂದಿಗೆ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವುದು.



ಹಾಸನ ಜಿಲ್ಲೆಯ ಹೊಳೆನರಸೀಪುರದ ಮಾವಿನಕೆರೆಯಲ್ಲಿ ಮಾಜಿ ಪ್ರಧಾನಿ ಹೆಚ್ ಡಿ ದೇವೇಗೌಡ ಅವರ ಪತ್ನಿ ದಿವಂಗತ ಚನ್ನಮ್ಮ ಅವರ ಅಂತಿಮ ಸಂಸ್ಕಾರವನ್ನು ಸಕಲ ಸರ್ಕಾರಿ ಗೌರವಗಳೊಂದಿಗೆ ಸೋಮವಾರ ನೆರವೇರಿಸಲಾಯಿತು. ತನ್ನಿಮಿತ್ತ ಸಿಎಂ ಡಿ ಕೆ ಶಿವಕುಮಾರ್ ಅವರು ಅಂತಿಮ ನಮನ ಸಲ್ಲಿಸಿ, ಮಾಜಿ ಪ್ರಧಾನಿ ದೇವೇಗೌಡರಿಗೆ ರಾಷ್ಟ್ರಧ್ವಜ ನೀಡಿ, ಕಾಲಿಗೆ ನಮಸ್ಕರಿಸಿದರು. ನಂತರ ಅದೇ ತ್ರಿವರ್ಣ ಧ್ವಜವನ್ನು ಅವರ ಪುತ್ರ ಕೇಂದ್ರ ಸಚಿವರಾದ ಹೆಚ್ ಡಿ ಕುಮಾರಸ್ವಾಮಿ ಅವರಿಗೆ ಹಸ್ತಾಂತರಿಸಿದರು.



ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷೆ ಉಮಾ ರೆಡ್ಡಿ ಅವರ ನೇತೃತ್ವದ ನಿಯೋಗ ಇಂದು ವಿಧಾನಸೌಧದಲ್ಲಿ ಮುಖ್ಯಮಂತ್ರಿ ಡಿ ಕೆ ಶಿವಕುಮಾರ ಅವರನ್ನು ಭೇಟಿಯಾಗಿ ಚರ್ಚಿಸಿತು. ಸಿ.ಎಸ್. ಆರ್ ಕಮಿಟಿಯ ಚೇರಮನ್ ಕೀರ್ತನ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.



ಮಾಜಿ ಸಚಿವ, ಶಾಸಕ ದಿನೇಶ್ ಗುಂಡೂರಾವ್ ಅವರ ನೇತೃತ್ವದ ನಿಯೋಗವು ಇಂದು ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರನ್ನು ವಿಧಾನಸೌಧದ ಕಚೇರಿಯಲ್ಲಿ ಭೇಟಿ ಮಾಡಿ ಸಮಾಲೋಚನೆ ನಡೆಸಿತು.

## ವಿಬಿ ಜಿ ರಾಮ್ ಜಿ ಉದ್ಯೋಗಕ್ಕೆ ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಜ್ಯದ 178 ತಾಲೂಕುಗಳಲ್ಲಿ ಮಳೆಯ ಕೊರತೆ ಆಗಿದ್ದು, 60 ತಾಲೂಕುಗಳಲ್ಲಿ ತೀವ್ರ ಮಳೆ ಕೊರತೆ ಆಗಿದೆ. ಹೀಗಾಗಿ ಕುಡಿಯುವ ನೀರಿಗೆ ಪ್ರಥಮ ಆದ್ಯತೆ ನೀಡಲು ಮತ್ತು ಯಾರೂ ಗುಳೆ ಹೋಗದಂತೆ ಗ್ರಾಮಗಳಲ್ಲೇ ಉದ್ಯೋಗ ನೀಡಲು ಸೂಚಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ತಿಳಿಸಿದ್ದಾರೆ.

ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಕೊರತೆ ಆಗಬಾರದು ಎಂದು 117 ಕೋಟಿ ರೂ. ಮುಂಗಡವಾಗಿ ಬಿಡುಗಡೆ ಮಾಡಿದ್ದೇವೆ. 95 ಕೋಟಿ ರೂ. ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಇನ್ನೂ 25 ಕೋಟಿ ರೂ. ವಿವಿಧ ಜಿಲ್ಲೆಗಳಲ್ಲಿ ಇದೆ ಎಂದು ಸ್ಪಷ್ಟಪಡಿಸಿದರು.



ಯಾವುದೇ ಗ್ರಾಮದಲ್ಲಿ, ತಾಂಡಾದಲ್ಲಿ ಮೇಲ್ಮೈ ನೀರು ದೊರಕದೆ, ನೀರು ಪೂರೈಸುವ ಕೊಳವೆ ಬಾವಿಗಳು ಬತ್ತಿ ಹೋಗಿದ್ದರೆ, ಖಾಸಗಿ ಬೋರ್ ವೆಲ್, ಬಾವಿ ಬಾಡಿಗೆಗೆ ಪಡೆದು ಟ್ಯಾಂಕರ್ ಮೂಲಕ ನೀರು ಪೂರೈಸಲು ತೀರಾ ಅನಿವಾರ್ಯ ಪರಿಸ್ಥಿತಿಯಲ್ಲಿ ಕೊಳವೆ ಬಾವಿ ಕೊರೆಯಲು ಅನುಮತಿಸಲಾಗಿದೆ ಎಂದು ತಿಳಿಸಿದರು.

## ಪತ್ರಿಕಾ ದಿನಾಚರಣೆ: ಪತ್ರಕರ್ತರಿಗೆ ಸನ್ಮಾನ

• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ

ಸಮಾಜದ ಹಿತ ಬಯಸಿ, ಜನರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ಪತ್ರಕರ್ತರ ಪಾತ್ರ ಮಹತ್ವದ್ದು, ಸಮಾಜದಲ್ಲಿಯ ತಪ್ಪುಗಳನ್ನು ಎತ್ತಿ ತೋರಿಸುವ ಜತೆಗೆ ಒಳ್ಳೆಯದನ್ನು ಬೆಂಬಲಿಸುವ ಕಾರ್ಯ ಪತ್ರಕರ್ತರು ಮಾಡುತ್ತಾರೆ ಎಂದು ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಕಾರ್ಯಕಾರಿಣಿ ಸದಸ್ಯರಾದ ಗುರುನಾಥ ಗಡ್ಡೆ ಹೇಳಿದರು.

ರಾಷ್ಟ್ರೀಯ ಮಜ್ದೂರ ಕಾಂಗ್ರೆಸ್ ಪಕ್ಷದ ಕರ್ನಾಟಕ ರಾಜ್ಯ ಘಟಕದ ಐ.ಎನ್.ಟಿ.ಯು.ಸಿ. ಕಾರ್ಯಾಲಯದಲ್ಲಿ ಪತ್ರಿಕಾ ದಿನಾಚರಣೆ ನಿಮಿತ್ತವಾಗಿ ಆಯೋಜಿಸಲಾಗಿದ್ದ ಪತ್ರಕರ್ತರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪತ್ರಿಕಾ ದಿನಾಚರಣೆ ನಿಮಿತ್ತ ಪತ್ರಕರ್ತರ ಸೇವೆ ಗುರುತಿಸಿ ಸನ್ಮಾನಿಸಿ, ಗೌರವಿಸುವ ಅಶೋಕ ಡಗಳೆ ಅವರ ಕಾರ್ಯ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಐಎನ್‌ಟಿಯುಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅಶೋಕ ಢಗಳೆಯವರು ಮಾತನಾಡಿ,



ಸಮಾಜದಲ್ಲಿಯ ದೋಷಗಳನ್ನು ಎತ್ತಿ ತೋರುವ ಮೂಲಕ ಜನರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ಪತ್ರಕರ್ತರ ಪಾತ್ರ ಮಹತ್ವದ್ದಾಗಿದೆ. ಪತ್ರಕರ್ತರನ್ನು ಸನ್ಮಾನಿಸುವ ಉದ್ದೇಶದಿಂದ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಹೇಳಿದರು.

**ಸನ್ಮಾನ:** ಪತ್ರಕರ್ತರಾದ ಮಾಣಿಕ ಭುರೆ, ಕಲ್ಯಾಣರಾವ ಮದರಗಾಂವಕರ್, ಡಿಕೆ ಪ್ರಹ್ಲಾಜಿ. ನಯಿಮೋದ್ದಿನ್ ಜಾಬುಕಸವಾರ, ಮಲ್ಲಿಕಾರ್ಜುನ ಬಂಡೆ, ಖಾಜಾ ಸರ್ತಾಜೋದ್ದಿನ್, ನಾಗಪ್ಪ ನಿಣ್ಣೆ, ಧನರಾಜ ರಾಜೋಳೆ, ಆದಿತ್ಯ ಗಾಜರೆ, ಮಾಧವಿ ಲಾಖೆ, ಜುಬೇರ ನವಾಜಭಾಯಿ, ಖುತಬೋದ್ದಿನ್, ವೀರಶೆಟ್ಟಿ ಬೇಲೂರ, ಸುಧಾಕರ ಸೂರ್ಯವಂಶಿ, ಮೊಹ್ಮದಮಿಯಾ, ಸಮೀರಶೇಖ್, ಅಸ್ಲಮ್, ಶಪಿಯೋದ್ದಿನ್ ಸನ್ಮಾನಿಸಿ ಗೌರವಿಸಲಾಯಿತು.

# ಪ್ರಗತಿ ಸಂಪುಟ ವರ ಐತಿ

## 15 ಸಾವಿರ ಶಾಲಾ ಶಿಕ್ಷಕರ ನೇಮಕ: ಸಿಎಂ | ಕೆಪಿಎಸ್ ಇ ಅಧ್ಯಕ್ಷರ ಅಮಾನತಿಗೆ ಸಂಪುಟ ಅಸ್ತು

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕೆಪಿಎಸ್ ಇ ಅಧ್ಯಕ್ಷರ ಅಮಾನತಿಗೆ ಅಸ್ತು ಹಾಗೂ 15 ಸಾವಿರ ಶಾಲಾ ಶಿಕ್ಷಕರ ನೇಮಕಾತಿಗೆ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಯಿತು ಎಂದು ಸಿಎಂ ಡಿ ಕೆ ಶಿವಕುಮಾರ್ ತಿಳಿಸಿದ್ದಾರೆ.

ಬರ ಪರಿಸ್ಥಿತಿ ಕುರಿತ ಜಿಲ್ಲಾಧಿಕಾರಿ ಹಾಗೂ ಸಿಇಒ ಸಭೆಯ ಹಾಗೂ ವಿಶೇಷ ಸಚಿವ ಸಂಪುಟಸಭೆಯ ನಂತರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿ, ಕರ್ನಾಟಕ ಅಗ್ರಿಟೆಕ್ ಮಿಷನ್ 2026 ಅಡಿ ಸ್ಯಾಟಲೈಟ್ ಮೂಲಕ ಹವಾಮಾನ ವಿಶ್ಲೇಷಣೆ ನಡೆಸಿ ಅದರ ಮಾಹಿತಿಯನ್ನು ರೈತರಿಗೆ ಒದಗಿಸುವ ಕೆಲಸ ಸೇರಿದಂತೆ ಅನೇಕ ಮಾಹಿತಿಗಳನ್ನು ಇದರ ಮೂಲಕ ನೀಡಲಾಗುವುದು ಎಂದು ವಿವರಿಸಿದ್ದಾರೆ.

**ಕೆಪಿಎಸ್ ಇ ಅಧ್ಯಕ್ಷರ ಅಮಾನತು:** ಕೆಪಿಎಸ್ ಇ ಅಧ್ಯಕ್ಷರನ್ನು ರಾಜ್ಯಪಾಲರು ಅಮಾನತು ಮಾಡಿದ್ದರು. ಇದಕ್ಕೆ ಸಚಿವ ಸಂಪುಟ ಸಭೆಯು ಒಪ್ಪಿಗೆ ನೀಡಿದೆ. ನಾನು ಇದರ ಬಗ್ಗೆ ಕೂಲಂಕುಷವಾಗಿ ಅವಲೋಕಿಸಿದಾಗ ಅಮಾನತು ತೀರ್ಮಾನ ಸರಿಯಿದೆ ಎಂದು ಎನಿಸಿತು. ಅದಕ್ಕೆ ಒಪ್ಪಿಗೆ ನೀಡಲಾಗಿದೆ ಎಂದು ವಿವರಿಸಿದ್ದಾರೆ.

**ಅಲೆಮಾರಿಗಳ ಮನೆಗೆ 10 ಲಕ್ಷ:** ಹಿಂದುಳಿದ ವರ್ಗಗಳ ವಸತಿ ನಿಲಯಗಳಿಗೆ 15 ಸಾವಿರ ಹಾಸಿಗೆ, 7.5 ಸಾವಿರ ಮಂಚಗಳನ್ನು ಖರೀದಿಸಲು 30 ಕೋಟಿ ರೂಪಾಯಿ ಆಡಳಿತಾತ್ಮಕ ವೆಚ್ಚಕ್ಕೆ ಅನುಮೋದನೆ ನೀಡಲಾಗಿದೆ. ಅಲೆಮಾರಿ ಜನಾಂಗದವರಿಗೆ ಸೂರು ಒದಗಿಸಲು ಹಣ ನೀಡಲಾಗುವುದು ಎಂದಿದ್ದಾರೆ.

### ಮಳೆ ಕೊರತೆ

ಬರ ಪರಿಸ್ಥಿತಿ ಕುರಿತು ವಿವಿಧ ಇಲಾಖೆಗಳ ಜೊತೆಗೆ ಚರ್ಚೆ ಮಾಡಿದ್ದೇವೆ. ಎಲ್ಲರೂ ಒಟ್ಟಾಗಿ ಟೀಮ್ ಕರ್ನಾಟಕವಾಗಿ ಕಾರ್ಯನಿರ್ವಹಿಸಲು ಸೂಚಿಸಿದ್ದೇನೆ. ರಾಜ್ಯದಲ್ಲಿ 60% ಮಳೆ ಕೊರತೆ ಎದುರಾಗಿದ್ದು, 178 ತಾಲೂಕುಗಳಲ್ಲಿ ಮಳೆ ಕೊರತೆ ಇದ್ದು, 158 ತಾಲೂಕುಗಳಲ್ಲಿ ತೀರಾ ಸಾಧಾರಣ ಮಳೆಯಾಗಿದೆ. 20 ತಾಲೂಕುಗಳಲ್ಲಿ ಮಳೆ ಆಗಿಲ್ಲ ಎಂದು ಸಿಎಂ ತಿಳಿಸಿದ್ದಾರೆ.



### ಪ್ರಗತಿಗೆ ಒಪ್ಪಿಗೆ

ಯಾನಗಂಟಿ, ನರಿಬೋಳ, ಗೊಣ್ವಾರ, ಕಡಕೊಳ ಮೂಲಕ ಹಾದು ಹೋಗುವ ರಾಜ್ಯ ಹೆದ್ದಾರಿ– 156 ಪ್ರಗತಿಗೆ 25 ಕೋಟಿ ರೂ. ಲೋಕಭವನದಲ್ಲಿ ಆಡಳಿತ ಭವನ ನಿರ್ಮಾಣಕ್ಕೆ ವೆಚ್ಚ 27 ಕೋಟಿ ರೂಪಾಯಿಗೆ ಅನುಮತಿ ಹಾಗು ಐಐಟಿ ರಾಯಚೂರಿನಲ್ಲಿ ಎಐ ಉತ್ಕೃಷ್ಟತಾ ಕೇಂದ್ರ ಸ್ಥಾಪಿಸಲು 12 ಕೋಟಿ ರೂಪಾಯಿ ಅನುದಾನ ನೀಡಲು ಒಪ್ಪಿಗೆ ನೀಡಲಾಗಿದೆ ಎಂದಿದ್ದಾರೆ.

### ಬಯೋ ಮೆಟ್ರಿಕ್ ಬಳಕೆ ಹೇಗೆ..?

ಗೃಹಲಕ್ಷ್ಮೀ ಯೋಜನೆಗೆ ಫೆಶಿಯಲ್ ಅಥೆಂಟಿಕೇಷನ್ ಅಳವಡಿಸುವ ಪ್ರಶ್ನೆಗೆ –ಇದಕ್ಕೆ 20 ಕೋಟಿ ಹಣವನ್ನು ಮೀಸಲಿಡಲಾಗಿದೆ. ಗ್ಯಾರಂಟಿ ಅನುಷ್ಠಾನ ಸಮಿತಿಗಳು ಹೇಗೆ ಕೆಲಸ ಮಾಡಬೇಕು ಹಾಗೂ ಬಯೋ ಮೆಟ್ರಿಕ್ ಅನ್ನು ಹೇಗೆ ಬಳಸಬೇಕು ಎಂದು ತಿಳಿಸಲಾಗಿದೆ. ಬ್ಯಾಂಕ್ ಖಾತೆಗಳು, ದೂರವಾಣಿ ಸಂಖ್ಯೆ ಲಿಂಕ್ ಆಗಿರಬೇಕು ಎಂದು ಹೇಳಲಾಗಿದೆ ಎಂದಿದ್ದಾರೆ.

### ಕಾರಂಜ ಅಭಿವೃದ್ಧಿಗೆ 70 ಕೋಟಿ

180 ಕೋಟಿ ರೂಪಾಯಿ ವೆಚ್ಚದಲ್ಲಿ ಬೀದರ್‌ನ ಕಾರಿಂಜ ಬಲದಂಡೆ ಕಾಲುವೆಯ ಅಭಿವೃದ್ಧಿ ಮಾಡಲಾಗುವುದು. ನಂಜಗೂಡಿನಿಂದ ಕಪಿಲಾ ನದಿಗೆ ಕೊಳಚೆ ನೀರು ಹೋಗುವುದನ್ನು ತಪ್ಪಿಸಲು ಹಾಗೂ ಪ್ರವಾಹ ಅಪಾಯ ತಗ್ಗಿಸಲು 70 ಕೋಟಿ ವೆಚ್ಚದಲ್ಲಿ ನೀರಾವರಿ ಇಲಾಖೆಯಿಂದ ಯೋಜನೆ ಕೈಗೆತ್ತಿಕೊಳ್ಳಲಾಗುವುದು ಎಂದು ಸಿಎಂ ಮಾಹಿತಿ ನೀಡಿದ್ದಾರೆ.

## ಇಂದು ರಾಮಲಿಂಗಾರೆಡ್ಡಿ ಅವರ ಜಿಲ್ಲಾ ಪ್ರವಾಸ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಜಲಸಂಪನ್ಮೂಲ ಸಚಿವರು ಹಾಗೂ ಬೆಂಗಳೂರು ದಕ್ಷಿಣ ಮತ್ತು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ರಾಮಲಿಂಗಾರೆಡ್ಡಿ ಅವರು ಜುಲೈ.21 ರಂದು ಯಾದಗಿರಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿರುತ್ತಾರೆ.



ಅವರು ಜುಲೈ.21 ರಂದು ಬೆಳಿಗ್ಗೆ 8.30ಕ್ಕೆ ಆಲಮಟ್ಟಿಯಿಂದ ರಸ್ತೆ ಮಾರ್ಗವಾಗಿ ಮುದ್ದೇಬಿಹಾಳ ಮೂಲಕ ಯಾದಗಿರಿಗೆ ಬೆಳಿಗ್ಗೆ 9.30ಕ್ಕೆ ನಾರಾಯಣಪೂರ ಯೋಜನೆಗಳ ಸ್ಥಳಕ್ಕೆ ಆಗಮಿಸಿ ನಾರಾಯಣಪುರ ಆಣೆಕಟ್ಟು ವೀಕ್ಷಣೆ ಮತ್ತು ಪರಿಶೀಲನೆ ಹಾಗೂ NLBC-SCADA Ghate & SCADA Control Room ಗೆ ಭೇಟಿ ಹಾಗೂ ಪರಿಶೀಲನೆ ನಡೆಸಲಿದ್ದಾರೆ. ನಂತರ ಬೆಳಿಗ್ಗೆ 11 ಗಂಟೆಗೆ ನಾರಾಯಣಪುರಡ್ಯಾಂನಿಂದ ರಸ್ತೆ ಮಾರ್ಗವಾಗಿ ಮುದ್ದೇಬಿಹಾಳಗೆ ಪ್ರಯಾಣೀಸಲಿದ್ದಾರೆಂದು ಸಚಿವರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜನಾಂಗ ಜಾಗೃತಿ-ಸ್ವಾಭಿಮಾನಿ ಬೃಹತ್ ಸಮಾವೇಶ

• ಮಲ್ಲಮ್ಮ ನುಡಿ ವಾರ್ತೆ ಚಿಕ್ಕಬಳ್ಳಾಪುರ

ಅಂಬೇಡ್ಕರ್‌ವಾದಿಗಳು ಯಾರ ಮುಂದೆಯೂ ಕೈಚಾಚಿ ಗುಲಾಮಗಿರಿ ಮಾಡುವವರಲ್ಲ. ಸ್ವಾಭಿಮಾನ, ಸಮಾನತೆ ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುವುದು ಅಂಬೇಡ್ಕರ್‌ವಾದಿಗಳ ಆದ್ಯಕರ್ತವ್ಯವಾಗಿದೆ ಎಂದು ಮಾಜಿ ಸಚಿವ ಹಾಗೂ ಶಾಸಕ ಡಾ. ಹೆಚ್.ಸಿ.ಮಹಾದೇವಪ್ಪ ಹೇಳಿದರು. ನಗರದ ಅಂಬಾರಿ ಕಲ್ಯಾಣ ಮಂಟಪದಲ್ಲಿ ಭಾನುವಾರ ಜಿಲ್ಲಾ ಬಲಗೈ ಜಾತಿಗಳ ಒಕ್ಕೂಟದ ವತಿಯಿಂದ ಆಯೋಜಿಸಿದ್ದ ಜನಾಂಗ ಜಾಗೃತಿ ಮತ್ತು ಸ್ವಾಭಿಮಾನಿ ಸಮಾವೇಶದಲ್ಲಿ ಮಾತನಾಡಿದ ಅವರು,



ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸುವ ಸಂವಿಧಾನವನ್ನು ನೀಡಿದ್ದಾರೆ ಆದರೂ ಇಂದಿಗೂ ಸಮಾಜದಲ್ಲಿ ಜಾತಿ, ವರ್ಗ ಸೇರಿದಂತೆ ವಿವಿಧ ರೀತಿಯ ತಾರತಮ್ಯಗಳು ಮುಂದುವರಿದಿರುವುದು ವಿಷಾದನೀಯ. ಇಂತಹ ತಾರತಮ್ಯಗಳ ವಿರುದ್ಧ ಹೋರಾಡಬೇಕು ಎಂದರು.

## ಮುಳುಗಡೆ ಪ್ರದೇಶದ ರೈತರಿಗೆ ಅನುಕೂಲ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ವಿಜಯಪುರ ಜಿಲ್ಲೆ, ಬಬಲೇಶ್ವರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಮದಾಪುರ ಕೆರೆಯಲ್ಲಿ ನೀರು ತುಂಬಿದಾಗ ಮುಳುಗಡೆ ಆಗುವ 178 ಎಕರೆ ಜಮೀನನ್ನು ರೈತರ ಕೋರಿಕೆಯ ಮೇರೆಗೆ ಭೂಸ್ವಾಧೀನಕ್ಕೆ ಸಕಾರಾತ್ಮಕ ತೀರ್ಮಾನವಾಗಿದ್ದು ಈ ವಿಷಯವನ್ನು ಸಂಪುಟದ ಮುಂದೆ ತರಲು ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಈ ಸಂಬಂಧವಾಗಿ ಗುರುವಾರ ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಮತ್ತು ಎಂ ಬಿ ಪಾಟೀಲ ಇಬ್ಬರೂ ವಿಧಾನಸೌಧದಲ್ಲಿ ಸಣ್ಣ ನೀರಾವರಿ ಮತ್ತು ಕೃಷ್ಣಾ ಭಾಗ್ಯ ಜಲ ನಿಗಮದ ಅಧಿಕಾರಿಗಳ ಜತೆ ಸಭೆ ನಡೆಸಿದ್ದಾರೆ.

ಮುಳುಗಡೆ ಪ್ರದೇಶದ ರೈತರಿಗೆ ಆಗುತ್ತಿರುವ ಅನಾನುಕೂಲ ಮತ್ತು ನಷ್ಟ ತಪ್ಪಿಸಲು ಸ್ವಾಧೀನದ ಅಗತ್ಯ ಇದ್ದು, ಆದಷ್ಟು ಬೇಗ ಈ ಕುರಿತು ಸಂಪುಟದಲ್ಲಿ ಚರ್ಚಿಸಿ ಸೂಕ್ತ ತೀರ್ಮಾನ ಮಾಡಲಾಗುವುದು ಎಂದು ಹೇಳಿದ್ದಾರೆ.



### ಸಚಿವರ ನೇತೃತ್ವದ ಅಧಿಕಾರಿ ಸಭೆಯ ಹೈಲೈಟ್ಸ್?

- ಸಚಿವ ರಾಮಲಿಂಗಾರೆಡ್ಡಿ ಎಂ.ಬಿ.ಪಾಟೀಲ ನೇತೃತ್ವದಲ್ಲಿ ಅಧಿಕಾರಿಗಳ ಸಭೆ
- ಮಮದಾಪುರ ಕೆರೆ ಮುಳುಗಡೆ ಪ್ರದೇಶ ಸ್ವಾಧೀನ: ಸಂಪುಟಕ್ಕೆ ವಿಷಯ ಮಂಡನೆ
- ಕೃಷ್ಣಾ ಭಾಗ್ಯ ಜಲ ನಿಗಮದ ಸ್ವಾಧೀನಕ್ಕೆ 42 ಕೋಟಿ ರೂಪಾಯಿಗಳ ವೆಚ್ಚ
- 16ನೇ ಶತಮಾನದಲ್ಲಿ ಆದಿಲ್ ಶಾಹಿಗಳು ಕಟ್ಟಿಸಿದ ಮಮದಾಪೂರ ಕೆರೆ

## ಗೊಂದಲಮಯ ಮುಂಗಾರು ಅಧಿವೇಶನ

• ಮಲ್ಲಮ್ಮ ನುಡಿ ವಾರ್ತೆ ಹೊಸದಿಲ್ಲಿ

ನೀಟ್ ಹಗರಣಕ್ಕೆ ಸಂಬಂಧ ಗದ್ದಲ, ಸೋನಂ ವಾಂಗ್ಚುಕ್ ನಿರಶನ, ಕಾಕ್ರೋಚ್ ಪಾರ್ಟಿ ಪ್ರತಿಭಟನೆ, ವಿರೋಧ ಪಕ್ಷಗಳ ವಾಕ್ಸಮರ ಈ ಎಲ್ಲಾ ಗದ್ದಲ–ಗೊಂದಲ, ಬಿಗಿ ಭದ್ರತೆಯ ನಡುವೆ ಜುಲೈ 20ರ ಸೋಮವಾರದಂದು ಭಾರತೀಯ ಸಂಸತ್ತಿನ 2026ರ ಮುಂಗಾರು ಅಧಿವೇಶನ ಪ್ರಾರಂಭಗೊಂಡಿದೆ. ಒಟ್ಟು 25 ದಿನಗಳ ಕಾಲ ನಡೆಯಲಿರುವ ಈ ಅಧಿವೇಶನದಲ್ಲಿ 19 ಕಲಾಪಗಳು ನಿಗದಿಯಾಗಿದ್ದು, ಕೇಂದ್ರ ಸರ್ಕಾರವು ವಂದೇ ಮಾತರಂಗೆ ಅವಮಾನಿಸುವುದನ್ನು ಕ್ರಿಮಿನಲ್ ಅಪರಾಧ ಎಂದು ಪರಿಗಣಿಸುವ ಮಸೂದೆ ಸೇರಿದಂತೆ ಹಲವು ಮಹತ್ವದ ಹಾಗೂ ಚರ್ಚಾಸ್ಪದ ಮಸೂದೆಗಳನ್ನು ಮಂಡಿಸಲು ಸಜ್ಜಾಗಿದೆ.

### ಗಮನ ಸೆಳೆದ ಪ್ರಮುಖ ಮಸೂದೆ

ಈ ಅಧಿವೇಶನದಲ್ಲಿ ಕೇಂದ್ರ ಸರ್ಕಾರವು ಅತ್ಯಂತ ಪ್ರಮುಖವಾದ ಎರಡು ಮಸೂದೆಗಳನ್ನು ಮಂಡಿಸುತ್ತಿದೆ. ಮೊದಲಲು ರಾಷ್ಟ್ರಗೀತೆ ವಂದೇ ಮಾತರಂ'ಗೆ ಅವಮಾನ ಮಾಡುವುದನ್ನು ಅಪರಾಧ ಎಂದು ಪರಿಗಣಿಸುವ ಕಾಯ್ದೆ ತಿದ್ದುಪಡಿ ಮಸೂದೆ, ಎರಡನೆಯದಾಗಿ, ಸುಪ್ರೀಂ ಕೋರ್ಟ್ ನ್ಯಾಯಾಧೀಶರ ಸಂಖ್ಯೆಯನ್ನು 33 ರಿಂದ 37ಕ್ಕೆ ಹೆಚ್ಚಿಸುವ ಸುಪ್ರೀಂ ಕೋರ್ಟ್ ನ್ಯಾಯಾಧೀಶರ ತಿದ್ದುಪಡಿ ಮಸೂದೆ ಇದನ್ನು ಸಚಿವ ಅರ್ಜುನ್ ರಾಮ್ ಮೇಘವಾಲ್ ಲೋಕಸಭೆಯಲ್ಲಿ ಮಂಡಿಸಲಿದ್ದಾರೆ.





### ರಾಹುಲ್ ಗಾಂಧಿಗೆ ಮೋದಿ ಟಾಂಗ್

ಅಧಿವೇಶನ ಆರಂಭಕ್ಕೂ ಮುನ್ನ ಮಾಧ್ಯಮಗಳನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ದೇಶದ ಪ್ರಗತಿಗಾಗಿ ಸಂಸತ್ತಿನಲ್ಲಿ ಸತ್ಯ ಮತ್ತು ಸತ್ಸಂಗತಿಯ ಆಧಾರದ ಮೇಲೆ ರಚನಾತ್ಮಕ ಚರ್ಚೆಗಳು ನಡೆಯಬೇಕು ಎಂದು ಕರೆ ನೀಡಿದ್ದು, ನಾನು 56 ವರ್ಷದ ಯುವಕನ ಬಗ್ಗೆ ಮಾತನಾಡುತ್ತಿಲ್ಲ ನ್ನುವ ಮೂಲಕ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಗೆ ಪರೋಕ್ಷವಾಗಿ ಟಾಂಗ್ ನೀಡಿದ್ದಾರೆ.

## ಆ 56 ಇಂಚಿನ ಎದೆ ಎಲ್ಲಿ ಹೋಯಿತು?; ಅವರು ಹೋದ ನಂತರವೇ ದೇಶಕ್ಕೆ ಅಚ್ಛೇ ದಿನ್ ಸಾಧ್ಯ: ಮಲ್ಲಿಕಾರ್ಜುನ ಖರ್ಗೆ

# ಶಿಕ್ಷಣ ಸಚಿವರ ರಾಜೀನಾಮೆ, ಪ್ರಧಾನಿಯವರಿಗೂ ಹೊಣೆಗಾರಿಕೆ ನಿಗದಿಪಡಿಸುವಂತೆ ಆಗ್ರಹ




**ಬೀದರ್:** ನೀಟ್ (ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ) ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣವನ್ನು ಖಂಡಿಸಿ ಹಾಗೂ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ ಅವರ ರಾಜೀನಾಮೆಗೆ ಒತ್ತಾಯಿಸಿ ಬೀದರ್ ಜಿಲ್ಲಾ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ತಹಸೀಲ್ದಾರರ ಮೂಲಕ ಮನವಿ ಸಲ್ಲಿಸಲಾಯಿತು.

ಡಾ. ಬಾಬಾಸಾಹೇಬ ಅಂಬೇಡ್ಕರ್ ವೃತ್ತದಿಂದ ತಹಸೀಲ್ದಾರ್ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು, ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯಿಂದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯಕ್ಕೆ ಧಕ್ಕೆ ಉಂಟಾಗಿದ್ದು, ಕೆಲ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿರುವುದು ದುಃಖಕರ ಬೆಳವಣಿಗೆ ಎಂದು ಆರೋಪಿಸಿದರು.

ಶಿಕ್ಷಣವು ರಾಜ್ಯಗಳ ವಿಷಯವಾಗಿದ್ದರೂ ಕೇಂದ್ರ ಸರ್ಕಾರ ನೀಟ್ ಮೂಲಕ ರಾಜ್ಯಗಳ ಅಧಿಕಾರವನ್ನು ಮೊಟಕುಗೊಳಿಸಿದೆ. ಸುಮಾರು 23 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದ ವೇಳೆ ಪ್ರಶ್ನೆಪತ್ರಿಕೆ ಸೋರಿಕೆಯಾಗಿರುವುದು ಕೇಂದ್ರ ಸರ್ಕಾರದ ವೈಫಲ್ಯವನ್ನು ತೋರಿಸುತ್ತದೆ ಎಂದು ದೂರಲಾಗಿದೆ.

ದೆಹಲಿಯ ಜಂತರ್-ಮಂತರ್‌ನಲ್ಲಿ ಸಿ.ಜೆ.ಪಿ. ನೇತೃತ್ವದಲ್ಲಿ ನಡೆಯುತ್ತಿರುವ ಧರಣಿ ಸತ್ಯಾಗ್ರಹಕ್ಕೆ ಬೆಂಬಲ ಸೂಚಿಸಿರುವ ಒಕ್ಕೂಟವು, ಪರಿಸರವಾದಿ ಸೋನಂ ವಾಂಗ್ಚುಕ್ ಅವರನ್ನು ಪೊಲೀಸ್ ಸಹಾಯದಿಂದ ಬಲವಂತವಾಗಿ ಆಸ್ಪತ್ರೆಗೆ ದಾಖಲಿಸಿರುವ ಕ್ರಮವನ್ನು ಖಂಡಿಸಿದೆ. ಅಲ್ಲದೆ, ಪ್ರತಿಭಟನೆಗಳನ್ನು ಹತ್ತಿಕ್ಕಲು ಪೊಲೀಸ್ ಬಲವನ್ನು ಬಳಸಿರುವುದನ್ನೂ ವಿರೋಧಿಸಿದೆ.

ಪ್ರತಿಭಟನೆಯಲ್ಲಿ ಬಾಬುರಾವ ಹೊನ್ನಾ, ಜಗದೀಶ್ವರ ಬಿರಾದಾರ, ಮುಬಶೀರ್ ಸಿಂಧೆ, ರಾಜಕುಮಾರ ಮೂಲಭಾರತಿ, ಸತೀಶ ಬಿರಾದಾರ ಎಂ. ನೆಲವಾಡ, ವೈಜಿನಾಥ ಅಲ್ಲಾಪೂರೆ, ಶಫಾಯತ್ ಅಲಿ, ಮಾರುತಿ ಬೌದ್ಧೆ, ಮಹೇಶ ಗೋರನಾಳಕರ್, ಕೊಂಡಿಬಾರಾವ ಪಾಂಡ್ರೆ, ವಿಠಲದಾಸ ಪ್ಯಾಗೆ, ಶ್ರೀಧರ ಸೋಮನೋರ್, ಗಣೇಶ ಬಿರಾದಾರ, ಯೋಗೇಶ್ ಪಾಟೀಲ್, ವಿನೋದ ಶಾಕ್ಯಪಾಲ್, ಓಂಪ್ರಕಾಶ್ ರೊಟ್ಟೆ, ಅಮನ್ ಸಂತಪೂರೆ, ವೀರಶೆಟ್ಟಿ ವಟಂಬೆ, ಜೈಶೀಲಕುಮಾರ ಸೇರಿದಂತೆ ಹಲವರು ಭಾಗವಹಿಸಿದ್ದರು.

# ಪ್ರಭಾವಿಗಳ ವಶದಲ್ಲಿ ವಕ್ಫ್ ಆಸ್ತಿ: ರಕ್ಷಣೆಗೆ ಮುಂದಾದರೆ ಕೊಲೆ ಬೆದರಿಕೆ: ಸಮಿ ಆರೋಪ



**ಬೀದರ್:** ಕಳೆದ 15 ವರ್ಷಗಳಿಂದ ವಕ್ಫ್ ಕಾರ್ಯಕರ್ತರಾಗಿ ಕಾರ್ಯನಿರ್ವಹಿಸುತ್ತಿರುವ ನಾನು(ಅಬ್ದುಲ್ ಸಮಿ ಅಲಿಯಾಸ್ ಸಮಿ ಶೇಖ್), ವಕ್ಫ್ ಆಸ್ತಿಗಳ ರಕ್ಷಣೆಗಾಗಿ ನಡೆಸಿದ ಹೋರಾಟದ ಪರಿಣಾಮವಾಗಿ ನನ್ನ ವಿರುದ್ಧ ಸಂಚು ರೂಪಿಸಿ ಕಿರುಕುಳ ನೀಡದಲ್ಲದೆ ಕೊಲೆ ಬೆದರಿಕೆ ಹಾಕಲಾಗಿದೆ ಎಂದು ವಕ್ಫ್ ಆಸ್ತಿಗಳ ಹೋರಾಟ ನಡೆಸುತ್ತಿರುವ ಸಾಮಾಜಿಕ ಹೋರಾಟಗಾರ ಅಬ್ದುಲ್ ಸಮಿ ಆರೋಪಿಸಿದ್ದಾರೆ.

ಸೋಮವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ವಕ್ಫ್ ಅಧಿಕಾರಿಗಳಿಂದ ಹಿಡಿದು ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅವರೆಗೆ ಅನೇಕ ಬಾರಿ ವಕ್ಫ್ ಆಸ್ತಿಗಳ ರಕ್ಷಣೆಗಾಗಿ ಮನವಿ ಸಲ್ಲಿಸಿದ್ದು, ಹಲವು ಪ್ರಕರಣಗಳಲ್ಲಿ ವಕ್ಫ್ ಟ್ರಿಬ್ಯುನಲ್‌ನಲ್ಲೂ ಹೋರಾಟ ನಡೆಸಿದ್ದೇನೆ ಎಂದು ಹೇಳಿದರು. ವಕ್ಫ್ ನೀತಿ ಸುಧಾರಣೆಗಾಗಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೂ ಮನವಿ ಸಲ್ಲಿಸಿದ್ದೇನೆ ಎಂದು ತಿಳಿಸಿದರು. ತಮ್ಮ ಕಾರ್ಯವನ್ನು ಗುರುತಿಸಿ ಜಮಾಅತ್-ಎ-ಇಸ್ಲಾಮಿ ಹಿಂದ್ ಸಂಸ್ಥೆಯ ಅಂಗ ಸಂಸ್ಥೆಯಾದ ಕರ್ನಾಟಕ ಔಕಾಫ್ ರಕ್ಷಣಾ ಸಮಿತಿಯ ಬೀದರ್ ಜಿಲ್ಲಾ ಅಧ್ಯಕ್ಷರನ್ನಾಗಿ ನನ್ನನ್ನು ನೇಮಕ ಮಾಡಲಾಗಿತ್ತು. ಆದರೆ, ಜಮಾಅತ್‌ನ ಕೆಲವರ ಬಳಿ ವಕ್ಫ್ ಆಸ್ತಿ ಇರುವ ವಿಚಾರ ಪ್ರಸ್ತಾಪಿಸಿದ ಬಳಿಕ ತಮ್ಮನ್ನು ಕಡೆಗಣಿಸಲು ಆರಂಭಿಸಿದರು ಎಂದು ಸಮಿ ಆರೋಪಿಸಿದರು. ಹಳದಕೇರಿ (ಕೆ) ಗ್ರಾಮದ ಸರ್ವೇ ನಂ. 85ರ ದರ್ಗಾ ಹಜ್ರತ್ ಕುತ್ಬೆ ಸಾನಿ ಅವರಿಗೆ ಸೇರಿದ ಗಜೆಟ್ ನೋಟಿಫೈಡ್ ವಕ್ಫ್ ಆಸ್ತಿ ಕುರಿತು 2022ರಲ್ಲಿ ಸ್ಥಳೀಯ ಸುದ್ದಿ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ್ದೆ. ಆ ಬಳಿಕ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಅಬ್ದುಲ್ ಮನ್ನಾನ್ ತಮ್ಮ ವಿರುದ್ಧ ವಿರೋಧದ ಧೋರಣೆ ತಾಳಿದರು ಎಂದು ಹೇಳಿದರು. 2024ರಲ್ಲಿ ಮಿರ್ಜಾಪುರ (ಟಿ) ಗ್ರಾಮದ ಸರ್ವೇ ನಂ.6 ಹಿಸ್ಸಾ ನಂ.7ರ 3 ಎಕರೆ 10 ಗುಂಟೆ ಜಮೀನನ್ನು ಖರೀದಿಸುವ ಮುನ್ನ ಸಂಬಂಧ ಪಟ್ಟವರೊಂದಿಗೆ ಮಾತನಾಡಿ, ದಾಖಲೆಗಳನ್ನು ಸಂಪೂರ್ಣ ಪರಿಶೀಲಿಸಿ ಕಾನೂನು ಬದ್ಧವಾಗಿ ನೋಂದಣಿ ಮಾಡಿಕೊಂಡಿದ್ದೇನೆ. ಮ್ಯೂಟೇಶನ್ ಸಹ ನನ್ನ ಹೆಸರಿಗೆ ಆಗಿತ್ತು. ಬಳಿಕ ಅಭಿವೃದ್ಧಿ ಕಾಮಗಾರಿ ಆರಂಭಿಸಿದಾಗ ಪ್ರಭಾವ ಬಳಿಸಿ ಕಾಮಗಾರಿಗೆ ಅಡ್ಡಿ ಪಡಿಸಲಾಯಿತು ಎಂದು ಆರೋಪಿಸಿದರು. ಈ ವೇಳೆ, "ನಿನಗೆ ವಕ್ಫ್ ಆಸ್ತಿ ಉಳಿಸುವುದು ತುಂಬಾ ಇಷ್ಟ ಅಲ್ಲವೇ? ಈಗ ನಿನ್ನದೇ ಆಸ್ತಿಯನ್ನು ಉಳಿಸಿಕೊಂಡು ತೋರಿಸು" ಎಂದು ಬೆದರಿಕೆ ಸಹ ಹಾಕಲಾಯಿತು ಎಂದು ಅವರು ಆರೋಪಿಸಿದರು. ತಮ್ಮ ಆರೋಪದ ಪ್ರಕಾರ, 2025ರ ಮೇ 4ರಂದು ಯಾವುದೇ ಮುಂಚಿತ ನೋಟಿಸ್ ನೀಡದೆ ಹಾಗೂ ತಮ್ಮ ಪರವಾಗಿದ್ದ ಮ್ಯೂಟೇಶನ್ ಆದೇಶ ರದ್ದುಗೊಳಿಸದೇ ಹೊಸ ಎಂಆರ್ ಆದೇಶ ಹೊರಡಿಸಿ ಖಖಿಅಯಿಂದ ತಮ್ಮ ಹೆಸರನ್ನು ತೆಗೆದು ಸಣ್ಣ ನೀರಾವರಿ ಇಲಾಖೆಯ ಹೆಸರನ್ನು ದಾಖಲಿಸಲಾಗಿದೆ. ಈ ಕ್ರಮವನ್ನು ಪ್ರಶ್ನಿಸಿ ಕರ್ನಾಟಕ ಹೈಕೋರ್ಟ್ನ ಕಲಬುರಗಿ ಪೀಠದಲ್ಲಿ ಅರ್ಜಿ ಸಲ್ಲಿಸಿದ್ದು, ಪ್ರಕರಣ ನ್ಯಾಯಾಲಯದ ವಿಚಾರಣೆಯಲ್ಲಿದೆ ಎಂದು ಹೇಳಿದರು.

# ವೈಭವದ ತೃತೀಯ ಶ್ರೀ ಜಗನ್ನಾಥ ರಥಯಾತ್ರೆ ಮಹೋತ್ಸವ

- ಮಲ್ಲಮ್ಮ ನುಡಿ ವಾರ್ತೆ ಬೀದರ್

ಒಡಿಶಾದ ಪುರಿ ಜಗನ್ನಾಥ ರಥೋತ್ಸವದ ಮಾದರಿಯಲ್ಲಿ ಬೀದರ್ ನಗರದಲ್ಲಿ ಶ್ರೀ ಜಗನ್ನಾಥ ಮಂದಿರ (ನೀಲಾಚಲ್ ಧಾಮ್), ಶ್ರೀಕೃಷ್ಣ ಚೈತನ್ಯ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ತೃತೀಯ ರ್ಷದ ಶ್ರೀ ಜಗನ್ನಾಥ ರಥಯಾತ್ರಾ ಮಹೋತ್ಸವ ಭಾನುವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಅದ್ಧೂರಿಯಾಗಿ ಹಾಗೂ ಧರ್ಮಿಕ ಸಂಭ್ರಮದೊಂದಿಗೆ ಜರುಗಿತು.

ಬೆಳಿಗ್ಗೆ ನಗರದ ರಾಂಪುರೆ ಕಾಲೋನಿಯ ಶ್ರೀ ಲಕ್ಷ್ಮೀ ಸತ್ಯನಾರಾಯಣ ದೇವಸ್ಥಾನದಲ್ಲಿ ಗೋಪೂಜೆ ನೆರವೇರಿಸುವ ಮೂಲಕ ರಥಯಾತ್ರೆಗೆ ಚಾಲನೆ ನೀಡಲಾಯಿತು. ವೇದಘೋಷ, ಮಂಗಳ ವಾದ್ಯಗಳು ಹಾಗೂ ಪೂಜಾ ವಿಧಿವಿಧಾನಗಳ ನಡುವೆ ರಥಯಾತ್ರೆ ಆರಂಭವಾಗಿದ್ದು, ಭಕ್ತರು "ಜಗತ್ ಕೆ ನಾಥ, ಶ್ರೀ ಜಗನ್ನಾಥ", "ಹರೇ ಕೃಷ್ಣ ಹರೇ ರಾಮ" ಎಂಬ ಜಯಘೋಷಗಳನ್ನು ಮೊಳಗಿಸುತ್ತಾ ಭಕ್ತಿ ಪರವಶತೆಯಲ್ಲಿ ಹೆಜ್ಜೆ ಹಾಕಿದರು.

ರಥಯಾತ್ರೆಯಲ್ಲಿ ಸಾವಿರಕ್ಕೂ ಅಧಿಕ ಭಕ್ತರು ಪಾಲ್ಗೊಂಡು ನಗರದ ಪ್ರಮುಖ ರಸ್ತೆಗಳಲ್ಲಿ ಬಣ್ಣ ಬಣ್ಣದ ರಂಗೋಲಿ ಮೆರವಣಿಗೆಗೆ ವಿಶೇಷ ಮೆರುಗು ತಂದಿತು. ಮಹಿಳೆಯರು, ಪುರುಷರು, ಯುವಕರು, ಮಕ್ಕಳು ಸೇರಿದಂತೆ ಎಲ್ಲ ವಯೋಮಾನದ ಭಕ್ತರು ಸಂಭ್ರಮದಿಂದ ಭಾಗವಹಿಸಿ ರಥೋತ್ಸವಕ್ಕೆ ಸಾಕ್ಷಿಯಾದರು. ಪುರಿಯ ಜಗನ್ನಾಥ ಮಂದಿರದ ಮಾದರಿಯಲ್ಲಿ ಅಲಂಕೃತಗೊಂಡ ರಥದಲ್ಲಿ ಭಗವಾನ್ ಶ್ರೀ ಜಗನ್ನಾಥ (ಶ್ರೀಕೃಷ್ಣ), ಬಲಭದ್ರ ಹಾಗೂ ಸುಭದ್ರಾ ದೇವಿಯ



ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿತ್ತು. ರಥವನ್ನು ನಾನಾ ಬಗೆಯ ಬಣ್ಣ ಬಣ್ಣದ ಹೂವುಗಳು, ತೋರಣಗಳು ಹಾಗೂ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿದ್ದು, ಭಕ್ತರ ಗಮನ ಸೆಳೆಯಿತು. ಭಕ್ತರು ರಥದ ಹಗ್ಗ ಹಿಡಿದು ಎಳೆಯುವ ಮೂಲಕ ತಮ್ಮ ಭಕ್ತಿ ಸರ್ಪಿಸಿದರು.

ಶ್ರೀ ಲಕ್ಷ್ಮೀ ಸತ್ಯನಾರಾಯಣ ದೇವಸ್ಥಾನದಿಂದ ಆರಂಭವಾದ ರಥಯಾತ್ರೆ ಕಿತ್ತೂರು ರಾಣಿ ಚೆನ್ನಮ್ಮ ವೃತ್ತ, ಬೊಮ್ಮಗೊಂಡೇಶ್ವರ ವೃತ್ತ, ಬಸವೇಶ್ವರ ವೃತ್ತ, ಭಗತ್‌ಸಿಂಗ್ ವೃತ್ತ, ಡಾ. ಬಿ.ಆರ್. ಅಂಬೇಡ್ಕರ್ ವೃತ್ತ, ಜನವಾಡಾ ರಸ್ತೆ ಮರ್ಗವಾಗಿ ಸಂಚರಿಸಿ, ಚಿಕ್‌ಪೇಟೆ ರಿಂಗ್ ರಸ್ತೆಯಲ್ಲಿರುವ ಶ್ರೀ ಜಗನ್ನಾಥ ದೇವಸ್ಥಾನ (ನೀಲಾಚಲ್ ಧಾಮ್) ತಲುಪಿತು.

ಮರ್ಗದುದ್ದಕ್ಕೂ ಸರ್ವಜನಿಕರು, ವಿವಿಧ ಸಂಘಟನೆಗಳು, ವ್ಯಾಪಾರಸ್ಥರು ಹಾಗೂ ಗಣ್ಯರು ರಥಯಾತ್ರೆಗೆ ಪುಷ್ಪರ್ಚನೆ ಮಾಡಿ ಸ್ವಾಗತ ಕೋರಿದರು. ಅನೇಕ ಕಡೆಗಳಲ್ಲಿ ಭಕ್ತರಿಗೆ ಕುಡಿಯುವ ನೀರು, ಪಾನಕ ಹಾಗೂ ಪ್ರಸಾದ ವಿತರಣೆ ವ್ಯವಸ್ಥೆ ಮಾಡಲಾಗಿತ್ತು.



ರಥಯಾತ್ರೆಯುದ್ದಕ್ಕೂ ಭಜನಾ ತಂಡಗಳು ಶ್ರೀಕೃಷ್ಣ ಹಾಗೂ ಜಗನ್ನಾಥನ ಭಜನೆಗಳನ್ನು ಹಾಡಿ ಭಕ್ತಿಭಾವ ಮೂಡಿಸಿದವು. ಕೋಲಾಟ, ಸಾಂಪ್ರದಾಯಿಕ ನೃತ್ಯ, ಡೊಳ್ಳು-ತಮಟೆ, ತಾಳಮದ್ದಲೆ ಸೇರಿದಂತೆ ವಿವಿಧ ವಾದ್ಯಗೋಷ್ಠಿಗಳು ಮೆರವಣಿಗೆಗೆ ಮತ್ತಷ್ಟು ಸಾಂಸ್ಕೃತಿಕ ವೈಭವವನ್ನು ನೀಡಿದವು. ಭಕ್ತರು ನೃತ್ಯ ಮಾಡುತ್ತಾ, ಕರ್ತನೆಗಳನ್ನು ಹಾಡುತ್ತಾ ರಥದೊಂದಿಗೆ ಸಾಗಿದ್ದು ವಿಶೇಷ ಆರ್ಷಣೆಯಾಗಿತ್ತು.

ಒಡಿಶಾದ ವಿಶ್ವವಿಖ್ಯಾತ ಪುರಿ ಜಗನ್ನಾಥ ರಥೋತ್ಸವದ ಪರಂಪರೆಯನ್ನು ಬೀದರ್‌ನಲ್ಲಿಯೂ ಕಳೆದ ಮೂರು ರ್ಷಗಳಿಂದ ಯಶಸ್ವಿಯಾಗಿ ನಡೆಸಲಾಗುತ್ತಿದೆ. ಈ ಮೂಲಕ ಸನಾತನ ರ್ಮದ ಮೌಲ್ಯಗಳು, ಭಾರತೀಯ ಸಂಸ್ಕೃತಿ ಹಾಗೂ ಆಧ್ಯಾತ್ಮಿಕ ಪರಂಪರೆಯನ್ನು ಯುವ ಪೀಳಿಗೆಗೆ ಪರಿಚಯಿಸುವ ಮಹತ್ವದ ಕರ್ಯವನ್ನು ಶ್ರೀ ಜಗನ್ನಾಥ ಮಂದಿರ ಹಾಗೂ ಶ್ರೀಕೃಷ್ಣ ಚೈತನ್ಯ ಟ್ರಸ್ಟ್ ಮಾಡುತ್ತಿದ್ದಾರೆ.

ರಥಯಾತ್ರೆ ಆರಂಭದ ವೇಳೆ ಹಾಗೂ ಪ್ರಮುಖ ವೃತ್ತಗಳಲ್ಲಿ ಸಾಮೂಹಿಕ ಹನುಮಾನ್ ಚಾಲೀಸಾ ಪಠಣ ನಡೆಯಿತು. ಕಳೆದ ರ್ಷದಂತೆ ಈ ಬಾರಿಯೂ ರಥೋತ್ಸವ ಆರಂಭವಾಗುತ್ತಿದ್ದಂತೆ ನಾಲ್ಕು ಹನಿ ಮಳೆ ಸುರಿದು ವರುಣನ ಆಶರ್ವಾದ ದೊರೆತಂತಾಯಿತು. ಮಳೆಯಲ್ಲೇ ನೆನೆದು ಭಕ್ತರು ಉತ್ಸಾಹದಿಂದ ರಥವನ್ನು ಎಳೆದರು. ಸನಂತರ ರಥ ಸಾಗುವ ಮರ್ಗದಲ್ಲಿ ಸ್ವಚ್ಛತಾ ಕರ್ಯ ನಡೆಸಲಾಯಿತು. ಗಣ್ಯರು ಸಹ ಸ್ವತಃ ಕಸಗೂಡಿಸಿ ಸ್ವಚ್ಛತೆಯ ಸಂದೇಶ ಸಾರಿದರು.

ರಥಯಾತ್ರೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸ್ ಇಲಾಖೆ ಸೂಕ್ತ ಬಂದೋಬಸ್ತ್ ಕಲ್ಪಿಸಿತ್ತು. ಸ್ವಯಂಸೇವಕರು ಸಂಚಾರ ವ್ಯವಸ್ಥೆ ಹಾಗೂ ಭಕ್ತರ ಅನುಕೂಲಕ್ಕಾಗಿ ಸೇವೆ ಸಲ್ಲಿಸಿದರು. ಮಹೋತ್ಸವದ ಅಂತ್ಯದಲ್ಲಿ ದೇವಸ್ಥಾನದಲ್ಲಿ ಮಹಾಮಂಗಳಾರತಿ ನೆರವೇರಿಸಿ ಸಾವಿರಾರು ಭಕ್ತರಿಗೆ ಮಹಾಪ್ರಸಾದ ವಿತರಿಸಲಾಯಿತು.

ಈ ಸಂರ್ಭದಲ್ಲಿ ಜೆಡಿಎಸ್ ಮುಖಂಡ ಹಾಗೂ ನಾರಂಜಾ ಸಹಕಾರ ಸಕ್ಕರೆ ಕರ್ಖಾನೆ ಅಧ್ಯಕ್ಷ ಸರ್ಯಕಾಂತ ನಾಗಮಾರಪಳ್ಳಿ, ರಾಮಕೃಷ್ಣ ಸಾಳೆ, ವೀರಶೆಟ್ಟಿ ಮಣಗೆ, ರಾಜಕುಮಾರ ಅಳ್ಳೆ, ಸೋಮಶೇಖರ ಪಾಟೀಲ ಗಾದಗಿ, ಶಕುಂತಲಾ ಬೆಲ್ದಾಳೆ, ಮತರಸಿಂಗ್ ಠಾಕೂರ್, ಶಿವರಾಮ ಜೋರಿ, ಅಶೋಕ್ ರೇಜಂತಲ್, ಪ್ರಭಾಕರ ಮೈಲಾಪುರೆ, ಹಣಮಯ್ಯ ರ್ಥಂ, ನರಸಿಂಹ ದೀಕ್ಷಿತ್, ರಮೇಶ್ ಗೋಯಲ್, ಡಾ.ರಜನೀಶ್ ವಾಲಿ, ಅಭಿಷೇಕ ಆನಂದೆ, ಶಶಿ ಹೊಸಳ್ಳಿ, ರಾಜು ಚಿಂತಾಮಣಿ, ಸಂತೋಷ ಬೆಲ್ದಾಳೆ, ಕೇಶವರೆಡ್ಡಿ, ನಿತಿನ್ ರ್ರೂರ್, ಡಾ. ಜಗದೀಶ ಮರೂರ, ರಾಜೇಂದ್ರ ಜೋಶಿ, ಅನಂತ ದೇಶಪಾಂಡೆ, ಪ್ರವೀಣ ಕಾಳೆ ಸೇರಿದಂತೆ ಸಾವಿರಾರು ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು.

# ಸ್ಥಳೀಯ ಸಂಸ್ಥೆ ಚುನಾವಣೆ ಹಿನ್ನೆಲೆ ಪಕ್ಷ ಸಂಘಟನೆಗೆ ವಿಐಪಿ ಒತ್ತು

- ಮಲ್ಲಮ್ಮ ನುಡಿ ವಾರ್ತೆ ಬೀದರ್

ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆ ಹಾಗೂ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪಕ್ಷ ಸಂಘಟನೆಯನ್ನು ಬಲಪಡಿಸುವ ಉದ್ದೇಶದಿಂದ ವಿಕಾಸಶೀಲ ಇನ್ಸಾನ್ ಪಾರ್ಟಿ (ವಿಐಪಿ) ವತಿಯಿಂದ ಶನಿವಾರ ಬೀದರ್ ನಗರದ ಖಾಸಗಿ ಹೋಟೆಲ್‌ನಲ್ಲಿ ಸಂಘಟನೆ ಸಭೆ ನಡೆಯಿತು.

ವಿಐಪಿ ಪಕ್ಷದ ರಾಷ್ಟ್ರಾಧ್ಯಕ್ಷ ಮುಖೇಶ್ ಸಹಾನಿ ಅವರ ಮಾರ್ಗದರ್ಶನದಲ್ಲಿ ಹಾಗೂ ಕರ್ನಾಟಕ ರಾಜ್ಯಾಧ್ಯಕ್ಷ ಬಿ.ಕೆ. ಮೋಹನ್ ಕುಮಾರ್ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪಕ್ಷದ ಸಂಘಟನೆ ವಿಸ್ತರಣೆ, ಹೊಸ ಸದಸ್ಯರ ಸೇರ್ಪಡೆ, ಕಾರ್ಯಕರ್ತರನ್ನು ಒಗ್ಗೂಡಿಸುವುದು



ಹಾಗೂ ಜನಪರ ಹೋರಾಟಗಳನ್ನು ಬಲಪಡಿಸುವ ಕುರಿತು ಚರ್ಚಿಸಲಾಯಿತು. ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆ ಮತ್ತು ವಿಧಾನಸಭಾ ಚುನಾವಣೆಯಲ್ಲಿ ಪಕ್ಷವನ್ನು ಪರಿಣಾಮಕಾರಿಯಾಗಿ ಸಜ್ಜುಗೊಳಿಸಲು ಅಗತ್ಯ ಕಾರ್ಯತಂತ್ರಗಳನ್ನು ರೂಪಿಸುವ ಕುರಿತು ನಾಯಕರು ಅಭಿಪ್ರಾಯ ಹಂಚಿಕೊಂಡರು. ರಾಜ್ಯದ ವಿವಿಧ ಭಾಗಗಳಲ್ಲಿ ಪಕ್ಷದ ನೆಲೆಯನ್ನು ವಿಸ್ತರಿಸಿ, ಜನರ ಸಮಸ್ಯೆಗಳನ್ನು ಆಧರಿಸಿ ಹೋರಾಟಗಳನ್ನು ಸಂಘಟಿಸುವ ಅಗತ್ಯವಿದೆ ಎಂದು ಸಭೆಯಲ್ಲಿ ಒತ್ತಿ ಹೇಳಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ರಾಜ್ಯಾಧ್ಯಕ್ಷ ಬಿ.ಕೆ. ಮೋಹನ್ ಕುಮಾರ್, ರಾಜ್ಯದಲ್ಲಿ ಪಕ್ಷದ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವುದರೊಂದಿಗೆ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯಕರ್ತರ ಜಾಲವನ್ನು ವಿಸ್ತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು. ಮುಂಬರುವ ಚುನಾವಣೆಗಳಲ್ಲಿ ವಿಐಪಿ ಪಕ್ಷವನ್ನು ಬಲಿಷ್ಠ ರಾಜಕೀಯ ಶಕ್ತಿಯಾಗಿ ರೂಪಿಸುವ ಗುರಿಯೊಂದಿಗೆ ಕಾರ್ಯನಿರ್ವಹಿಸಲಾಗುತ್ತಿದೆ ಎಂದರು. ರಾಜ್ಯ ಸಂಚಾಲಕ ಶಾಂತಪ್ಪ ಕುಡಿ ಮಾತನಾಡಿ, ಪಕ್ಷದ ತತ್ವ-ಸಿದ್ಧಾಂತಗಳನ್ನು ಗ್ರಾಮೀಣ ಮಟ್ಟದವರೆಗೂ ತಲುಪಿಸುವ ಮೂಲಕ ಹೊಸ ನಾಯಕತ್ವವನ್ನು ಬೆಳೆಸಲು ಆದ್ಯತೆ ನೀಡಲಾಗುತ್ತಿದೆ ಎಂದು ಹೇಳಿದರು. ಸಭೆಯಲ್ಲಿ ಜಿಲ್ಲಾ ಘಟಕದ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಭಾಗವಹಿಸಿ ಪಕ್ಷದ ಮುಂದಿನ ರಾಜಕೀಯ ಕಾರ್ಯತಂತ್ರ, ಸಂಘಟನೆ ಬಲವರ್ಧನೆ ಮತ್ತು ಸದಸ್ಯತ್ವ ಅಭಿಯಾನದ ಕುರಿತು ಚರ್ಚಿಸಿದರು.

# ಮಕ್ಕಳ ಪ್ರತಿಭೆಗೆ ತಕ್ಕ ಪ್ರತಿಫಲ ಖಂಡಿತ ಸಿಗುತ್ತದೆ: ಅಡಿವೇಶ

- ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಮಕ್ಕಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಬೇಕು, ಪ್ರತಿಭೆಗೆ ತಕ್ಕ ಪ್ರತಿಫಲ ಖಂಡಿತ ಸಿಗುತ್ತದೆ, ಎಂದು ಧಾರವಾಡ ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಅಧ್ಯಕ್ಷ ಅಡಿವೇಶ ಗಿ. ಇಟಗಿ ಹೇಳಿದರು.

ನಗರದ ಅಬ್ದುಲ್ ನಜೀರ್ ಸಾಬ್ ಸಂಸ್ಥೆಯಲ್ಲಿ ಶುಕ್ರವಾರ ಕರ್ನಾಟಕ ಬಾಲ ವಿಕಾಸ ಅಕಾಡೆಮಿ, ಜಿಲ್ಲಾ ಪಂಚಾಯತ್ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 12-18 ವರ್ಷದ ಮಕ್ಕಳ 4 ದಿನಗಳ ಬಾಲ ಬಾಂಧವ್ಯ ವಿಭಾಗೀಯ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿ ಬಾರಿ ಧಾರವಾಡದಲ್ಲಿ ನಡೆಯುತ್ತಿದ್ದ ಈ ಕಾರ್ಯಕ್ರಮ ಕಲಬುರಗಿಯಲ್ಲಿ ನಡೆದಿರುವುದು ಸಂತಸ ತಂದಿದೆ, ಮಕ್ಕಳ ಸಹಾಯವಾಣಿ, ಅಕ್ಕಪಡೆ, ಬಾಲ್ಯವಿವಾಹ



ತಡೆ ಹಾಗೂ ಶಿಕ್ಷಣದ ಮಹತ್ವದ ಕುರಿತು ಜಾಗೃತಿ ಮೂಡಿಸಿದರು. ಕರ್ನಾಟಕ ಬಾಲವಿಕಾಸ ಅಕಾಡೆಮಿ ಧಾರವಾಡ ಯೋಜನಾಧಿಕಾರಿ ವಿರೂಪಾಕ್ಷಗೌಡ ಪಿ. ಪಾಟೀಲ ಅವರು ಮಾತನಾಡಿ, ಕಥೆಗಳ ಮೂಲಕ ಏಕಾಗ್ರತೆ, ಸಂಸ್ಕಾರಗಳನ್ನು ಬೋಧಿಸಿದರು. ಹಾಗೂ ಪಂಚೇಂದ್ರಿಯಗಳನ್ನು ಒಳ್ಳೆಯದಕ್ಕಾಗಿ ಹೇಗೆ ಬಳಸಿಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ಮಟ್ಟದ ಬಾಲ ವಿಕಾಸ ಅಕಾಡಮಿ ಅನುಷ್ಠಾನ ಸಮಿತಿ ನಾಮನಿರ್ದೇಶಿತ ಸದಸ್ಯ ಎ. ಕೆ. ರಾಮೇಶ್ವರ್ ಅವರು ಮಾತನಾಡಿ ಮಕ್ಕಳಿಗಿಂತ ಪ್ರಪಂಚದಲ್ಲಿ ದೊಡ್ಡದು ಯಾವುದು ಇಲ್ಲ, ಭಾರತದ ಭವಿಷ್ಯ ಮಕ್ಕಳ ಕಣ್ಣಿನ ಕಾಂತಿಯಲ್ಲಿದೆ ಎಂದು ಹೇಳಿದರು.

ಜಿಲ್ಲಾ ಮಟ್ಟದ ಬಾಲ ವಿಕಾಸ ಅಕಾಡಮಿ ಅನುಷ್ಠನ ಸಮಿತಿ ನಾಮನಿದೇರ್ಶಿತ ಸದಸ್ಯ ರಣಧೀರ್ ಹೊಸಮನಿ ಅವರು ಮಾತನಾಡಿ, ಮಕ್ಕಳ ಮಹತ್ವ ಮತ್ತು ಬಾಂಧವ್ಯದ ಕುರಿತು ಮಾತನಾಡಿದರು. ಕಾರ್ಯಾಗಾರದಲ್ಲಿ ಕಲಬುರಗಿ, ಬೀದರ್, ಬಳ್ಳಾರಿ, ಕೊಪ್ಪಳ, ರಾಯಚೂರು, ವಿಜಯನಗರ ಹಾಗೂ ಯಾದಗಿರಿ ಜಿಲ್ಲೆಗಳ 100 ಮಕ್ಕಳು ಭಾಗವಹಿಸಿದ್ದರು. ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಗೆದ್ದ ವಿಜೇತರಿಗೆ ಬಹುಮಾನ ಹಾಗೂ ಭಾಗವಹಿಸಿದ ಎಲ್ಲರಿಗೂ ಪ್ರಮಾಣಪತ್ರ ವಿತರಿಸಲಾಯಿತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಶಿವಶರಣಪ್ಪ ಸ್ವಾಗತಿಸಿದರು.

ಸಮಾರೋಪ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಂಜುಳಾ ವಿ ಪಾಟೀಲ್ ವಹಿಸಿದ್ದರು. ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ವಿಶ್ವರಾಧ್ಯ ಇಜೇರಿ ಉಪಸ್ಥಿತರಿದ್ದರು.

# ಡೊಂಗರಗಿಯಲ್ಲಿ ಅಖಂಡ ಶಿವನಾಮ ಸಪ್ತಾಹ ಸಂಪನ್ನ

- ಮಲ್ಲಮ್ಮ ನುಡಿ ವಾರ್ತೆ ಬೀದರ್

ಭಾಲ್ಕಿ ತಾಲ್ಲೂಕಿನ ಡೊಂಗರಗಿ ಗ್ರಾಮದಲ್ಲಿ ಈ ತಿಂಗಳ 12 ರಿಂದ ಆರಂಭವಾಗಿದ್ದ "ವರುಣನ ಕೃಪೆಗಾಗಿ ಅಖಂಡ ಶಿವನಾಮ ಸಪ್ತಾಹ" ಭಾನುವಾರ ಸಂಪನ್ನಗೊಂಡಿತ್ತು.

ಬೆಳಿಗ್ಗೆಯಿಂದಲೆ ಹನುಮಾನ ದೇವರ ಪೂಜೆ, ಅಭಿಷೇಕ, ನೈವೇದ್ಯ ಅಲ್ಲದೆ ಕಂಗಟಿ ಗ್ರಾಮದ ವಚನಶ್ರೀ ಮಹಿಳಾ ಕೋಲಾಟ ಸಂಘದವರಿಂದ ಆಕರ್ಷಕ ಕೋಲಾಟ ಪ್ರದರ್ಶನ ಜರುಗಿತು. ದಿನವಿಡೀ ಭಜನಾ ಕಾರ್ಯಕ್ರಮ, ರಾತ್ರಿ ಇಡೀ ಜಾಗರಣೆ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳು ಸಪ್ತಾಹದ ಮೆರಗು ಹೆಚ್ಚಿಸಿದವು.

ಅಲಿಯಂಬರ್ ಗ್ರಾಮದ ಪೂಜ್ಯ ವೀರಭದ್ರಪ್ಪ ಮುತ್ಯಾ ಅವರ ತತ್ವಗಳನ್ನು ಪಾಲಿಸಿಕೊಂಡು ಬರುತ್ತಿರುವ ಪೂಜ್ಯ ಬಾಬುಮಹಾರಾಜ ದಂಪತಿಗಳ ಪಾದಪೂಜೆ, ಪುಷ್ಪಾರ್ಚನೆ ಹಾಗೂ ಆರತಿ ಬೆಳಗಿ ಸತ್ಕಾರ ಮಾಡಲಾಯಿತು. ಇದೇ ವೇಳೆ ಬಾಬು ಮಹಾರಾಜರಿಂದ ಧೂನಿ ಪೂಜೆ ನೆರವೇರಿತು. ನಂತರ ಹಿರಿಯ ಪತ್ರಕರ್ತರು ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯದರ್ಶಿಗಳಾದ ಶಶಿಕಾಂತ ಶೆಂಬೆಳ್ಳಿ ಈ ಸಂದರ್ಭದಲ್ಲಿ ಮಾತನಾಡಿ, ಡೊಂಗರಗಿಯಲ್ಲಿ ನಡೆಯುತ್ತಿರುವ ಈ ಧಾರ್ಮಿಕ ಕಾರ್ಯಕ್ರಮಗಳಿಂದ ಬೀದರನಲ್ಲಿ ಮಳೆಯಾಗುತ್ತಿದೆ. ಅಂದರೆ ಗ್ರಾಮೀಣ ರೈತರು ಪೂಜಿಸುತ್ತಿರುವುದರಿಂದಲೇ ನಗರ ಹಾಗೂ ಪಟ್ಟಣಗಳಲ್ಲಿ ಕುಡಿಯಲು ನೀರು ದೊರೆಯುತ್ತಿದೆ. ರೈತರು ಬೆಳೆ ಬೆಳೆಯುವುದರಿಂದಲೇ ಅನ್ನಸಿಗುತ್ತದೆ. ಹಾಗಾಗಿ ರೈತರು ದೇವರ ಸಮಾನರಾಗಿದ್ದು, ಅವರ ಪೂಜೆ ಸಹ ಮಾಡುವುದರಲ್ಲಿ ತಪ್ಪೇನಿಲ್ಲ ಎಂದ ಅವರು, ಈ ಗ್ರಾಮದ ಸುತ್ತಲಿನ ಗ್ರಾಮಗಳಲ್ಲಿ





ಕುಡುಕರ ಹಾವಳಿ ಇರುವುದು ಗಮನಕ್ಕೆ ಬಂದಿದ್ದು, ಇಂತಹ ಧಾರ್ಮಿಕ ಚಟುವಟಿಕೆಗಳು ಎಲ್ಲಾ ಗ್ರಾಮಗಳಲ್ಲಿ ನಡೆದರೆ, ಅದರಲ್ಲಿ ಯುವ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರೆ ವ್ಯಸನಮುಕ್ತ ಗ್ರಾಮವನ್ನಾಗಿ ಪರಿವರ್ತನೆಯಾಗುವುದರಲ್ಲಿ ಸಂದೇಹವಿಲ್ಲವೆಂದು ಸ್ಪಷ್ಟಪಡಿಸಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಕುಮಾರ ಸ್ವಾಮಿ ಮಾತನಾಡಿ, ಮಹಾತ್ಮ ಗಾಂಧಿ ಹೇಳಿರುವಂತೆ ಗ್ರಾಮಗಳ ಉದ್ಧಾರವಾದರೆ, ದೇಶದ ಅಭಿವೃದ್ಧಿ ಸಾಧ್ಯ. ಹಾಗಾಗಿ ಗ್ರಾಮೀಣ ಪ್ರದೇಶಗಳಲ್ಲಿ ಜರುಗುತ್ತಿರುವ ಸಾಂಸ್ಕೃತಿಕ ಕಲೆ, ಸಾಹಿತ್ಯ, ಸಂಗೀತ ಇವುಗಳು ನಗರ ಪ್ರದೇಶಗಳಲ್ಲಿ ನಡೆಯಬೇಕು. ಆದರೆ ದುರ್ದೈವಶಾತ ಇಂದು ಶವಸಂಸ್ಕಾರದ ಸಂದರ್ಭದಲ್ಲಿ ನಗರ ಪ್ರದೇಶಗಳಲ್ಲಿ ಅಳುವವರನ್ನು ಸಹ ಬಾಡಿಗೆಗೆ ತರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಗ್ರಾಮೀಣ ಸಾಂಸ್ಕೃತಿಕ ಕಲೆಗಳು ಕಣ್ಮರೆಯಾಗಿವೆ. ಇದು ಹೀಗೆ ಮುಂದುವರೆದರೆ ಭಾವಿ ಪೀಳಿಗೆಗೆ ಕಲೆ ಹಾಗೂ ಸಾಹಿತ್ಯದ ಬಗ್ಗೆ ಅರಿವೇ ಇಲ್ಲದಂತಾಗುತ್ತದೆ ಎಂದು ಕಳವಳ ವ್ಯಕ್ತಪಡಿಸಿ ಡೊಂಗರಗಿಯಲ್ಲಿ ಜರುಗುತ್ತಿರುವ ಈ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಗಳು ಇಡೀ ಜಿಲ್ಲೆಗೆ ಮಾದರಿಪ್ರಾಯವಾಗಲಿ, ಈ ವರ್ಷ ಮಳೆ ಬೆಳೆ ಫಸಲು ಚೆನ್ನಾಗಿ ಬೆಳೆದು ರೈತರು ಹಾಗೂ ಕಾರ್ಮಿಕರು ಸಮೃದ್ಧಿಯ ಬದುಕು ಸಾಗಿಸುವಂತಾಗಲಿ ಎಂದು ಹಾರೈಸಿದರು.

ಜೈ ಹನುಮಾನ ಭಜನಾ ಮತ್ತು ಸಾಂಸ್ಕೃತಿಕ ಸಂಘದ ಅಧ್ಯಕ್ಷ ಅನೀಲಕುಮಾರ ಬಿರಾದಾರ ಅಧ್ಯಕ್ಷತೆ ವಹಿಸಿ ಮಾತನಾಡಿ, ಈ ವರ್ಷದ ಮಳೆ ಸಕಾಲಕ್ಕೆ ಬಿಳದೇ ಇರುವುದರಿಂದ ಗ್ರಾಮದಲ್ಲಿ ವರುಣನ ಕೃಪೆಗಾಗಿ ಎಲ್ಲಾ ರೈತ ಬಾಂಧವರು ಕೂಡಿ ಅಖಂಡ ಶಿವನಾಮ ಸಪ್ತಾಹ ಹಮ್ಮಿಕೊಂಡು ಗಂಗಾ ಆರತಿ, ಸಾಂಸ್ಕೃತಿಕ ಕಾರ್ಯಕ್ರಮಗಳು, ಕೋಲಾಟ ಹಾಗೂ ಭಜನೆ ಇತ್ಯಾದಿ ಧಾರ್ಮಿಕ ವಿಧಿಗಳು ಹಮ್ಮಿಕೊಳ್ಳಲಾಗಿದೆ ಎಂದರು.

ಈ ಸಂದರ್ಭದಲ್ಲಿ ಗ್ರಾಮದ ಪ್ರಮುಖರಾದ ಧನರಾಜ ಸುಂಕನಾಳೆ, ಗಣಪತಿ ಧೂಳೆ, ಬಸವರಾಜ ಬಿರಾದಾರ, ಹಾವಪ್ಪಾ, ಮಹಾದೇವ, ಚಂದ್ರಕಾಂತ, ಶಿವರಾಜ, ಪಂಡಿತ ಸೇರಿದಂತೆ ನೂರಾರು ಸಂಖ್ಯೆಯಲ್ಲಿ ಮುಖಂಡರು, ಮಹಿಳೆಯರು ಮಕ್ಕಳು ಭಾಗವಹಿಸಿದರು.

ಆರಂಭದಲ್ಲಿ ಶ್ರೀ ವೈಷ್ಣೋದೇವಿ ಕಲ್ಚರಲ್ ಮತ್ತು ಚಾರಿಟೇಬಲ್ ಟ್ರಸ್ಟ್ನ ಅಧ್ಯಕ್ಷ ಸಂಗಮೇಶ ಬಿರಾದಾರ ಸ್ವಾಗತಿಸಿದರು. ಸಂಗೀತ ಶಿಕ್ಷಕ ಸಂಗಯ್ಯ ಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

# ಬರಪಿಡಿತ ಪ್ರದೇಶವೆಂದು ಘೋಷಿಸಬೇಕು



• ಮಲ್ಲಮ್ಮ ನುಡಿ ವಾರ್ತೆಬಸವಕಲ್ಯಾಣ

ಮುಂಗಾರು ಒಂದು ತಿಂಗಳಿಂದ ಆರಂಭವಾಗಿದ್ದರೂ ನಿರೀ–ಕ್ಷೆಯಂತೆ ಮಳೆ ಬಂದಿರುವುದಿಲ್ಲ ಆದಕ್ಕಾಗಿ ಸರ್ಕಾರವು ಕೂಡಲೆ ತಾಲೂಕು ಬರ ಪಿಡಿತ ಪ್ರದೇಶವೆಂದು ಘೋಷಿಸಬೇಕು ಹಾಗು ರೈತರ ಇನ್ನಿತರ ಬೆಡಿಕೆಗಳನ್ನು ಇಡೆರಿಸಬೆಕೆಂದು ಕರ್ನಾಟಕ ರಾಜ್ಯ ರೈತ ಸಂಘ ಇಲ್ಲಿನ ತಹಸಿಲ್ದಾರರ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಪತ್ರದ ಮೂಲಕ ಒತ್ತಾಯಿಸಿದ್ದಾರೆ. ತಾಲೂಕಿನಲ್ಲಿ ಕಳೆದ ವರ್ಷ ಅತಿವೃಷ್ಟಿಯಿಂದ ಬೆಳೆ ಹಾನಿಯಾಗಿದ್ದು ಕಳೆದ ವರ್ಷ ಬೆಳೆ ವಿಮೆ ಮತ್ತು ಬೆಳೆ ಪರಿಹಾರ ಬಹಳಷ್ಟು ರೈತರಿಗೆ ದೊರಕಿರುವುದಿಲ್ಲ ಅದನ್ನು ಪರಿಶೀಲಿಸಿ ರೈತರ ಖಾತೆಗೆ ಬೆಳೆ ವಿಮೆ ಮತ್ತು ಬೆಳೆ ಪರಿಹಾರದ ಮೊತ್ತ ಜಮೆ ಆಗುವಂತೆ ಕ್ರಮ ಕೈಗೊಳ್ಳಬೇಕು.

ಕಾಡು ಪ್ರಾಣಿಗಳ ಹಾವಳಿಗಳಿಂದ ರೈತರ ಜಮಿನಿನ ಬೆಳೆಗಳನ್ನು ಸಂರಕ್ಷಿಸಲು ಸರ್ಕಾರವು ಸೋಲಾರ ತಂತಿ

ಅಳವಡಿಸಲು ಸರ್ಕಾರವು ಕೊಟ್ಟಂತಹ ಸೆಬ್ಸಿಡಿ ಮೊತ್ತ ಹೆಚ್ಚಿಸಬೇಕು. ಅದರಿಂದ ಹೆಚ್ಚಿನ ರೈತರಿಗೆ ಸೋಲಾರ ತಂತಿ ಬೇಲಿ ಅಳವಡಿಸಿಕೊಳ್ಳಲು ಅನಕೂಲವಾಗುತ್ತದೆ.

ರೈತರ ಜಮೀನುಗಳಿಗೆ ಮೀಟರ್ ಇಲ್ಲದೆ ರಾತ್ರಿ ಹೊತ್ತಿನಲ್ಲಿ ಸಿಂಗಲ್ ಫೇಸ್ ವಿದ್ಯತ ಸರಬರಾಜು ಮಾಡಬೇಕು.

ಕಳೆದ ವರ್ಷ ಅತಿವೃಷ್ಠಿಯಿಂದ ಬಹಳಷ್ಟು ರೈತರ ಬೆಳೆ ಹಾನಿಯಾಗಿದ್ದು, ಹಾಗೂ ಈ ವರ್ಷವು ಮಳೆ ಅಭಾವದಿಂದ ಬರಗಾಲ ಪರಿಸ್ಥಿತಿ ಎದುರಾಗಿದೆ ಅದಕ್ಕಾಗಿ ಸರ್ಕಾರ ರೈತರ ಸಂಪೂರ್ಣ ಸಾಲ ಮನ್ನಾ ಮಾಡಬೆಕೆಂದು ರೈತ ಸಂಘಟನೆ ವತಿಯಿಂದ ಮನವಿ ಮಾಡಲಾಯಿತು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ತಾಲ್ಲೂಕು ಅಧ್ಯಕ್ಷರಾದ ಸುಭಾಷ ರಗಟೆ. ರಾಜ್ಯ ಉಪಾಧ್ಯಕ್ಷರಾದ ಚಂದ್ರಶೇಖರ ಜಮಖಂಡಿ. ಜಿಲ್ಲಾ ಅಧ್ಯಕ್ಷರಾದ ಶ್ರೀ ಮಂತ ಬಿರಾದಾರ. ಜಿಲ್ಲಾ ಗೌರವಾಧ್ಯಕ್ಷ ಸಿದ್ರಾಮಪ್ಪ ಅಣದೂರೆ. ತಾಲ್ಲೂಕ ಪ್ರಧಾನ ಕಾರ್ಯದರ್ಶಿ ರೇವಣಸಿದ್ದಪ್ಪ ಚಿಕನಾಗಾಂವ. ರೈತ ಮುಖಂಡರಾದ ಜಯಪ್ರಕಾಶ ಸದಾನಂದೆ. ಸಿದಾಣಟಿಜಜಜಿಟಿಜಜಮಪ ಬಾಲಕುಂದೆ. ವಿಠ್ಠಲ ಸೋನಾರ್. ದಯಾನಂದ್ ಹಳ್ಳೆ. ಮಹಾರಾಜಪ ಮುಳೆ. ಸೋಮಶೇಖರ ಚಿತ್ತಕೊಟ. ಮನೋಹರ ಪಾಟೀಲ. ಯಶವಂತ ಪಾಟೀಲ. ಪ್ರಶಾಂತ ಲಕಮಾಜಿ. ಚಂದ್ರಕಾಂತ ಮೊಳಕೆರೆ ಸೇರಿದಂತೆ ಅನೇಕರು ರೈತ ಮುಖಂಡರು ಉಪಸ್ಥಿತರಿದ್ದರು.

# ಸಾಹಿತ್ಯ ಸಾಮ್ರಾಟ ಲೋಕಶಾಹಿರ ಅಣ್ಣಾಭಾವು ಸಾಠೆ ಅವರ 57 ನೇ ಪುಣ್ಯ ಸ್ಮರಣೋತ್ಸವ

• ಮಲ್ಲಮ್ಮ ನುಡಿ ವಾರ್ತೆಬಸವಕಲ್ಯಾಣ



ತಾಲೂಕಿನ ತಳಭೋಗ ಗ್ರಾಮದಲ್ಲಿ ಸಾಹಿತ್ಯಸಾಮಾಣಟಿಜಜಜಿಟಿಜಜಟ್ ಲೋಕಶಾಹಿರ ಅಣ್ಣಾಭಾವುಸಾಠೆ ಅವರ 57 ನೇಯ ಪುಣ್ಯ ಸ್ಮರಣೋತವ ಕಾರ್ಯಕ್ರಮ ಜರುಗಿತು. ಮಾಜಿ ಗ್ರಾಮ ಪಂಚಾಯತ ಸದಸ್ಯರಾದ ಬಾಬುರಾವ ಗಾಯಕವಾಡ ಅವರು ಅಣ್ಣಾಭಾವುಸಾಠೆ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ವಿಷ್ಣು ಜೂಗದಂಡ. ಶಾಮ ಸಸಾನೆ. ಧನವಾನ ಸಸಾನೆ. ಸಚಿನ ಸೊನಕೆ. ಅನರಾಘ ಸೊನಕೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸಾರ್ವಜನಿಕರ ಪಾಲ್ಗೊಳ್ಳುವಿಕೆ ಅತ್ಯಂತ ಅವಶ್ಯಕ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ



ಸಾಮಾಜಿಕ ಪರಿಶೋಧನೆಯ ಗ್ರಾಮ ಸಭೆಯು ಸರ್ಕಾರಿ ಯೋಜನೆಗಳ ಅನುದಾನಗಳ ಬಳಕೆ ಮತ್ತು ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಗ್ರಾಮಸ್ಥರೆಲ್ಲರ ಸಮ್ಮುಖದಲ್ಲಿ ನಡೆಯುವ ಒಂದು ಪಾರದರ್ಶಕ ಪರಿಶೀಲನೆಯಾಗಿದ್ದು, ಇದರಲ್ಲಿ ಸಾರ್ವಜನಿಕರ ಪಾಲ್ಗೊಳ್ಳುವಿಕೆ ಅತ್ಯಂತ ಮಹತ್ವದಾಗಿದೆ ಎಂದು ಸಾಮಾಜಿಕ ಲೆಕ್ಕ ಪರಿಶೋಧನೆಯ ತಾಲ್ಲೂಕು ಸಂಯೋಜಕ ಪ್ರಕಾಶ ಮುಸ್ಕೆ ಹೇಳಿದರು.

ತಾಲ್ಲೂಕಿನ ಬಾಳೂರ ಗ್ರಾಮ ಪಂಚಾಯಿತಿಯಲ್ಲಿ ಶನಿವಾರ ಜರುಗಿದ 2026–27ನೇ ಸಾಲಿನ ನರೇಗಾ ಯೋಜನೆ, 15ನೇ ಹಣಕಾಸು ಹಾಗೂ ರಾಜ್ಯ ಹಣಕಾಸು ಹಾಗೂ ವಿವಿಧ ಅನುಷ್ಠಾನ ಇಲಾಖೆಗಳಡಿ ಸೃಜನೆಯಾಗಿರುವ ವಿವಿಧ ಕಾಮಗಾರಿಗಳ ಸಾಮಾಜಿಕ ಲೆಕ್ಕ ಪರಿಶೋಧನೆಯ ಗ್ರಾಮಸಭೆಯಲ್ಲಿ ಅವರು ಮಾತನಾಡಿದರು.

2026–27ನೇ ಸಾಲಿನಲ್ಲಿ ಬಾಳೂರ ಗ್ರಾಮ ಪಂಚಾಯಿತಿಯಲ್ಲಿ 67 ವೈಯಕ್ತಿಕ ಹಾಗೂ 31 ಸಮುದಾಯ ನರೇಗಾ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಗ್ರಾಮದಲ್ಲಿ ಕೈಗೊಂಡಿರುವ ಕಾಮಗಾರಿಗಳು, ಅವುಗಳಿಗೆ ತಗುಲಿದ ವೆಚ್ಚ ಮತ್ತು ಫಲಾನುಭವಿಗಳ ವಿವರಗಳನ್ನು ಗ್ರಾಮಸ್ಥರ ಮುಂದಿಡುವುದರಿಂದ ಆಡಳಿತದಲ್ಲಿನ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಖಚಿತಪಡಿಸುತ್ತದೆ ಎಂದರು.

ವಿಬಿಜಿ ರಾಮ್ ಜಿ ಯೋಜನೆಯ ತಾಲ್ಲೂಕು ಐಇಸಿ ಸಂಯೋಜಕ ಗಣಪತಿ ಮಾತನಾಡಿ, ನರೇಗಾ ಯೋಜನೆಯ ಬದಲಾಗಿ ಜುಲೈ 1 ರಿಂದ ವಿಕಸಿತ ಭಾರತ–ಗ್ಯಾರಂಟಿ ಫಾರ್ ರೋಜ್ಗಾರ್ ಮತ್ತು ಆಜೀವಿಕಾ ಮಿಷನ್ (ಗ್ರಾಮೀಣ) ವಿಬಿ–ಜಿ ರಾಮ್ ಜಿ ಯೋಜನೆ ಅನುಷ್ಠಾನಗೊಂಡಿದ್ದು, ಈ ಯೋಜನೆಯಲ್ಲಿ ದಿನಗೂಲಿ ಮೊತ್ತ ?370/– ರಿಂದ ?382/– ರೂ. ಗೆ ಹೆಚ್ಚಿಸಿದ್ದು, ವಾರ್ಷಿಕ ಮಾನವ ದಿನಗಳು 100 ರಿಂದ 125 ದಿನಗಳಿಗೆ ಹೆಚ್ಚಳ ಮಾಡಲಾಗಿದೆ.

ಒಂದು ಗ್ರಾಮೀಣ್ ರೋಜ್ಗಾರ್ ಗ್ಯಾರಂಟಿ ಕಾರ್ಡ್ ಗೆ ಒಂದು ವರ್ಷಕ್ಕೆ 47,750 ರೂ ಗಳಿಸಲು ಅವಕಾಶ ಉಂಟು. ನಮೂನೆ 6ನ್ನು ಭರ್ತಿ ಮಾಡಿ ಗ್ರಾಮ ಪಂಚಾಯಿತಿಗೆ ಕೆಲಸದ ಬೇಡಿಕೆ ಸಲ್ಲಿಸಿ ಎಂದರು.

ಪಿಡಿಒ ಜಿತೇಂದ್ರ ಅವರು ಮಾತನಾಡಿದರು.

ಕಾಯಕ ಮಿತ್ರ ನಾಗೀಣಾ, ಮಹಿಳಾ ಕಾಯಕ ಬಂಧುಗಳು, ಗ್ರಾಮದ ಪ್ರಮುಖರು ಹಾಗೂ ಗ್ರಾಮ ಪಂಚಾಯಿತಿ ಸಿಬ್ಬಂದಿ ಸಭೆಯಲ್ಲಿ ಹಾಜರಿದ್ದರು.

# ಕಲಾ ವಿಭಾಗದ ಪ್ರವೇಶಾತಿ ಆರಂಭ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಜು.20 : 2026–27ನೇ ಶೈಕ್ಷಣಿಕ ಸಾಲಿನಲ್ಲಿ ಸೇಡಂ ಪಟ್ಟಣದಲ್ಲಿ ಹೊಸದಾಗಿ ಆರಂಭವಾಗಿರುವ ಸರಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ ವಿಜ್ಞಾನ ಮತ್ತು ಕಲಾ ವಿಭಾಗಗಳ ಪ್ರವೇಶಾತಿ ಪ್ರಕ್ರಿಯೆ ಆರಂಭವಾಗಿದೆ ಎಂದು ಕಾಲೇಜಿನ ಪ್ರಾಚಾರ್ಯರಾದ ಡಾ. ಸಿದ್ದಲಿಂಗ ಶಕಾಪೂರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕಾಲೇಜಿನಲ್ಲಿ ಈಗಾಗಲೇ ವಾಣಿಜ್ಯ ವಿಭಾಗವನ್ನು ಪ್ರಾರಂಭಿಸಲಾಗಿದ್ದು, 11 ವಿದ್ಯಾರ್ಥಿನಿಯರು ಪ್ರವೇಶ ಪಡೆದಿದ್ದಾರೆ. ಕಳೆದ ಒಂದು ತಿಂಗಳಿನಿಂದ ಇವರಿಗೆ ಯಶಸ್ವಿಯಾಗಿ ತರಗತಿಗಳು ನಡೆಯುತ್ತಿವೆ.

# ಅಂಕಪಟ್ಟಿ ಕಳೆದಿದೆ

ನಾನು ರುಬಿಯ ಅಬ್ದುಲ್ ಖದರ್ ಸಾ.ನರೇಗಾರ್ ಗಲ್ಲಿ ಬಸವಕಲ್ಯಾಣ ಜಿಲ್ಲೆ ಬೀದರ ಆದ ನಾನು 5–7–2026 ರಂದು ಬೆಳಿಗ್ಗೆ 9:47 ಕ್ಕೆ ಬಸವಕಲ್ಯಾಣದ ಬಸ್ ನಿಲ್ದಾಣದಲ್ಲಿ ನನ್ನ ಅಂಕ ಪಟ್ಟಿ ಕಳೆದಿದೆ. ಎಸ್.ಎಸ್.ಎಲ್.ಸಿ ಅಂಕಪಟ್ಟಿ ಸಂಖ್ಯೆ : 20050121300 ಆಗಿರುತ್ತದೆ. ಆದ ಕಾರಣ ಯಾರಿಗಾದರೂ ಈ ಅಂಕಪಟ್ಟಿಯನ್ನು ದೂರಕಿದರೆ. ಈ ಮೊಬೈಲ್ ನಂಬರಗೆ 8861251280. ಸಂಪರ್ಕಿಸಿ.

**CITATION**

**IN THE COURT OF III ADDL.J.M.F.C AT KALABURAGI**

**Crl.Misc.No.3312/2026**

1.Smt.Mahananda W/o Late Baburao Kottargi, Age:49 Years, Occ: Household

2.Smt.Rekhabai W/o Late Suryakant Kottargi, Age:60 Years, Occ: Household

3.Smt.Shivamma W/o Late Chandrakant Kottargi, Age:55 Years, Occ: Household

All R/o: Gunj Road, Shivaji Nagar, Kalaburagi

(Chowk Police Station Kalaburagi)

**...Petitioners**

**...V/s...**

**The Registrar Birth and Death Office, Kalaburagi Mahanagar Palike Kalaburagi**

**...Respondent**

**Petition U/Sec.13(3) of Birth & Death Registration Act**

**To**

**All concerned**

Whereas, the above petitioners have filed a petition against the respondent for getting the order from court to obtain the Death Certificate of their mother-in-law of petitioner No.1 to 3 by name Late GUJJAMMA W/O HANUMANTH RAO, was expired on 13/04/2022 it is natural death in the house which is belongs to the house of petitioners.

Whereas, the summons issued by the court to the all concerned, any interested persons are hereby appear before the Hon'ble Court in person or through a pleader duly instructed on 28/08/2026 at about 11.00 AM, failing which the matter will be heard and decided in your absence on merits.

Given my hand and seal of this court, this the day 18th day of July, 2026 at Kalaburagi.

**By order of the court**

**Lakkappa R.Gadekar,**

**Advocate for petitioners**

**Chief Ministerial Officer,III Addl.J.M.F.C Kalaburagi**

# ಹೃದಯ ಮಂಟಪ ಧರ್ಮದೀಪದಿಂದ ಬೆಳಗುತ್ತಿರಲಿ ಹಾರಕೂಡ ಶ್ರೀ



• ಮಲ್ಲಮ್ಮ ನುಡಿ ವಾರ್ತೆಬಸವಕಲ್ಯಾಣ

ನಮ್ಮ ಹೃದಯ ಮಂಟಪ ಗುರುಪ್ರಜ್ವಲಿತಧರ್ಮದೀಪದಿಂದ ಬೆಳಗುತ್ತಿದ್ದರೆ ಇಡೀ ಬದುಕೆ ಬೆಳಕಿನಿಂದ ಕೂಡಿದ ಸಹಜ ದೀಪಾವಳಿಯಾಗಿಕಂಗೊಳಿಸುತ್ತದೆ ಎಂದು ಹಾರಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ನುಡಿದರು.

ತಾಲೂಕಿನ ಹಾರಕೂಡ ಶ್ರೀ ಮಠದಲ್ಲಿ ಗುರುವಂದನೆ ನಿಮಿತ್ಯ ಆಯೋಜಿಸಿದ ಧರ್ಮ ಸಭೆಯ ಪಾವನಸಾನಿಧ್ಯವಹಿಸಿಮಾತನಾಡಿದ ಶ್ರೀಗಳು, ಗುರು ಎಂದರೆ ಬೆಳಕು, ಹಾಗಾಗಿ ಗುರುವಿನ ಸಾನಿಧ್ಯಕ್ಕೆ ಭಕ್ತಿ ಶ್ರದ್ಧೆಯಿಂದ ಬರುವವರು ಬೆಳಕಿನ ಅಂದರೆ ಸುಜ್ಞಾನದ ಅನುಭೂತಿ ಪಡೆಯುತ್ತಾರೆ.

ಗುರುವಿನ ವಾಣಿಯಂತೆ ಯಾರು ತಮ್ಮ ಬದುಕಿನ ವೀಣೆಯನ್ನು ಮೀಟುವವರೊ ಅಂಥವರು ಶ್ರೇಯಸ್ಸಿನ ಪರ್ವ ತಮ್ಮದಾಗಿಸಿಕೊಳ್ಳುತ್ತಾರೆ.

ಹಾರಕೂಡಶ್ರೀಪೀಠ ಸರ್ವರಿಗೂ ಸನ್ಮಂಗಳ ಪ್ರಭಾವಳಿ ಬೀರಲಿ ಎಂದು ಶುಭ ಹಾರೈಸಿದರು.

ಎಂ. ಬಿ. ಮರಮಕಲ್ ದೇಶಮುಖ,ಜಿಲ್ಲಾ ಪಂಚಾಯಿತಿ ನಿವೃತ್ತಉಪಕಾರ್ಯದರ್ಶಿಗಳಾದ ಬಿ. ಕೆ. ಹಿರೇಮಠ, ಮಲ್ಲಿನಾಥ ಹಿರೇಮಠಹಾರಕೂಡ,ಮೇಘರಾಜ ನಾಗರಾಳೆ,ಸಿದ್ರಾಮಪ್ಪ ಗುದಗೆ, ಪಿ. ಕೆ. ಹಿರೇಮಠ ಅಕ್ಕಮ್ಮ ಮರಮಕಲ್,ಸಂಜನಾಮರಮಕಲ್ ಚನ್ನಬಸವರೆಡ್ಡಿ ಮರಮಕಲ್ ಸೇರಿದಂತೆಅನೇಕರುಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಎಂ. ಬಿ. ಮರಮಕಲ್ ದೇಶಮುಖ ಪರಿವಾರದವತಿಯಿಂದಹಾರಕೂಡ ಶ್ರೀಗಳ 1015ನೇ ತುಲಾಭಾರ ಜರುಗಿತು.

ಕಾರ್ತಿಕಸ್ವಾಮಿ ಯಲದಗುಂಡಿ ಪ್ರಾರ್ಥನಾ ಗೀತೆ ಹಾಡಿದರು.

# ಎಸ್‌ಐಆರ್ ಪ್ರಕ್ರಿಯೆಯಲ್ಲಿ ಎಲ್ಲ ಮತದಾರರೂ ಭಾಗಿಯಾಗಬೇಕು: ಮಾಜಿ ಮೇಯರ್ ರಾಜೇಶ್ವರಿ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ಚುನಾವಣಾ ಆಯೋಗದ ಮತದಾರರಪಟ್ಟಿಯ ವಿಶೇಷಸಮಗ್ರ ಪರಿಷ್ಕರಣೆಯಲ್ಲಿ (ಎಸ್‌ಐಆರ್) ಎಲ್ಲ ಮತದಾರರು ಸಕ್ರಿಯರಾಗಿ ಪಾಲ್ಗೊಳ್ಳಬೇಕೆಂದುಮಾಜಿಮೇಯರ್, ಪಾಲಿಕೆಯ ಸದಸ್ಯೆ ಎಂ.ರಾಜೇಶ್ವರಿ ಅಭಿಪ್ರಾಯಪಟ್ಟಿದ್ದಾರೆ.ಸೋಮವಾರ ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿಯವರ ಮಾರ್ಗದರ್ಶನದಲ್ಲಿ ತೆರೆಯಲಾಗಿರುವ ಎಸ್‌ಐಆರ್ ಸಹಾಯ ಕೇಂದ್ರಕ್ಕೆ ಭೇಟಿ ನೀಡಿ ಸ್ವಯಂ ಸೇವಕರಿಂದ ಮಾಹಿತಿ ಪಡೆದ ನಂತರ ಈ ಕುರಿತು ಅವರು ಪತ್ರಿಕಾ ಹೇಳಿಕೆಯನ್ನು ಬಿಡುಗಡೆ ಮಾಡಿದ್ದಾರೆ.

ಮತದಾನದ ಹಕ್ಕು ಸಾಂವಿಧಾನಿಕ ಹಕ್ಕಾಗಿದ್ದು ಎಸ್‌ಐಆರ್ ಸಮೀಕ್ಷೆಯಲ್ಲಿ ನಾಗರಿಕರೆಲ್ಲರೂ ಭಾಗವಹಿಸುವ ಮೂಲಕ ಅಂತಿಮ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಉಳಿಸಿಕೊಳ್ಳಬೇಕು ಎಂದಿದ್ದಾರೆ.

ಚುನಾವಣಾ ಆಯೋಗದ ವತಿಯಿಂದ ಬರುವ ಬೂತ್ ಮಟ್ಟದ ಅಧಿಕಾರಿಗಳಿಗೆ ನಾಗರಿಕರು ಸಹಕರಿಸಬೇಕು, ಎನುಮರೇಶನ್ ಫಾರಂಗಳನ್ನು ಪಡೆದು ಸರಿಯಾದ ಮಾಹಿತಿ ತುಂಬಿ ಅಥವಾ ತುಂಬಿಸಿ ಬಿಎಲ್‌ಒ ಅವರಿಗೆ ನೀಡಬೇಕು ಎಂದು ಹೇಳಿರುವ ಅವರು, ಯಾವುದೇ ನಾಗರಿಕರು ಈ ಬಗ್ಗೆ ನಿರ್ಲಕ್ಷ್ಯ ವಹಿಸಬಾರದು ಎಂದು ಹೇಳಿದ್ದಾರೆ.ನಗರದ ರಾಘವೇಂದ್ರ ಟಾಕೀಸನ ಕಟ್ಟಡದಲ್ಲಿ ನಗರ ಶಾಸಕರು ಚುನಾವಣಾ ಆಯೋಗದ ನಿಯಮಗಳನ್ನು ಗಮನದಲ್ಲಿಟ್ಟುಕೊಂಡು ಸಹಾಯ ಕೇಂದ್ರ ಆರಂಭಿಸಿದ್ದಾರೆ, ಎನುಮರೇಶನ್ ಫಾರಂ ಭರ್ತಿ ಸಬಂಧ ಅಗತ್ಯ ಸಹಾಯ ಬೇಕಾದ ನಾಗರಿಕರು ಇಲ್ಲಿಗೆ ಭೇಟಿ ನೀಡಬಹುದು, ಸಹಾಯ ಕೇಂದ್ರ ಅತ್ಯುತ್ತಮವಾಗಿ ಕಾರ್ಯ ನಿರವಹಿಸುತ್ತಿದೆ ಎಂದು ಪ್ರಶಂಸಿಸಿದ್ದಾರೆ.

ಈ ಸಂದರ್ಭ ಕಂಟ್ರೋಲ್ ರೂಮ್‌ನ ಉಸ್ತುವಾರಿ ಗೌತಮ್ ಎಸ್ ಅವರಿಂದ ಕಂಟ್ರೋಲ್ ರೂಮ್‌ನ ಕಾರ್ಯ ನಿರ್ವಹಣೆ ಕುರಿತು ಮಾಹಿತಿ ಪಡೆದರು.

ಯರಗುಡಿ ಸೋಮಣ್ಣ, ಸುಬ್ಬರಾಯುಡು ಮತ್ತಿತರರು ಹಾಜರಿದ್ದರು.

ಕರ್ನಾಟಕ ಸರ್ಕಾರ

ಅರಣ್ಯ ಇಲಾಖೆ

**ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಪ್ರಾದೇಶಿಕ ಅರಣ್ಯ ಉಪ–ವಿಭಾಗ, ಬಸವಕಲ್ಯಾಣ**

ಸಂಖ್ಯೆ:ಸಅಸಂ/ಉವಿಕ/ಘಾಟಬೋರಳ & ಎನ್.ಹೆಚ್–65/ಮ.ಕ/ಆಕ್ಷೇಪಣೆ/ಸಿಆರ್–/2026–27

ದಿನಾಂಕ: 20.07.2026

**ಸಾರ್ವಜನಿಕ ಪ್ರಕಟಣೆ**

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತಿಳಿಯಪಡಿಸುವುದೇನೆಂದರೆ, (1) ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನ ರಾಜ್ಯ ಹೆದ್ದಾರಿ–196ರ ಬಾಜೋಳಗಾ–ಹಳ್ಳಿಖೇಡ (ಕೆ) ರಸ್ತೆಯ ಕಿ.ಮೀ. 12.10 ರಿಂದ 13.20 ರವರೆಗಿನ ಘಾಟಬೋರಳ ಗ್ರಾಮದ ವ್ಯಾಪ್ತಿಯ ರಸ್ತೆಯಲ್ಲಿ ಇರುವ ಒಟ್ಟು 79 ವಿವಿಧ ಜಾತಿಯ ಮರಗಳನ್ನು ತೆರವುಗೊಳಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಪ ವಿಭಾಗ, ಹುಮನಾಬಾದ ಇವರು ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯ ಮೇರೆಗೆ ಸ್ಥಳ ಪರಿಶೀಲನೆ ನಡೆಸಲಾಗಿದ್ದು, ಸದರಿ ಹುಮನಾಬಾದ ತಾಲ್ಲೂಕಿನ ರಾಜ್ಯ ಹೆದ್ದಾರಿ–196ರ ಬಾಜೋಳಗಾ–ಹಳ್ಳಿಖೇಡ (ಕೆ) ರಸ್ತೆಯ ಕಿ.ಮೀ. 12.10 ರಿಂದ 13.20ರವರೆಗಿನ ಘಾಟಬೋರಳ ಗ್ರಾಮದ ವ್ಯಾಪ್ತಿಯಲ್ಲಿ ರಸ್ತೆ ಅಗಲೀಕರಣ ಕಾಮಗಾರಿ ಮಂಜೂರಾಗಿರುವುದು ದೃಢಪಟ್ಟಿದೆ. ಈ ಕಾಮಗಾರಿಯನ್ನು ಕೈಗೊಳ್ಳಲು ರಸ್ತೆಯ ವ್ಯಾಪ್ತಿಯಲ್ಲಿರುವ ವಿವಿಧ ಜಾತಿಯ ಒಟ್ಟು 79 ಮರಗಳನ್ನು ಕಟಾವು ಮಾಡಲು ಮತ್ತು (2)ಹುಮನಾಬಾದ ಪಟ್ಟಣದ ರಾಷ್ಟ್ರೀಯ ಹೆದ್ದಾರಿ–65ರ chainage-389+835 to 391+120 LVUP (Ram and Raj College) ಕಲ್ಲೂರ ಕ್ರಾಸ್ ಹತ್ತಿರದಲ್ಲಿರುವ ಹೆದ್ದಾರಿಯ ನಿಲ್ದಾಣದಿಂದ ರಾಮ & ರಾಜ್ ಕಾಲೇಜುವರೆಗಿನ ರಸ್ತೆ ಸುಧಾರಣೆ ಮತ್ತು ಮೇಲ್ ಸೇತುವೆ ನಿರ್ಮಾಣಕ್ಕಾಗಿ ಅಡ್ಡಲಾಗಿ ಬರುವ ಎಡಬದಿ ಮತ್ತು ಬಲಬದಿ ಮರಗಳ ಅಳತೆ ಪಟ್ಟಿಯಲ್ಲಿ ಸೂಚಿಸಿದಂತೆ, Project Director, PIU Kalburgi ರವರು ತಮ್ಮ ಕಛೇರಿಗೆ ಪತ್ರಬರೆದು Long-term rectification of MoRTH identified black spots- under the project of Maharashtra Border- Sangareddy-of NH-65 (old NH-09) from Km-352-188 to 149.174 in the states of Karnataka and Telangana "on EPC mode- Request for tree felling permission at black spots locations ತಿಳಿಸಿರುವಂತೆ ರಾಷ್ಟ್ರೀಯ ಹೆದ್ದಾರಿ–65ರ ಕಲ್ಲೂರ ಕ್ರಾಸ್ ಹತ್ತಿರದ ಹೆದ್ದಾರಿ ನಿಲ್ದಾಣದಿಂದ ರಾಮ & ರಾಜ್ ಕಾಲೇಜುವರೆಗಿನ ಒಟ್ಟು ಉದ್ದ –1265 ಮೀಟರ್‌ಗಳಷ್ಟಿದ್ದು ಇಲ್ಲಿಯ ರಸ್ತೆ ಅಗಲಿಕರಣ ಮತ್ತು ಮೇಲ್ ಸೇತುವೆ ನಿರ್ಮಾಣದ ಕಾರ್ಯಕ್ಕಾಗಿ ಅಡ್ಡಲಾಗಿ ಬರುವ ಎಡಬದಿಯಲ್ಲಿ chainage-389+835 to 391+120 LVUP (Ram and Raj College) ವರೆಗಿನ ಒಟ್ಟು–55 ವಿವಿಧ ಜಾತಿಯ ಮರಗಳು ಮತ್ತು ಬಲಬದಿಯಲ್ಲಿ ಒಟ್ಟು–45 ವಿವಿಧ ಜಾತಿಯ ಮರಗಳು ಬರುತ್ತಿದು ಹೀಗೆ ಒಟ್ಟು=100 ಮರಗಳ ಕಟಾವಣೆ ನಿಯಮಾನುಸಾರ ಮಾಡಬೇಕಾಗಿರುತ್ತದೆ. ಆದ್ದರಿಂದ, ಸದರಿ 79 ಮತ್ತು 100 ಒಟ್ಟು=179 ಮರಗಳ ಕಟಾವಣೆಗೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ದಿನಾಂಕ 30.07.2026 ರೊಳಗಾಗಿ ಕಚೇರಿ ವೇಳೆಯಲ್ಲಿ ಕೆಳಕಂಡ ಅಧಿಕಾರಿಯನ್ನು ಸಂಪರ್ಕಿಸಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಸಲ್ಲಿಸಬಹುದಾಗಿದೆ. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಾದೇಶಿಕ ಅರಣ್ಯ ಉಪ ವಿಭಾಗ, ಬಸವಕಲ್ಯಾಣ. ಮೊ.ನಂ: +91 9448582473 ಇ–ಮೇಲ್: acfbasavakalyan@gmail.com.

**ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ಅರಣ್ಯ ಉಪ–ವಿಭಾಗ, ಬಸವಕಲ್ಯಾಣ.**

ವಾ.ಸಾ.ಸಂ.ಇ/ಬೀದರ/88/ಕೆ.ಎಸ್.ಎಂ.ಸಿ.&ಎ/2026–27

**IN THE COURT OF THE PRL CIVIL JUDGE AND JMFC AT BASAVAKALYAN**

**Crl Misc No. 1368/2026**

**Petitioners ...**

Basavaraj and others

Vs

**Respondent ...**

**The Commissioner CMC Basavakalyan**

**PETITION U/SEC 13(3) OF BIRTH AND DEATH REGISTRATION ACT 1969 PAPER PUBLICATION**

Whereas the above named petitioner has filed petition under section 13(3) of Birth & Death Registration Act 1969 for issue the direction to respondent to give death certificate of petitioners Mother by name "Ratnamma W/o Shivasharanappa", who was died on 20/01/2014, in the house at Shahapur Galli, Basavakalyan Tq: Basavakalyan, Dist: Bidar.

Hence this paper publication is issued to all concerned person to file necessary objection if any on29/08/2026 at 11:00 A.M.

Given under my hand seal of the court on this 18/07/2026

**// By order of the court//**

**Chief Ministerial officer**

**Prl.Civil Judge & JMFC Court Basavakalyan.**

**IN THE COURT OF THE PRL CIVIL JUDGE AND JMFC AT BASAVAKALYAN**

**Crl Misc No. 1369/2026**

**Petitioners ...**

Basavaraj and others

Vs

**Respondent ...**

**The Commissioner CMC Basavakalyan**

**PETITION U/SEC 13(3) OF BIRTH AND DEATH REGISTRATION ACT 1969 PAPER PUBLICATION**

Whereas the above named petitioner has filed petition under section 13(3) of Birth & Death Registration Act 1969 for issue the direction to respondent to give death certificate of petitioners Father by name "Shivasharanappa S/o Gundappa", who was died on 23/11/2013, in the house at Shahapur Galli, Basavakalyan Tq: Basavakalyan, Dist: Bidar.

Hence this paper publication is issued to all concerned person to file necessary objection if any on 29/08/2026 at 11:00 A.M.

Given under my hand seal of the court on this 18/07/2026

**// By order of the court//**

**Chief Ministerial officer**

**Prl Civil Judge & JMFC Court Basavakalyan.**

# ಜಿಲ್ಲಾ ಪದಾಧಿಕಾರಿಗಳ ಸಭೆ ಆಯೋಜನೆ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಕರ್ನಾಟಕ ರಾಜ್ಯ ಶ್ರಮಜೀವಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸೇವಾ ಸಂಘ(ರಿ )ಯಾದಗಿರಿ ಜಿಲ್ಲಾ ಘಟಕ ವತಿಯಿಂದ ನಡೆದ ರಾಜ್ಯಧ್ಯಕ್ಷ ಶಿವಕುಮಾರ್ ಗೌಡ ಮಾರ್ಗದರ್ಶನ ಮೇರೆಗೆ ಮತ್ತು ಜಿಲ್ಲಾಧ್ಯಕ್ಷರ ನೇತೃತ್ವದಲ್ಲಿ ಜಿಲ್ಲಾ ಪದಾಧಿಕಾರಿಗಳ ಸಭೆಯನ್ನು ಆಯೋಜಿಸಲಾಯಿತು. ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಸಿಕ್ತಕಂತ ಸೌಲಭ್ಯಗಳು ಕುರಿತು ಚರ್ಚಿಸಲಾಯಿತು, ಜಿಲ್ಲೆ ಕಾರ್ಮಿಕರಿಗೆ ಸೌಲಭ್ಯಗಳನ್ನು ತಲುಪಿಸುವ ಕುರಿತು ಸಭೆಯನ್ನು ಯಶಸ್ವಿಗೊಳಿಸಲಾಯಿತು, ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷ ಭೀಮರಾಯ, ಜಿಲ್ಲಾ ಗೌರವಾಧ್ಯಕ್ಷ ಹುಲುಗಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬೊಜು, ಜಂಟಿ ಕಾರ್ಯದರ್ಶಿ ಬಾಬು, ಸಂಘಟನೆ ಕಾರ್ಯದರ್ಶಿ ರಮೇಶ್ ವಿಶ್ವಕರ್ಮ, ದುರ್ಗಪ್ಪ ವಿಕಾಸ್, ಆಸಿಮ್ ಪಟೇಲ್ ಮತ್ತು ಇನ್ನಿತರ ಕಾರ್ಮಿಕರಿದ್ದರು.

# ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ 23ರಂದು ಜಿಲ್ಲಾಧಿಕಾರಿ ಕಚೇರಿ ಎದುರು ಬೃಹತ್ ಪ್ರತಿಭಟನೆ

• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್



ನೀಟ್ ಪರೀಕ್ಷೆ ಪ್ರಶ್ನೆಪತ್ರಿಕೆ ಸೋರಿಕೆ ಸೇರಿದಂತೆ ದೇಶದಲ್ಲಿ ನಡೆಯುತ್ತಿರುವ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ ಅಕ್ರಮಗಳನ್ನು ಖಂಡಿಸಿ, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಹಾಗೂ ಅವರನ್ನು ಕೇಂದ್ರ ಸಚಿವ ಸಂಪುಟದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ವತಿಯಿಂದ ಜುಲೈ 23ರಂದು ಯಾದಗಿರಿ ಜಿಲ್ಲಾಧಿಕಾರಿ ಕಚೇರಿ ಎದುರು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಪ್ರತಿಭಟನೆಯ ಬಳಿಕ ಜಿಲ್ಲಾಧಿಕಾರಿಗಳ ಮೂಲಕ ಮಾನ್ಯ ಪ್ರಧಾನಮಂತ್ರಿಗಳಿಗೆ ಮನವಿ ಸಲ್ಲಿಸಲಾಗುವುದು. ಈ ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಮುಖಂಡರು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಗುರುಮಠಕಲ್ ತಾಲ್ಲೂಕು ಸಂಚಾಲಕ ರಂಗಸ್ವಾಮಿ ಕೊಂಕಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸೋಮನಾಥ ದೊಟಿಹಾಳಗೆ ರಾಜ್ಯಮಟ್ಟದ ಮೈತ್ರಿ ರತ್ನ ಪ್ರಶಸ್ತಿ ಪ್ರದಾನ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ತಾಲೂಕಿನ ದೊಟಿಹಾಳ ಗ್ರಾಮದ ಯುವ ಸಾಹಿತಿ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದಿರುವ ಸೋಮನಾಥ ದೋಟಿಹಾಳ ಅವರಿಗೆ ರಾಜ್ಯಮಟ್ಟದ ಮೈತ್ರಿ ರತ್ನ ಪ್ರಶಸ್ತಿ ಪ್ರಧಾನ ಮಾಡಿ ಗೌರವಿಸಲಾಗಿದೆ. ರಾಜಧಾನಿ ಬೆಂಗಳೂರು ಮಹಾನಗರದ ಕೆಂಪೇಗೌಡ ನಗರದ ಉದಯಬಾನು ಕಲಾ ಭವನದಲ್ಲಿ ಮೈತ್ರಿ ಕಲಾತಂಡ ಬೆಂಗಳೂರು ಅವರ 18ನೇ ವರ್ಷದ ವರ್ಷಕೊತ್ಸವದ ಅಂಗವಾಗಿ ಕ್ಷೇತ್ರಗಳಲ್ಲಿ ಸಾಧನೆಗೈದ ಹಾಗೂ ಸಾಧನೆ ಮಾಡುತ್ತಿರುವ ಸಾಧಕರಿಗೆ ರಾಜ್ಯಮಟ್ಟದ ಪ್ರಶಸ್ತಿ ಪ್ರಧಾನ ಸಮಾರಂಭ ಜರುಗಿದ್ದು.

2026 27 ನೇ ಸಾಲಿನ ರಾಜ್ಯಮಟ್ಟದ ಮೈತ್ರಿ ರತ್ನ ಪ್ರಶಸ್ತಿಗೆ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ದೋಟಿಹಾಳ ಗ್ರಾಮದ ಯುವ ಬರಹಗಾರ, ಸಾಹಿತಿ ಸೋಮನಾಥ ದೋಟಿಹಾಳ ಅವರು ಭಾಜನರಾಗಿದ್ದು. ಭಾನುವಾರ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಸೋಮನಾಥ ದೂಟಿಹಾಳ ಅವರು ಸುಮಾರು 20 ವರ್ಷಗಳ ಕಾಲಕ್ಕೂ ಹೆಚ್ಚು ಯಾವುದೇ ಪ್ರಚಾರ ಬಯಸದೆ ಎಲೆ ಮರೆಕಾಯಿಯಂತೆ ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಒಂದು ಕವಿತಾ ಸಂಕಲನ, ಸಂಪಾದನ ಕೃತಿ, ಸೇರಿದಂತೆ ನಾಡಿನ ಹಲವಾರು ದಿನಪತ್ರಿಕೆ, ಮಾಸಪತ್ರಿಕೆ ಗಳಲ್ಲಿ ಅನೇಕ ಮೌಲಿಕ ಬರಹಗಳು ಪ್ರಕಟ ಗೊಂಡಿವೆ. ಸೋಮನಾಥ ದೋಟಿಹಾಳ ಅವರು ತಾಲೂಕು, ಜಿಲ್ಲೆ, ವಿಭಾಗ ಮತ್ತು ರಾಜ್ಯ ಮಟ್ಟಗಳ ಅನೇಕ ಸಾಹಿತ್ತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಸೋಮನಾಥ ದೋಟಿಹಾಳ ಅವರು ರಾಜ್ಯಮಟ್ಟದ ಪ್ರಶಸ್ತಿಗೆ ಭಾಜನರಾಗಿದ್ದಕ್ಕೆ ಅವರ ಸ್ನೇಹ ಬಳಗ, ಮತ್ತು ಗ್ರಾಮಸ್ಥರು ಸಂತಸ ವ್ಯಕ್ತಪಡಿಸಿದ್ದಾರೆ. ಕಾರ್ಯಕ್ರಮದಲ್ಲಿ ಗಣರಾಜ್ಯ ಡಾ. ಸಿ.ಆರ್ ಪರಶುರಾಮ್ ಚೌಟಗಿ, ಡಾ.ರವಿಶೆಟ್ಟಿ ಬೈಂದೂರ್, ಕಿರುತೆರೆ ಕಲಾವಿದರಾದ ಎನ್ ಟಿ ರಾಮಸ್ವಾಮಿಗೌಡ, ಡಾ. ಸಿ ಎಂ ರಾಜಶೇಖರ್, ಕಿರುತೆರೆ ನಿರ್ಮಾಪಕರಾದ ಪಾಂಡುರಂಗಚಾರಿ ಹಾಗೂ ಸಂಸ್ಥೆಯ ಅಧ್ಯಕ್ಷರಾದ ಜಿ ಎಂ. ಮಹಾದೇವ ಅವರು ಉಪಸ್ಥಿತರಿದ್ದರು.

# ಮಾದಾರ ಚನ್ನಯ್ಯ ಸ್ವಾಮೀಜಿಗಳ ಜನ್ಮದಿನ: ಯಾದಗಿರಿಯಲ್ಲಿ ಸಸಿ ನೇಡುವ ಮೂಲಕ ಆಚರಣೆ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ನಗರದ ವಿಶ್ವರಾಧ್ಯ ನಗರದಲ್ಲಿ ಶ್ರೀ ಮಾದಾರ ಚೆನ್ನಯ ಸೇವಾ ಸಮಿತಿಯ ವತಿಯಿಂದ ಚಿತ್ರದುರ್ಗ ಶ್ರೀ ಶಿವಶರಣ ಮಾದಾರ ಚನ್ನಯ್ಯ ಗುರುಪೀಠದ ಪೀಠಾಧ್ಯಕ್ಷರು ಹಾಗೂ ಮಲ್ಲಾಡಿಹಳ್ಳಿ ಅನಾಥ ಸೇವಾಶ್ರಮದ ಅಧ್ಯಕ್ಷರಾದ ಪರಮ ಪೂಜ್ಯ ಶ್ರೀ ಶ್ರೀ ಶ್ರೀ ಡಾ. ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿಗಳವರ ಜನ್ಮ ದಿನದ ಪ್ರಯುಕ್ತ ಸಸಿ ನೇಡುವ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲಾಯಿತು.

ಸಾಮರಸ್ಯ ಪ್ರಶಸ್ತಿ ಮತ್ತು ಭಾರತದ ಗೌರವಾನ್ವಿತ ಉಪರಾಷ್ಟಪತಿಗಳಿಂದ ನಾಡಪ್ರಭು ಕೆಂಪೇಗೌಡರ ರಾಷ್ಟೀಯ ಪ್ರಶಸ್ತಿಗೆ ಭಾಜನರಾಗಿರುವ ಪೂಜ್ಯ ಸ್ವಾಮೀಜಿಗಳ ಜನ್ಮದಿನದ ಅಂಗವಾಗಿ ಹಮ್ಮಿಕೊಂಡಿದ್ದ ಈ ಪರಿಸರ ಜಾಗೃತಿ ಕಾರ್ಯಕ್ರಮದಲ್ಲಿ ಮುಖಂಡರು ಸಸಿಗಳನ್ನು ನೆಟ್ಟು ನೀರೆರೆದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗಳಾದ ಡಾ. ಶಿವಪ್ಪ ಮುದ್ನಾಳ ಮಾತನಾಡಿ, ಪೂಜ್ಯ ಸ್ವಾಮೀಜಿಗಳ ಸಮಾಜಮುಖಿ ಕಾರ್ಯಗಳು ಹಾಗೂ ಅವರ ಮಾರ್ಗದರ್ಶನ ಸಮಾಜಕ್ಕೆ ಸದಾ ದಾರಿದೀಪವಾಗಿದೆ ಎಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಮಾದಿಗ ದಂಡೋರ ಮಾದಿಗ ಮೀಸಲಾತಿ ಹೋರಾಟ ಸಮಿತಿಯ ರಾಜ್ಯ ಉಪಾಧ್ಯಕ್ಷರಾದ ಬಸವರಾಜ ಮೇತ್ರಿ ನಾಯ್ಕಲ್, ಶಿವಪ್ಪ ಮುದ್ನಾಳ, ಪರಮೇಶ ಗುಂಟೆನೋರ, ಶ್ರೀನಿವಾಸ ಈಟೆಕರ್, ಡಾ. ಸಿ. ಆರ್. ಕಂಬಾರ್, ತಿಪ್ಪಣ ಕೊನಿಮನಿ, ಶಿವು ಕೊಯಿಲೂರು, ಬಸವಲಿಂಗಪ್ಪ ಗೋಲ್ಡ್, ಸಲೀಂಪಾಷ್, ಸಲ್ಲು ದಂಡಿನ್ ಹಾಗೂ ಮಲ್ಲಿಕಾರ್ಜುನ ಬೀರನೂರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಹಯ್ಯಾಳ (ಬಿ) ಗ್ರಾಮದಲ್ಲಿ ಕುಡಿಯುವ ನೀರು, ಸ್ವಚ್ಛತೆ ಸೇರಿ ಹಲವು ಸಮಸ್ಯೆಗಳು: ಪಿಡಿಒ ಅಮಾನತಿಗೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಜು.20: ವಡಗೇರಾ ತಾಲೂಕಿನ ಹಯ್ಯಾಳ (ಬಿ) ಗ್ರಾಮದಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆ, ಚರಂಡಿಗಳ ಅವ್ಯವಸ್ಥೆ, ಸ್ವಚ್ಛ ಭಾರತ ಮಿಷನ್ ವಾಹನ ಹಲವು ವರ್ಷಗಳಿಂದ ಸಂಚರಿಸದಿರುವುದು, ಕಸದ ಬುಟ್ಟಿಗಳ ವಿತರಣೆ ಆಗದಿರುವುದು ಹಾಗೂ ಆಶ್ರಯ ಮನೆ ಯೋಜನೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಗ್ರಾಮಸ್ಥರು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಿದ್ದವೀರಪ್ಪ ಅವರ ವಿರುದ್ಧ ಗಂಭೀರ ಆರೋಪಗಳನ್ನು ಮಾಡಲಾಗಿದೆ. ಗ್ರಾಮದಲ್ಲಿ ಮೂಲಸೌಕರ್ಯಗಳ ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಹಲವು ವರ್ಷಗಳಿಂದ ಸ್ವಚ್ಛ ಭಾರತ ಮಿಷನ್‌ನ ಕಸ ಸಂಗ್ರಹ ವಾಹನ ಗ್ರಾಮಕ್ಕೆ ಬಾರದ ಕಾರಣ ಸ್ವಚ್ಛತೆ ಹದಗೆಟ್ಟಿದೆ. ಅಲ್ಲದೆ, ಕಸದ ಬುಟ್ಟಿಗಳನ್ನು ಸಹ ವಿತರಿಸಿಲ್ಲ ಎಂದು ದೂರಲಾಗಿದೆ.

ಇದಲ್ಲದೆ, ಆಶ್ರಯ ಮನೆ ಯೋಜನೆಯ ಫಲಾನುಭವಿಗಳ ಜಿಪಿಎಸ್ ಪ್ರಕ್ರಿಯೆಗೆ ?2,000ರಿಂದ ?4,000ರವರೆಗೆ ಲಂಚ ಪಡೆಯಲಾಗಿದೆ ಎಂದು ಆರೋಪಿಸಲಾಗಿದ್ದು, ಗ್ರಾಮಸ್ಥರೊಂದಿಗೆ ಅಧಿಕಾರಿಗಳು ಸಮರ್ಪಕವಾಗಿ ಸ್ಪಂದಿಸುತ್ತಿಲ್ಲ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಗ್ರಾಮಕ್ಕೆ ಖುದ್ದಾಗಿ ಭೇಟಿ ನೀಡಿ ಸಮಗ್ರ ಪರಿಶೀಲನೆ ನಡೆಸಬೇಕು. ಆರೋಪಗಳು ಸಾಬೀತಾದರೆ ಸಂಬಂಧಿಸಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯನ್ನು ಅಮಾನತುಗೊಳಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ನಡೆಸುವುದಾಗಿ ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

ಈ ವೇಳೆ ಸಂದೀಪ್ ರೆಡ್ಡಿ ತಂದೆ ಲಿಂಗಣ್ಣಗೌಡ, ಹಾಗೂ ದೇವರಾಜ ತಂದೆ ನಿಂಗಪ್ಪ ಅಂಬಿಗರ ಸೇರಿದಂತೆ ಗ್ರಾಮಸ್ಥರು ಆಗ್ರಹಿದ್ದಾರೆ.

# ಗುರುಮಠಕಲ್ ಮಳೆಗಾಗಿ ರೈತರಿಂದ ವಿಶೇಷ ಪೂಜೆ, ಲಕ್ಷ್ಮಣಪ್ಪ ಕಟ್ಟೆ ಬಳಿ ಸೋಮವಾರದ ಸಂತೆ

• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್



ಜು20:ಮಳೆಅಭಾವದಿಂದಸಂಕಷ್ಟಕ್ಕೊಳಗಾಗಿರುವ ರೈತರು ಉತ್ತಮ ಮಳೆಯಾಗಲಿ ಎಂಬ ಸಂಕಲ್ಪದೊಂದಿಗೆ ಸೋಮವಾರ ಲಕ್ಷ್ಮಣಪ್ಪ ಕಟ್ಟೆ ಸಮೀಪ ವಿಶೇಷವಾಗಿ ಸಂತೆ ನಡೆಸಿದರು. ಈ ಸಂತೆ ಯಶಸ್ವಿಯಾಗಿ ನಡೆದಿದ್ದು, ನೂರಾರು ರೈತರು ಹಾಗೂ ತರಕಾರಿ ವ್ಯಾಪಾರಸ್ಥರು ಭಾಗವಹಿಸಿ ವ್ಯಾಪಾರ ನಡೆಸಿದರು.

ಸಂತೆ ಆರಂಭಕ್ಕೂ ಮುನ್ನ ಗುರಮಠಕಲ್ ಪಟ್ಟಣದ ಹಿರಿಯರು, ರೈತರು ಹಾಗೂ ಸಾರ್ವಜನಿಕರು ಒಟ್ಟಾಗಿ ಲಕ್ಷ್ಮಣಪ್ಪನಿಗೆ ವಿಶೇಷ ಪೂಜೆ ಸಲ್ಲಿಸಿದರು. ಡೊಳ್ಳು-ವಾದ್ಯಗಳೊಂದಿಗೆ ಕಟ್ಟೆ ಬಳಿ ಆಗಮಿಸಿದ ಭಕ್ತರು ಮಳೆಗಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿ ದೇವರಲ್ಲಿ ಮೊರೆ ಹೋದರು.

ಪೂಜೆ ಬಳಿಕ ಆರಂಭವಾದ ಸಂತೆಯಲ್ಲಿ ನೂರಾರು ರೈತರು ಮತ್ತು ತರಕಾರಿ ವ್ಯಾಪಾರಸ್ಥರು ಲಕ್ಷ್ಮಣಪ್ಪ ಕಟ್ಟೆ ಆವರಣದಲ್ಲಿ ವ್ಯಾಪಾರ ನಡೆಸಿದರು.

ಮಳೆಗಾಗಿ ರೈತರು ಇಂದು ವಿವಿಧ ರೀತಿಯಲ್ಲಿ ದೇವರಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದು, ರೈತರ ಸಂಕಷ್ಟ ನಿವಾರಣೆಯಾಗಿ ಉತ್ತಮ ಮಳೆಯಾಗಲಿ ಎಂಬ ಆಶಯ ಎಲ್ಲೆಡೆ ವ್ಯಕ್ತವಾಗುತ್ತಿದೆ. ರೈತರ ಮೊರೆ ಆಲಿಸಿ ಪ್ರಕೃತಿ ಕೃಪೆ ತೋರಲಿ ಎಂಬುದು ಸಾರ್ವಜನಿಕರ ಹಾರೈಕೆಯಾಗಿದೆ.

# ಗುರುಮಠಕಲ್ ತಾಲೂಕ ಬರ ಘೋಷಣೆಗೆ ಜಯ ಕರ್ನಾಟಕ ಆಗ್ರಹ ತಮಟೆ ಬಾರಿಸಿ ಪ್ರತಿಭಟನೆ, ತಹಸೀಲ್ದಾರ್ ಮುಖಾಂತರ ಸಿಎಂಗೆ ಮನವಿ

• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್



ಜು.20: ಮಳೆ ಅಭಾವದಿಂದ ಗುರುಮಠಕಲ್ ತಾಲೂಕಿನ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿರುವ ಹಿನ್ನೆಲೆಯಲ್ಲಿ ತಾಲೂಕನ್ನು ತಕ್ಷಣ ಅಧಿಕೃತವಾಗಿ ಬರಪೀಡಿತ ಪ್ರದೇಶವೆಂದು ಘೋಷಿಸಿ ರೈತರಿಗೆ ವಿಶೇಷ ಪರಿಹಾರ ಪ್ಯಾಕೇಜ್ ನೀಡಬೇಕು ಎಂದು ಆಗ್ರಹಿಸಿ ಜಯ ಕರ್ನಾಟಕ ಸಂಘಟನೆಯ ನೇತೃತ್ವದಲ್ಲಿ ಸೋಮವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಯಿತು.

ಸಂಘಟನೆಯ ಪದಾಧಿಕಾರಿಗಳು ಹಾಗೂ ರೈತರು ಪಟ್ಟಣದ ಮುಖ್ಯರಸ್ತೆಯಲ್ಲಿ ಟಮಟೆ ಬಾರಿಸುತ್ತಾ ಪ್ರತಿಭಟನಾ ಮೆರವಣಿಗೆ ನಡೆಸಿ, ಬಳಿಕ ಗ್ರೇಡ್-2 ತಹಸೀಲ್ದಾರ ನರಸಿಂಹಸ್ವಾಮಿ ಅವರ ಮೂಲಕ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಯ ಕರ್ನಾಟಕ ಸಂಘಟನೆಯ ತಾಲೂಕು ಅಧ್ಯಕ್ಷ ನಾಗೇಶ್ ಗದ್ದಗಿ, ಮಳೆ ಕೊರತೆಯಿಂದ ರೈತರ ಬೆಳೆಗಳು ಸಂಪೂರ್ಣ ಹಾನಿಗೊಳಗಾಗಿದ್ದು, ಸರ್ಕಾರ ಕೂಡಲೇ ಬರ ಘೋಷಣೆ ಮಾಡಬೇಕು. ಪ್ರತಿ ಎಕರೆಗೆ ?50 ಸಾವಿರ ಪರಿಹಾರ ನೀಡಬೇಕು. ರೈತರ ಬೆಳೆ ಹಾಗೂ ಕೃಷಿ ಸಾಲವನ್ನು ಮನ್ನಾ ಮಾಡಬೇಕು. ಜಾನುವಾರುಗಳ ರಕ್ಷಣೆಗಾಗಿ ಉಚಿತ ಮೇವು ಬ್ಯಾಂಕ್‌ಗಳನ್ನು ಆರಂಭಿಸಿ, ಕುಡಿಯುವ ನೀರು ಹಾಗೂ ಮೇವು ವ್ಯವಸ್ಥೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಸಾಲದ ಹೊರೆ ತಾಳಲಾರದೆ ಆತ್ಮಹತ್ಯೆಗೆ ಶರಣಾದ ರೈತರ ಕುಟುಂಬಗಳಿಗೆ ?20 ಲಕ್ಷ ಪರಿಹಾರ ನೀಡಬೇಕು. ರೈತರ ಬದುಕು ಉಳಿಸಲು ಸರ್ಕಾರ ವಿಶೇಷ ಪರಿಹಾರ ಪ್ಯಾಕೇಜ್ ಘೋಷಿಸಿ ತುರ್ತು ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರನ್ನು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಯ ಕರ್ನಾಟಕ ಸಂಘಟನೆಯ ಪದಾಧಿಕಾರಿಗಳಾದ ಮಲ್ಲಿಕಾರ್ಜುನ ಕಾಕಲವರ್, ನರಸಿಮುಲು ಗಂಗಾನೋಳ, ರಾಮುಲು ಕೊಡಗಂಟಿ, ರವಿಕುಮಾರ್ ವಾರದ, ಕಾಶಪ್ಪ ಮನ್ನೇ, ರಾಜು ಪುರುಷೋತ್ತಮ, ಅಂಜಿ ಮಂಗಮೊಳ, ಮೋಹನ್ ಬುರಬುರೆ, ವಿಜಯ ಕೊಂಕಲ್, ಆಯಜ್ ಅಲಿ, ಜಗದೀಶ್ ಕೊಂಕಲ್, ಸಿದ್ದಪ್ಪ ಮದ್ದೂರ ಸೇರಿದಂತೆ ರೈತರು ಹಾಗೂ ಸಾರ್ವಜನಿಕರು ಭಾಗವಹಿಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

# ಲಿಂಗತ್ವ ಅಲ್ಪಸಂಖ್ಯಾತ ಮಹಿಳೆಯರ ಸ್ವಾವಲಂಬನೆಗೆ ವಿನೂತನ ಪ್ರಯತ್ನ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಆಶಾಕಿರಣ ಸಾಮಾಜಿಕ ಸೇವಾ ಸಂಸ್ಥೆ ಮತ್ತು ಎಸ್ ಎಫ್ ಸಂಯೋಗದಲ್ಲಿ ಲಿಂಗತ್ವ ಅಲ್ಪಸಂಖ್ಯಾತ ಮಹಿಳೆಯರು ಘನತೆ ಹಾಗೂ ಗೌರವದಿಂದ ಬದುಕು ಕಟ್ಟಿಕೊಳ್ಳುವ ಉದ್ದೇಶದಿಂದ ಕಳೆದ ಆರು ತಿಂಗಳಿಂದ ಸುಮಾರು 40 ಮಂದಿ ಸಮುದಾಯದ ಸದಸ್ಯರಿಗೆ ವಿವಿಧ ಕೌಶಲ್ಯಾಭಿವೃದ್ಧಿ ಮತ್ತು ಸ್ವ-ಯಂ ಉದ್ಯೋಗ ತರಬೇತಿಗಳನ್ನು ನೀಡಲಾಗುತ್ತಿದ್ದು ಅದೇ ರೀತಿ, ಯಾದಗಿರಿ ಗ್ರಾಮೀಣ ಭಾಗದ ಲಿಂಗತ್ವ ಅಲ್ಪಸಂಖ್ಯಾತ ಮಹಿಳೆಯರಿಗೆ ಕುರಿ ಸಾಕಣೆ, ಕೋಳಿ ಸಾಕಣೆ ಹಾಗೂ ಹೈನುಗಾರಿಕೆ ಸೇರಿದಂತೆ ವಿವಿಧ ಸ್ವಯಂ ಉದ್ಯೋಗ ಚಟುವಟಿಕೆಗಳನ್ನು ಆರಂಭಿಸಲು ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯ ದೊರಕುವಂತೆ ಸಂಸ್ಥೆ ನೆರವು ನೀಡುತ್ತಿದ್ದು ಇದರ ಅಂಗವಾಗಿ, "ಬೆಣ್ಣೆ ಅಂಗಳ" ವತಿಯಿಂದ ತಯಾರಿಸಲಾದ ಬನ್ ಮಾಸ್ಕಾಗೆ ಸಾರ್ವಜನಿಕರಿಂದ ಸಿಗುವ ಪ್ರತಿಕ್ರಿಯೆಯನ್ನು ತಿಳಿದುಕೊಳ್ಳುವ ಉದ್ದೇಶದಿಂದ ನಗರದ ಹೊಸ ಬಸ್ ನಿಲ್ದಾಣದ ಪಾದಚಾರಿ ಮಾರ್ಗದಲ್ಲಿ (ಫುಟ್‌ಪಾತ್) ಮಾರಾಟ ಕಾರ್ಯಕ್ರಮವನ್ನು ಆಯೋಜಿಸಲಾಯಿತು.ಈ ಸಂದರ್ಭದಲ್ಲಿ ಮಾತನಾಡಿದ ಮಾಯಾ ಎಸ್.ಆರ್. ನಾಯಕ ಅವರು, ಲಿಂಗತ್ವ ಅಲ್ಪಸಂಖ್ಯಾತ ಮಹಿಳೆಯರು ಭಿಕ್ಷಯಾಟನೆ ಹಾಗೂ ಲೈಂಗಿಕ ವೃತ್ತಿಯನ್ನು ತೊರೆದು ಸ್ವಯಂ ಉದ್ಯೋಗದ ಮೂಲಕ ಸ್ವಾಭಿಮಾನದಿಂದ ಬದುಕು ಕಟ್ಟಿಕೊಳ್ಳಬೇಕು. ಅದಕ್ಕಾಗಿ ಸಂಸ್ಥೆ ನಿರಂತರವಾಗಿ ತರಬೇತಿ, ಮಾರ್ಗದರ್ಶನ ಹಾಗೂ ಆರ್ಥಿಕ ನೆರವು ಒದಗಿಸುತ್ತಿದೆ ಎಂದು ಹೇಳಿದರು.ಕಾರ್ಯಕ್ರಮದಲ್ಲಿ ಪ್ರಿಯಾಂಕಾ ಮ್ಯಾಗೇರಿ, ದೀಪಾ, ಮಂಜುಲ್ಕರ್, ಸಹನಾ, ಅರುಣಿತಾ, ಸ್ವಪ್ನಾ, ಭಾರತಿ ಹಾಗೂ ಎಂ.ಡಿ. ಸೋಹಿಲ್ ಉಪಸ್ಥಿತರಿದ್ದರು.

# ನೂತನ ಜಿಲ್ಲಾ ಆರೋಗ್ಯಾಧಿಕಾರಿ,ಗೆ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)

ನಗರದ ಮಾದಿಗ ಸಮಾಜದ ವತಿಯಿಂದ ಶನಿವಾರದಂದು ವಿಜಯನಗರ ನೂತನ ಜಿಲ್ಲಾ ಆರೋಗ್ಯಾಧಿಕಾರಿ (DHO)ನೇಮಕವಾಗಿರುವ ಡಾ.ಲಿಂಗರಾಜು ಅವರಿಗೆ ಮಾದಿಗ ಸಮುದಾಯದವರು ಶಾಲು ಹೊದಿಸಿ,ಹಾರ ಹಾಕಿ ಗೌರವದಿಂದ ಸನ್ಮಾನಿಸಲಾಯಿತು.ಈರಣ್ಣ ಕಾಂಟ್ರಾಕ್ಟ್ ಅಮರಾವತಿ ಅವರು ಮಾತನಾಡಿ ತಾವು ಸಾರ್ವಜನಿಕರ ಆರೋಗ್ಯದ ವಿಷಯದ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸುತ್ತಾರೆ ಎಂದು ಇಡೀ ರಾಜ್ಯದಲ್ಲಿ ಮಾತಾಗಿದೆ. ವಿಜಯನಗರ ಜಿಲ್ಲೆಯಲ್ಲಿ ಬಡತನ ತಾಂಡವಾಡುತ್ತಿದೆ ಬಾಣಂತಿಯರಿಗೆ ಮತ್ತು ಗರ್ಭಿಣಿ ಸ್ತ್ರೀಯರಿಗೆ ಸಾಕಷ್ಟು ಅನಾನುಕೂಲತೆ ಇದೆ ತಾವು ಇದನ್ನು ಮನಗಂಡು ರಾಜ್ಯ ಸರ್ಕಾರದ ಆರೋಗ್ಯ ಸಚಿವರ ಮತ್ತು ಮೇಲಾಧಿಕಾರಿಗಳ ಗಮನಕ್ಕೆ ತಂದು ಅನಾನುಕೂಲತೆಗಳನ್ನು ಅತಿ ಶೀಘ್ರವಾಗಿ ಸರಿಪಡಿಸುವ ಕಾರ್ಯಕ್ಕೆ ಮುಂದಾಗಬೇಕೆಂದು MCHನ DHO ಅವರಲ್ಲಿ ಮನವಿ ಮಾಡಿದರು.ಈ ಸಂದರ್ಭದಲ್ಲಿ ಸಮಾಜದ ಹಿರಿಯ ಮುಖಂಡರಾದ ಮಾರೆಣ್ಣ,ಎರ್ರಿಸ್ವಾಮಿ ಕಾರಿಗನೂರು,ಧರ್ಮಪ್ಪ ಕಲ್ಲಹಳ್ಳಿ,ರಾಮಾಂಜಿನೇ ಗಾಂಧಿನಗರ,ಬಿ ಇಶೇಕ್ಷಾವಲಿ 88 ಮುದ್ಲಾಪುರ,ಕಿರಿಯ ಮುಖಂಡರಾದ ಮರಿದಾಸ್,ಸಣ್ಣ ಈರಣ್ಣ ಅಮರಾವತಿ,ಮಲ್ಲಪ್ಪ ಅಮರಾವತಿ,ಶ್ರೀನಿವಾಸ ಎಂ ಎಂ ಹಳ್ಳಿ,ಕೊಲ್ಲಾಪುರಿ,ವೀರೇಶ ಅಮರಾವತಿ,ಪರಶುರಾಮ ಕೊಂಡನಾಯಕನಹಳ್ಳಿ,ಕೃಷ್ಣ,ಬಸವ,ಶ್ರೀಕಾಂತ,ಪ್ರವೀಣ್ ಕುಮಾರ್,ಹೊನ್ನೂರಪ್ಪ,ಮಾದಿಗ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

# ಕಣ್ಣುಗಳು ಮನುಷ್ಯನ ಪ್ರಗತಿಗೆ ಪೂರಕ:ಡಾ.ಕಲ್ಯಾಣೆ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಮನುಷ್ಯನ ಎರಡು ಕಣ್ಣುಗಳು ಪ್ರಗತಿಗೆ ಪೂರಕವಾಗುತ್ತವೆ ಎಂದು ಭೀಮಣ್ಣ ಖಂಡ್ರೆ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಉದಯಕುಮಾರ ಕಲ್ಯಾಣೆ ಹೇಳಿದರು.

ನಗರದ ಪವನ ಆಪ್ಟಿಕಲ್ಸ್ (ಡಾ.ಜಾಧವ ಆಸ್ಪತ್ರೆ ಹತ್ತಿರ) ಮುಂಭಾಗದಲ್ಲಿ ರೋಟರಿ ಕ್ಲಬ್ ಆಫ್ ಭಾಲ್ಕಿ ಫೋರ್ಟ್(ಆರ್ಐ 3160) ಮತ್ತು ವ್ಹಿಜನ್ ಫೌಂಡೇಶನ್ ಆಫ್ ಇಂಡಿಯಾ ಹಾಗೂ ಉದಯಗಿರಿ ಲಾಯನ್ಸ್ ನೇತ್ರಾಲಯ ಉದಗೀರ ಅವರ ಸಂಯುಕ್ತಾಶ್ರಯದಲ್ಲಿ ಭಾನುವಾರ ಹಮ್ಮಿಕೊಂಡ ಮೋತಿ ಬಿಂದು ಶಸ್ತ್ರಕ್ರಿಯೆ ಮತ್ತು ಉಚಿತ ನೇತ್ರ ಚಿಕಿತ್ಸಾ ಶಿಬಿರ ಉದ್ಘಾಟಿಸಿ ಮಾತನಾಡಿದರು. ಇತ್ತೀಚೆಗೆ ಮಕ್ಕಳಿಂದ ವಯೋವೃದ್ಧದವರು ಸುಮಾರು 18 ಗಂಟೆ ಮೋಬೈಲ್,ಟಿವಿಯಲ್ಲಿ ಮಗ್ನರಾಗಿರುವುದರಿಂದ ಕಣ್ಣಿನ ದೃಷ್ಠಿ ಕ್ರಮೇಣ ಕ್ಷೀಣಿಸುತ್ತಿದೆ.ಕಾರಣ ಕಣ್ಣಿನಲ್ಲಿ ನೋವು ಕಾಣಿಸಿಕೊಂಡಾಗ ತಕ್ಷಣ ನೇತೃತಜ್ಞರನ್ನು ಸಂಪರ್ಕಿಸಿ ಚಿಕಿತ್ಸೆ ಪಡೆಯುವುದು ಅಗತ್ಯ ಎಂದು ಹೇಳಿ,ಭಾಲ್ಕಿ ರೋಟರಿ ಕ್ಲಬ್‌ನವರು ವರ್ಷದಲ್ಲಿ ಮರ್‍ನಾಲ್ಕು ಸಾರಿ ನೇತ್ರ ಚಿಕಿತ್ಸೆ ಏರ್ಪಡಿಸಿ ಗ್ರಾಮೀಣ ಬಡ ಕುಟುಂಬಸ್ಥರ ಬಾಳಲ್ಲಿ ಬೆಳಕು ಚೆಲ್ಲುತ್ತಿರುವ ಕಾರ್ಯ ಶ್ಲಾಘನೀಯವಾಗಿದೆ ಎಂದು ಬಣ್ಣಿಸಿದರು. ಅಧ್ಯಕ್ಷತೆ ವಹಿಸಿದ ತಾಲೂಕು ರೋಟರಿ ಕ್ಲಬ್ ಅಧ್ಯಕ್ಷ ಡಾ.ಶೈಲಜಾ ತಳವಾಡೆ ಅವರು,ಕಣ್ಣುಗಳು ಕಾಂತಿಯುಕ್ತವಾಗಿ ಆರೋಗ್ಯಪೂರ್ಣವಾಗಿದ್ದರೆ ಮಾತ್ರ ಉತ್ಸಾಹದಿಂದ ದಿನದ ಕಾರ್ಯ ಚಟುವಟಿಕೆಗಳು ಮಾಡಲು ಸಾಧ್ಯ.ಕಣ್ಣಿನ ಪೊರೆಗೆ ಶಸ್ತ್ರ ಚಿಕಿತ್ಸೆ,ಗ್ಲುಕೋಮಾಗೆ ಲೇಸರ್ ಚಿಕಿತ್ಸೆ ಮಾಡಿಕೊಳ್ಳುವುದು ಅವಶ್ಯಕವಾಗಿದೆ ಎಂದರು. ನೇತ್ರತಜ್ಞ ಡಾ.ಶಿವರಾಜ ವನಸೂರೆ ಕಣ್ಣಿನ ಪ್ರಾಮುಖ್ಯತೆ ಕುರಿತು ಮಾತನಾಡಿದರು.ತಪಾಸಣೆ: 45 ಕಣ್ಣಿನ ರೋಗಿಗಳಿಗೆ ತಪಾಸಣೆ ಮತ್ತು 45 ಪೇಷಂಟಗಳಿಗೆ ಮೋತಿ ಬಿಂದು




"ಕಣ್ಣುಗಳು ಪಂಚೇದ್ರೀಯಗಳಲ್ಲಿ ಒಂದು ಪ್ರಮುಖ ಅಂಗ.ಕಣ್ಣು ಕಳೆದುಕೊಂಡು ಪರಾವಲಂಬಿ ಜೀವನ ಸಾಗಿಸುವುದಕ್ಕಿಂತ ಸಕಾಲದಲ್ಲಿ ಚಿಕಿತ್ಸೆ ಪಡೆದು ಕನ್ನಡಕ ಬಳಸಿ,ಸ್ವಾವಲಂಬಿ,ಸ್ವಾಭಿಮಾನಿ ಬದುಕು ಸಾಗಿಸಬೇಕು.'

**– ಡಾ.ಉದಯಕುಮಾರ ಕಲ್ಯಾಣೆ ಪ್ರಾಚಾರ್ಯರು ಭಾಲ್ಕಿ.**

'ಇತ್ತೀಚೆಗೆ ಮಹಿಳೆಯರಲ್ಲಿ ಅಂಧತ್ವದ ಪ್ರಮಾಣ ಹೆಚ್ಚುತ್ತಿದೆ.ಅಡುಗೆಗಾಗಿ ಹೊಗೆರಹಿತ ಒಲೆಗಳನ್ನು ಉಪಯೋಗಿಸಬೇಕು.ದೃಷ್ಠಿದೋಷ ಕಂಡುಬಂದಲ್ಲಿ ನೇತೃತಜ್ಞರನ್ನು ಭೇಟಿಯಾಗಬೇಕು. ರೋಟರಿ ಕ್ಲಬ್ ನಿಮ್ಮ ಸೇವೆಗಾಗಿ ಸದಾ ಸಿದ್ಧವಿದೆ.'

**– ಡಾ.ಶೈಲಜಾ ತಳವಾಡೆ ಅಧ್ಯಕ್ಷರು ರೋಟರಿ ಕ್ಲಬ್ ಭಾಲ್ಕಿ.**

ಶಸ್ತ್ರಕ್ರಿಯೆಗೊಳಪಡಿಸಲಾಯಿತು.ಒಟ್ಟು 90 ಜನರಿಗೆ ತಪಾಸಣೆ ಮಾಡಲಾಯಿತು. ಮಾಡಲಾಯಿತು.ಸಮಾಲೋಚಕ ಮಹಾದೇವ ಸಂಭಾಳೆ,ಟೆಕ್ನಿಷಿಯನ್ ಶಂಕರ ಕೇಂದ್ರೆ,ಡಾ. ವಸಂತ ಪವಾರ,ಡಾ.ನಿತೀನ ಪಾಟೀಲ್, ಡಾ.ಸಜ್ಜಲ ಬಳತೆ,ಡಾ.ರಾಹುಲ ರಾಜೂರೆ, ಡಾ.ಮಾಣಿಕಪ್ರಭು ಕೋಟೆ,ರೋ.ದತ್ತಾತ್ರಿ ಮೆಹಕ್ರೆ, ನ್ಯಾಯವಾದಿಗಳಾದ ಶಾಂತನು ಕುಲಕರ್ಣಿ,ಸೌರಭ ನಾಯಕ,ಬಸವ ಪಾಟೀಲ್, ಮತ್ತು ವೈಜಿನಾಥ ಕೋಟೆ, ಪವನ ಕೋಟೆ ಸೇಋ ಇದಂತೆ ಹಲವರು ಬಾಗವಹಿಸಿದ್ದರು.ಮಾಜಿ ಎಜಿ ಡಾ.ಅಮೀತ ಅಷ್ಟೂರೆ ಸ್ವಾಗತಿಸಿದರು.ರೋಟರಿ ಕ್ಲಬ್ ಕಾರ್ಯದರ್ಶಿ ಅಶೋಕ ರಾಜೋಳೆ ನಿರೂಪಿಸಿದರು.ಕ್ಲಬ್ ಖಜಾಂಚಿ ಅವಿನಾಶ ಮಾಲ್ಗೆ ವಂದಿಸಿದರು.

# 6ನೇ ತರಗತಿ ಜವಾಹರ್ ನವೋದಯ ವಿದ್ಯಾಲಯ ಆಯ್ಕೆ ಪರೀಕ್ಷೆಯ ನೋಂದಣಿ ಪ್ರಾರಂಭ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ



ಜಿಲ್ಲೆಯ ಪೋಷಕರು ಹಾಗೂ ವಿದ್ಯಾರ್ಥಿಗಳ ಗಮನಕ್ಕೆ ತಿಳಿಯಪಡಿಸುವುದೇನೆಂದರೆ, 6ನೇ ತರಗತಿ ಜವಾಹರ್ ನವೋದಯ ವಿದ್ಯಾಲಯ ಆಯ್ಕೆ ಪರೀಕ್ಷೆ (ಜೆ.ಎನ್.ವಿ.ಎಸ್.ಟಿ)–2027ರ ಆನ್‌ಲೈನ್ ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಿದ್ದು, ಅರ್ಜಿ ಸಲ್ಲಿಸಲು ಇದೇ ಜುಲೈ 31 ಕೊನೆಯ ದಿನಾಂಕವಾಗಿದೆ ಎಂದು ಕೊಪ್ಪಳ ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಅವರು ತಿಳಿಸಿದ್ದಾರೆ.

ಅರ್ಹ ವಿದ್ಯಾರ್ಥಿಗಳು www.navodaya.gov.in ºÁUÀÆ https://cbseitms.rcil.gov.in/nvs/ ವೆಬ್‌ಸೈಟ್‌ಗಳ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. 6ನೇ ತರಗತಿ ಜೆ.ಎನ್.ವಿ.ಎಸ್.ಟಿ–2027ರ ಆಯ್ಕೆ ಪರೀಕ್ಷೆಯನ್ನು 2026ರ ನವೆಂಬರ್ 28ರಂದು ನಡೆಸಲು ವೇಳಾಪಟ್ಟಿಯನ್ನು ಅಂತಿಮಗೊಳಿಸಲಾಗಿದ್ದು, ಈ ಸಂಬಂಧ ಅಧಿಸೂಚನೆ ಪ್ರಕಟಿಸಲಾಗಿದೆ.

ಜವಾಹರ್ ನವೋದಯ ವಿದ್ಯಾಲಯಗಳು ವಿದ್ಯಾರ್ಥಿಗಳಿಗೆ ಉಚಿತ ಹಾಗೂ ಗುಣಮಟ್ಟದ ಶಿಕ್ಷಣವನ್ನು ಒದಗಿಸುತ್ತಿದ್ದು, ಅತ್ಯಾಧುನಿಕ ಶೈಕ್ಷಣಿಕ ಹಾಗೂ ವಸತಿ ಸೌಲಭ್ಯಗಳನ್ನು ಹೊಂದಿವೆ. ಜಿಲ್ಲೆಯ ಅರ್ಹ ವಿದ್ಯಾರ್ಥಿಗಳು ಈ ಸುವರ್ಣಾವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು. ಪೋಷಕರು ತಮ್ಮ ಮಕ್ಕಳನ್ನು 6ನೇ ತರಗತಿ ಜವಾಹರ್ ನವೋದಯ ವಿದ್ಯಾಲಯ ಆಯ್ಕೆ ಪರೀಕ್ಷೆ (ಜೆ.ಎನ್.ವಿ.ಎಸ್.ಟಿ–2027)ಗೆ ಆನ್‌ಲೈನ್ ಮೂಲಕ ನಿಗದಿತ ದಿನಾಂಕದೊಳಗೆ ಅರ್ಜಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

# ಭೀಮಾನದಿಗೆ ನೀರು ಹರಿಸಲು ಕರವೇಯಿಂದ ಪ್ರತಿಭಟನೆ



• ಮಲ್ಲಮ್ಮ ನುಡಿ ವಾರ್ತೆ ಇಂಡಿ

ತಾಲೂಕಿನಲ್ಲಿ ಹರಿಯುವ ಭೀಮಾ ನದಿಗೆ ಮಹಾರಾಷ್ಟ್ರದ ಉಜನಿ ಜಲಾಶಯದಿಂದ ನೀರು ಹರಿಸಲು ಆಗ್ರಹಿಸಿ ಕರವೇ ಕಾರ್ಯಕರ್ತರು ಆಡಳಿತಸೌಧ ಎದುರು ಪ್ರತಿಭಟನೆ ನಡೆಸಿದರು. ಕಂದಾಯ ಉಪವಿಭಾಗಾಧಿಕಾರಿ ಚಿದಾನಂದ ಗುರುಮೂರ್ತಿಯವರಿಗೆ ಮನವಿ ಸಲ್ಲಿಸಿದರು.

ಅಲ್ಲಿ ಮಾತನಾಡಿದ ಕರವೇ ಅಧ್ಯಕ್ಷ ಬಾಳು ಮುಳಜಿ ನದಿಯ ದಡಗಳಲ್ಲಿ ಒಟ್ಟು 64 ಹಳ್ಳಿಗಳು 5 ನಗರಗಳು ಲಕ್ಷಾಂತರ ಜನ ಮತ್ತು ಜಾನುವಾರು ಭೀಮಾ ನೀರನನ್ನು ನಂಬಿಕೊಂಡು ಬದುಕುತ್ತಿದ್ದಾರೆ.

ಪರಿಸ್ಥಿತಿ ಹೀಗಿರುವಾಗ, ಈ ಬಾರಿ ಭೀಕರ ಬರಗಾಲ ಆವರಿಸಿದ್ದು, ಭೀಮಾನದಿ ನೀರನ್ನೆ ಇಂಡಿ ಚಡಚಣ, ಆಲಮೇಲ, ಸಿಂದಗಿ ತಾಲೂಕಿನ ರೈತರಿಗೆ ಸಮಸ್ಯೆ ಆಗುವ ಹಂತದಲ್ಲಿದೆ, ಮತ್ತೊಂದೆಡೆ ಜನ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ತತ್ವಾರವೂ ಏರ್ಪಟ್ಟಿದೆ. ಆದ್ದರಿಂದ ಭೀಮಾನದಿಗೆ ಕಾನೂನಾತ್ಮಕವಾಗಿ ಬರಬೇಕಿರುವ ನೀರನ ಪಾಲನ್ನು ಪಡೆಯುವ ನಿಟ್ಟಿನಲ್ಲಿ ನೆರೆಯ ಮಹಾರಾಷ್ಟ್ರ ರಾಜ್ಯ ಸರಕಾರದ ಮೇಲೆ ಒತ್ತಡ ಹೇರುವ ತುರ್ತು ಅಗತ್ಯವಿದೆ ಎಂದರು.

ರಾಮಸಿಂಗಕನ್ನೊಳ್ಳಿ ಮಾತನಾಡಿ ಕರ್ನಾಟಕದಲ್ಲಿರುವ ಬ್ಯಾರೇಜುಗಳಲ್ಲಿ ನೀರಿನ ಕೊರೆತೆಯಿದೆ. ಭೀಮಾನದಿ ನೀರನ್ನು ನಂಬಿಕೊಂಡು ಎಡ ಮತ್ತು ಬಲ ದಡದಲ್ಲಿ ರೈತರು ಲಕ್ಷಾಂತರ ಎಕರೆ ಕಬ್ಬು ಹಾಗೂ ಇತರೆ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಒಂದು ವೇಳೆ ನೀರಿನ ಕೊರತೆಯಾದರೆ ಭಾರಿ ಪ್ರಮಾಣದಲ್ಲಿ ರೈತರಿಗೆ ನಷ್ಟ ಬೀಳಲಿದೆ. ಆದ್ದರಿಂದ ರಾಜ್ಯ ಸರಕಾರ ಮುತುವರ್ಜಿವಹಿಸಿ ಮಹಾರಾಷ್ಟ್ರದಿಂದ ನೀರುಪಡೆಯಲು ತನ್ನ ಪ್ರಯತ್ನ ಆರಂಭಿಸಬೇಕು ಅಂದಾಗ ಮಾತ್ರ ನಮ್ಮ ಬಾಂದಾರ ತುಂಬಲು ಸಾಧ್ಯವಾಗುತ್ತದೆ ಎಂದರು.

ಮಹೇಶ ಹೂಗಾರ ಮಾತನಾಡಿ ನ್ಯಾಯಮೂರ್ತಿ ಬಚಾವತ್ ತೀರ್ಪಿನ ಪ್ರಕಾರ ಭೀಮಾನದಿಯ ನೀರು ಹಂಚಿಕೆಯ ಎಲ್ಲಾ ನಿಯಮಗಳನ್ನು ಉಲ್ಲಂಘನೆ ಮಾಡಲಾಗುತ್ತಿದೆ. ಕರ್ನಾಟಕ ಸರಕಾರ ಈ ಭಾಗದ ಜನ ಪ್ರತಿನಿಧಿಗಳು ದಿವ್ಯ ನಿರ್ಲಕ್ಷ ವಹಿಸುತ್ತಿದ್ದಾರೆ. ಇದರಿಂದ ಭಿಮಾನದಿ ತೀರದ ಜನತೆ ಮತ್ತು ರೈತರಿಗೆ ತುಂಬಾ ಅನ್ಯಾಯವಾಗುತ್ತಿದೆ. . ಏಕೆಂದರೆ 2000 ರಿಂದ ಭೀಮಾನದಿಗೆ ನಮ್ಮ ಪಾಲಿನ ನೀರು ಬಿಡುತ್ತಿಲ್ಲ. ಭೀಮಾನದಿ ಬತ್ತಿ ಹೋಗಿರುವುದರಿಂದ ಲಕ್ಷಾಂತರ ಜೀವಿಗಳ ಅಂ–ದರೆ ಹಳ್ಳಿಗಳ ಜನ ಮತ್ತು ಜಾನುವಾರುಗಳಿಗೆ ಸಂಕಷ್ಟ ಎದುರಾಗಿದೆ ಎಂದರು.

ನಮ್ಮ ಭಾಗದ ರೈತರ ಸೇರಿ ಇಂಡಿ ಬಂದ್ ಮಾಡಿ ಉಗ್ರ ಹೋರಾಟ ಮಾಡಲಾಗುವುದು ಎಂದರು.

ಪ್ರತಿಭಟನೆಯಲ್ಲಿ ವಿಠ್ಠಲ ಸೊನ್ನ, ರಾಜು ಪವಾರ, ಪ್ರೇಮ ಕಾಲೇಭಾಗ, ಅಪ್ಪು ಚಂಡಕೆ, ತೇಜಸ್ ದೊಡಮನಿ, ನಾಗರಾಜ ಲಾಳಸೇರಿ, ಬಾಗಲ ಹೊಸಮನಿ, ಶ್ರೀಧರ ವಡ್ಡಿ, ಪರಸು ಭಂಡಾರು ಮತ್ತಿತರಿದ್ದರು.

# ದೆಹಲಿಯಲ್ಲಿ ಪ್ರತಿಭಟನಾಕಾರರ ಮೇಲೆ ಲಾಠಿ ಚಾರ್ಜ್: ಸಿಪಿಐ(ಎಂಎಲ್) ರೆಡ್ ಸ್ಟಾರ್ ತೀವ್ರ ಖಂಡನೆ

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು



ಜು 20: ದೆಹಲಿಯ ಜಂತರ್ ಮಂತರ್‌ನಲ್ಲಿ ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದ ವಿದ್ಯಾರ್ಥಿಗಳು ಹಾಗೂ ಹೋರಾಟಗಾರರ ಮೇಲೆ ಪೊಲೀಸರು ಲಾಠಿ ಚಾರ್ಜ್ ನಡೆಸಿರುವುದನ್ನು ಸಿಪಿಐ(ಎಂಎಲ್) ರೆಡ್ ಸ್ಟಾರ್ ಕರ್ನಾಟಕ ರಾಜ್ಯ ಸಮಿತಿ ತೀವ್ರವಾಗಿ ಖಂಡಿಸಿದೆ. ಜನರ ಪ್ರಶ್ನೆಗಳಿಗೆ ಉತ್ತರಿಸಲು ವಿಫಲವಾಗಿರುವ ಕೇಂದ್ರ ಸರ್ಕಾರವು ಹೋರಾಟವನ್ನು ದಮನ ಮಾಡಲು ಹೊರಟಿದೆ ಎಂದು ಪಕ್ಷದ ರಾಜ್ಯ ಕಾರ್ಯದರ್ಶಿ ಎಂ. ಗಂಗಾಧರ್ ಆರೋಪಿಸಿದರು.ಮೋದಿ ನೇತೃತ್ವದ ಆರ್‌ಎಸ್‌ಎಸ್–ಹಿಂದುತ್ವ ಸರ್ಕಾರವು ಜನರ ಪ್ರಶ್ನೆಗಳಿಗೆ ಉತ್ತರಿಸಲು ವಿಫಲವಾಗಿ ಸಂವಾದದ ಬದಲಿಗೆ ದಮನಕಾರಿ ನೀತಿಯನ್ನು ಅನುಸರಿಸುತ್ತಿದೆ ಹಾಗೂ ಲಾಠಿ,ಬಂಧನ ಮತ್ತು ಬೆದರಿಕೆಗಳ ಮೂಲಕ ಜನರ ಹೋರಾಟವನ್ನು ಹತ್ತಿಕ್ಕಲು ಸಾಧ್ಯವಿಲ್ಲ, ಇದು ಪ್ರಜಾಪ್ರಭುತ್ವದ ಹಕ್ಕುಗಳ ಮೇಲಿನ ನೇರ ದಾಳಿಯಾಗಿದೆ ಎಂದು ಎಂ ಗಂಗಾಧರ ಕಿಡಿಕಾರಿದರು.ಈ ದಮನಕಾರಿ ಘಟನೆಯ ನೈತಿಕ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವರು ತಕ್ಷಣ ರಾಜೀನಾಮೆ ನೀಡಬೇಕು.ಪೊಲೀಸರ ವಶದಲ್ಲಿರುವ ಬಂಧಿತರನ್ನು ಕೂಡಲೇ ಬಿಡುಗಡೆ ಮಾಡಬೇಕು.ಲಾಠಿ ಚಾರ್ಜ್‌ಗೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು.ಪ್ರತಿಭಟನಾಕಾರರ ಜತೆ ಸರ್ಕಾರ ತಕ್ಷಣವೇ ಸಂವಾದ ನಡೆಸಬೇಕು ಎಂದು ಪ್ರಮುಖ ಬೇಡಿಕೆಗಳನ್ನು ಒತ್ತಾಯಿಸಿದರು.

# ಪ್ರಜಾಪ್ರಭುತ್ವದಲ್ಲಿ ತುಘಲಕ್ ದರ್ಬಾರ್: ನೀಲಗುಂದ ಶ್ರೀ ಪ್ರಭುಲಿಂಗ ದೇವರು

• ಮಲ್ಲಮ್ಮ ನುಡಿ ವಾರ್ತೆ ಕುಕನೂರ



ಸುಮಾರು 800 ವರ್ಷಗಳ ಹಿಂದೆ ದೇವಸ್ಥಾನದ ಪವಾಡಗಳನ್ನು ಕಂಡ ರಾಜರು ದೇವಸ್ಥಾನದ ಸೇವೆ ಮಾಡುವವರಿಗೆ ಎಂದು ಉಂಬಳಿ ನೀಡಿರುವ ಜಮೀನಿನಲ್ಲಿ ಸರ್ಕಾರಿ ಕಾರ್ಯಾಲಯದ ಕಟ್ಟಡ ನಿರ್ಮಾಣ ಮಾಡಲು ಹೊರಟಿರೋದು ಪ್ರಜಾಪ್ರಭುತ್ವದಲ್ಲಿ ತಘಲಕ್ ದರ್ಬಾರ್ ನಡೆಸಿದಂತೆ ಭಾಸವಾಗುತ್ತಿದೆ ಎಂದು ನೀಲಗುಂದ ಮಠದ ಶ್ರೀ ಪ್ರಭುಲಿಂಗ ದೇವರು ಹೇಳಿದರು.

ಪಟ್ಟಣದ ಹೊರ ವಲಯದಲ್ಲಿರುವ ಶ್ರೀಗುಡ್ನೇಶ್ವರ ಸ್ವಾಮಿ ಮಠದ ಆವರಣದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಶ್ರೀಗಳು ಮಾತನಾಡುತ್ತಾ ಶ್ರೀ ಮಠದ ಸೇವಾದಾರರ ಜಮೀನಿನಲ್ಲಿ ಶಾಸಕರು ತಾಲೂಕ ಆಡಳಿತ ಸಹೋದರ, ತಾಲೂಕ ಆರೋಗ್ಯ ಕೇಂದ್ರ, ನ್ಯಾಯಾಲಯಗಳ ಸಂಕೀರ್ಣವನ್ನು ನಿರ್ಮಿಸಲು ಹೊರಟಿರುವುದು ಶ್ರೀಮಠದ ಸೇವಾದಾರರ ಹಾಗೂ ಭಕ್ತರ ಜಮೀನನ್ನು ಕಸಿದುಕೊಳ್ಳುವ ಹುನ್ನಾರವಾಗಿದೆ. ಈ ಜಮೀನಿಗೆ ಸಂಬಂಧಪಟ್ಟಂತೆ ಉಚ್ಚ ನ್ಯಾಯಾಲಯದಲ್ಲಿ ದಾವೆ ಮುಂದುವರೆದಿದ್ದು ಇದರ ಅರಿವು ಇಲ್ಲದೆ ಇರುವ ಶಾಸಕರು ಜಿಲ್ಲಾಧಿಕಾರಿಗಳಿಂದ ಭೂಮಿ ಪೂಜೆ ಮಾಡಿಸಿರುವುದು ಆಶ್ಚರ್ಯಕರ ಹಾಗೂ ಅಪಹಾಸ್ಯಕರ ಸಂಗತಿಯಾಗಿದೆ. 18 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಕಟ್ಟಡಕ್ಕೆ ಯಾವ ಪ್ರತಿನಿಧಿಗಳು ಸಹ ಇಲ್ಲದೆ ಕೇವಲ ಅಧಿಕಾರಿಗಳ ಹಾಗೂ ಶಾಸಕರ ಹಿಂಬಾಲಕರ ನೇತೃತ್ವದಲ್ಲಿ ಭೂಮಿ ಪೂಜೆ ನೆರವೇರಿಸಿರುವುದು ಇದಕ್ಕೆ ಸಾಕ್ಷಿಯಾಗಿದ್ದು, ಈ ಕಾಮಗಾರಿ ಶಂಕು ಸ್ಥಾಪನೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳಿಂದ ಭೂಮಿ ಪೂಜೆ ಮಾಡಿಸುವುದಾಗಿ ಹೇಳುತ್ತಾ ಬಂದಿದ್ದ ಶಾಸಕರು ನ್ಯಾಯಾಂಗ ಉಲ್ಲಂಘನೆ ಯಾಗುವ ಭೀತಿಯಿಂದ ತಾವು ಕಾಣಿಸಿಕೊಳ್ಳದೆ ಕೇವಲ ಅಧಿಕಾರಿಗಳಿಂದ ಭೂಮಿ ಪೂಜೆ ಮಾಡಿಸಿರುವುದು ಆಶ್ಚರ್ಯಕರ ವಾಗಿದೆ ಎಂದು ಹೇಳಿದರು.

ಶ್ರೀ ಮಠದ ಜಮೀನಿನಲ್ಲಿ ಬಾಡಿಗೆ ಆಧಾರದಲ್ಲಿ ಸ್ಥಳ ಪಡೆದುಕೊಂಡು ಕಟ್ಟಡ ಕಾಮಗಾರಿ ಮಾಡಲಾಗುತ್ತದೆ ಎಂದು ಅನೇಕ ಸಭೆಗಳಲ್ಲಿ ಶಾಸಕರು ಹೇಳಿರುತ್ತಾರೆ ಆದರೆ ಸುಮಾರು 20 ವರ್ಷಗಳ ಹಿಂದೆಯೇ ಮಠದ 50– 60 ಎಕರೆ ಜಾಗದಲ್ಲಿ ಕೇಂದ್ರೀಯ ನವೋದಯ ವಿದ್ಯಾಲಯ ಹಾಗೂ ಸರ್ಕಾರಿ ಕೈಗಾರಿಕಾ ತರಬೇತಿ ಸೇರಿದಂತೆ ಹಲವಾರು ಕಟ್ಟಡಗಳನ್ನು ನಿರ್ಮಿಸಿದ್ದು ಅವುಗಳಿಗೆ ನೀಡುತ್ತಿರುವ ಬಾಡಿಗೆ ಎಲ್ಲಿದೆ....? ಯಾವ ಖಾತೆಯಲ್ಲಿ ಜಮಾ ಆಗುತ್ತದೆ ಎಂಬುದನ್ನು ಮೊದಲು ಸ್ಪಷ್ಟಪಡಿಸಲಿ ನಂತರ ಮುಂದಿನ ಕಟ್ಟಡ ಕಾಮಗಾರಿಗೆ ಬಾಡಿಗೆ ನೀಡುವ ವಿಚಾರವನ್ನು ಹೇಳಲಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನ್ಯಾಯಾಲಯ ವು 18 ಮಂದಿ ಸೇವಾದಾರರ ಜಮೀನನ್ನು ಮುಟ್ಟುವಂತಿಲ್ಲ ಎಂದು ಮಧ್ಯಂತರ ಆದೇಶ ನೀಡಿದ್ದು ಮೊದಲು ಅರ್ಜಿದಾರರಾದ 18 ಮಂದಿ ಸೇವಾದಾರರಿಗೆ ಅವರ ಭೂಮಿ ಗುರುತು ಪಡಿಸಿ ಹದ್ದುಬಸ್ತು ಮಾಡಿ ಕೊಡಲಿ ನಂತರ ಉಳಿದ ಕಾರ್ಯಗಳನ್ನು ಮಾಡಬೇಕು ಇದೆಲ್ಲವನ್ನು ಬಿಟ್ಟು ತರಾತುರಿಯಲ್ಲಿ 800 ವರ್ಷಗಳ ಪರಂಪರೆ ಇರುವ ಶ್ರೀಮಠದ ಸೇವಾದಾರರ ಜಮೀನನ್ನು ಪರಬಾರೆ ಮಾಡುತ್ತಿರುವುದು ಜೊತೆಗೆ ದಾಖಲಾತಿಗಳನ್ನು ನಾಶಪಡಿಸುವ ಹುನ್ನಾರ ನಡೆಸುತ್ತಿರುವುದು ಕಳೆದ ಎರಡು ವರ್ಷಗಳಿಂದ ಹಲವು ಬಾರಿ ಜಮೀನಿನ ದಾಖಲಾತಿಗಳು ಬದಲಾವಣೆಯಾಗಿರುವುದು ಸ್ಪಷ್ಟಪಡಿಸುತ್ತದೆ.

ಈಗಾಗಲೇ ಕೆಲವು ಪ್ರಕರಣಗಳಲ್ಲಿ ನ್ಯಾಯಾಲಯವು ದತ್ತಿ ಧಾರ್ಮಿಕ ಇಲಾಖೆಯ ಆಸ್ತಿಗಳನ್ನು ಧಾರ್ಮಿಕ ಕಾರ್ಯಗಳಿಗೆ ಹೊರತುಪಡಿಸಿ ಬೇರೆ ಕೆಲಸಕ್ಕೆ ಬಳಸಬಾರದು ಎಂಬ ಸ್ಪಷ್ಟ ಆದೇಶಗಳಿದ್ದರೂ ಸಹ ಜನಪ್ರತಿನಿಧಿಗಳು ಅಧಿಕಾರಿಗಳನ್ನು ಬಳಸಿಕೊಂಡು ಶ್ರೀಮಠದ ಆಸ್ತಿ ಕಬಳಿಸುವ ಹೊನ್ನಾರ ನಡೆಸಿರುವುದು ಭಕ್ತರ ಆಕ್ರೋಶಕ್ಕೆ ಕಾರಣವಾಗಿದ್ದು ಮುಂದಿನ ದಿನಗಳಲ್ಲಿ ಅನೇಕ ಭಕ್ತರು ಸಹ ಮಠದ ಆಸ್ತಿ ಮರಳಿ ಮಠಕ್ಕೆ ನೀಡುವಂತೆ ನ್ಯಾಯಾಲಯದ ಮೊರೆ ಹೋಗಲಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸೇವಾದಾರರ ವೀರಯ್ಯ ಬ್ಯಾಳಿ, ರುದ್ರಯ್ಯ ಇನಾಮ್ದಾರ್, ಚನ್ನಬಸಯ್ಯ ಪೂಜಾರ್, ಚನ್ನಬಸಯ್ಯ ದೂಪದ, ಶರಣಯ್ಯ ಹುಣಸಿಮರದ, ಸಿದ್ದಲಿಂಗಯ್ಯ ಬಂಡಿ, ಮಲ್ಲಯ್ಯ, ಶರಣಯ್ಯ ಅರಳಿಮರದ, ಶಿವರಾಜ ಗಲಿಬಿ, ಸಂಗಯ್ಯ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು

# ಚೆಕ್ ಬೌನ್ಸ್ ಅದಾಲತ್ : 65 ಪ್ರಕರಣ ಇತ್ಯರ್ಥ

• ಮಲ್ಲಮ್ಮ ನುಡಿ ವಾರ್ತೆ ಇಂಡಿ



ಶನಿವಾರ ನಗರದ ನ್ಯಾಯಾಲಯದಲ್ಲಿ ಉಚ್ಚನ್ಯಾಯಾಲಯದ ನಿರ್ದೇಶನದಂತೆ ಚೆಕ್ ಬೌನ್ಸ ಪ್ರಕರಣಗಳ ವಿಶೇಷ ಅದಾಲತ್ ನಡೆಸಲಾಯಿತು.

ಸದರಿ ಅದಾಲತದಲ್ಲಿ 65 ಪ್ರಕರಣಗಳಲ್ಲಿ ರಾಜಿ ಸಂಧಾನ ನಡೆಸಿ ಸುಮಾರು 50 ಲಕ್ಷಕ್ಕೂ ಅಧಿಕ ಮೊತ್ತ ಅರ್ಜಿದಾರ ಪಕ್ಷಗಾರರಿಗೆ ಜಮಾ ಮಾಡಲಾಯಿತು.

ದಿವಾಣಿ ನ್ಯಾಯಾಧೀಶ ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿ ಕಾನೂನು ಸೇವೆಗಳ ಸಮಿತಿ ಸುನಿಲಕುಮಾರ ಎಂ.ಎಸ್, ನ್ಯಾಯವಾದಿಗಳಾದ ಪಿ.ಬಿ.ಶಿರಕನಹಳ್ಳಿ, ಶಾಂತು ನಿಂಬರಗಿಮಠ, ಎಸ್.ಬಿ. ನಿಂಬರಗಿಮಠ, ಎಂ.ಎಸ್.ಪಾಟೀಲ, ಆರ್.ಆರ್. ಕೋಳಿ, ಡಿ.ಎಸ್. ಹಾಲಕವಾಡಿ ಆರ್.ಎಸ್.ತೆಗ್ಗೆಳ್ಳಿ ಎಸ್.ಟಿ.ಗೂಗಿಹಾಳ ಎಸ್.ಕೆ ಬಂಗಾರತಳ ಮತ್ತು ಮಂಜುನಾಥ ನಾವಿ ಹಾಗೂ ನ್ಯಾಯಾಲಯದ ಸಿಬ್ಬಂದಿ ಬಿ.ಎಂ.ಲಿಂಗಸುರ, ಮಹೇಶ ಕೋತ, ಚಂದ್ರಕಾಂತ ಲಾಳಸಂಗಿ, ಸಿದ್ದು ಹಾವಳಗಿ ಮತ್ತಿತರಿದ್ದರು.

# ತುಂಗಭದ್ರಾ ಜಲಾಶಯದಲ್ಲಿ ಮಹಾವರುಣ ಯಾಗದ ಭಸ್ಮ ಹಾಗೂ ಶಿವಲಿಂಗ ವಿಸರ್ಜನೆ



• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ಕೆ. ಕರಿಯಪ್ಪ ಅವರ ಜನ್ಮದಿನದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಮಹಾವರುಣ ಯಾಗದ ಪೂರ್ಣಾಹುತಿಯ ನಂತರ, ಯಾಗದ ಭಸ್ಮ ಮತ್ತು ಶಿವಲಿಂಗವನ್ನು ಹೊಸಪೇಟೆಯ ತುಂಗಭದ್ರಾ ಜಲಾಶಯದಲ್ಲಿ ದಂಪತಿ ಸಮೇತ ವಿಸರ್ಜನೆ ಮಾಡಲಾಯಿತು.ಸತತ ಮೂರು ದಿನಗಳ ಕಾಲ ಅತ್ಯಂತ ಶ್ರದ್ಧಾಭಕ್ತಿ ಹಾಗೂ ವಿಧಿವಿಧಾನಗಳಿಂದ ಮಹಾವರುಣ ಯಾಗ ಜರುಗಿತು. ಇದರ ಮಹಾಮಂಗಲದ ಭಾಗವಾಗಿ, ಕೆ. ಕರಿಯಪ್ಪ ದಂಪತಿಗಳು ತುಂಗಭದ್ರಾ ಜಲಾಶಯದ ಬಳಿ ತುಂಗಭದ್ರಾ ತಾಯಿಗೆ ವಿಶೇಷ ಪೂಜೆ ಸಲ್ಲಿಸಿ, ಲೋಕಕಲ್ಯಾಣಕ್ಕಾಗಿ ಪ್ರಾರ್ಥಿಸಿ ನದಿಯಲ್ಲಿ ಭಸ್ಮ ಹಾಗೂ ಶಿವಲಿಂಗವನ್ನು ವಿಸರ್ಜಿಸಿದರು.ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಎಂ. ದೊಡ್ಡಬಸವರಾಜ್, ಬಿಜೆಪಿ ತಾಲೂಕು ಅಧ್ಯಕ್ಷ ವೆಂಕೋಬ ನಾಯಕ್, ನಗರ ಅಧ್ಯಕ್ಷ ಸಿದ್ಧರಾಮೇಶ್, ಬೂರುಗುಪಲ್ಲಿ ಶ್ರೀ ಹರ್ಷ, ಜಿ.ಕೆ. ವಿಶ್ವನಾಥ ಚೌಧರಿ, ಬಿಜೆಪಿ ತಾಲೂಕು ಯುವ ಮೋರ್ಚಾ ಅಧ್ಯಕ್ಷ ನೆಕ್ಕಂಟಿ ವಂಶಿ, ಸುಂಕವೆಲ್ಲಿ ನರೇಶ್, ದುದ್ದುಪೂಡಿ ದೇವ, ಬುಲೆಟ್ ರಾಮಕೃಷ್ಣ, ಗೂಡಪಾಟಿ ವೆಂಕಟೇಶ, ಪದ್ಮ ನಾಯ್ಡು, ಕಿಶೋರ್ ಕುಮಾರ್, ಯೇಸುಬಾಬು, ಚಿಲುಕೂರು ಮೋಹನ್ ರಾವ್ ಸೇರಿದಂತೆ ಅನೇಕ ಗಣ್ಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಕೊಪ್ಪಳ ಜಿಲ್ಲಾ ಆರೋಗಾಧಿಕಾರಿಯಾಗಿ ಡಾ. ಈಶ್ವರ್ ಸವಡಿ ಅಧಿಕಾರ ಸ್ವೀಕಾರ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ



ಜಿಲ್ಲೆಯ ಗಂಗಾವತಿ ಸರ್ಕಾರಿ ಉಪವಿಭಾಗ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಹಿರಿಯ ವೈದ್ಯಾಧಿಕಾರಿ ಡಾ. ಈಶ್ವರ್ ಸವಡಿ ಅವರನ್ನು ಕೊಪ್ಪಳ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ (DHO)ಯಾಗಿ ರಾಜ್ಯ ಸರ್ಕಾರ ಆದೇಶ ನೀಡಿ ನೇಮಕ ಮಾಡಿದೆ.

ಈ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನ ಕಾರ್ಯದರ್ಶಿ ಪ್ರದೀಪ್ ಕುಮಾರ್ ಆದೇಶ ಹೊರಡಿಸಿದ್ದು, ಜುಲೈ 15ರಿಂದ ಆದೇಶ ಜಾರಿಗೆ ಬಂದಿದೆ.

ಡಾ. ಈಶ್ವರ್ ಸವಡಿ ಅವರು ಕೋವಿಡ್ ಸಂಕಷ್ಟದ ಅವಧಿ ಸೇರಿದಂತೆ ಗಂಗಾವತಿ ಸರ್ಕಾರಿ ಉಪವಿಭಾಗ ಆಸ್ಪತ್ರೆ, ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ಹಿರೇವಂಕಲಕುಂಟಾ ಸರ್ಕಾರಿ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸಿ, ಸರ್ಕಾರದ ಆರೋಗ್ಯ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದ್ದರು.

ಅವರ ನೇತೃತ್ವದಲ್ಲಿ ಆಸ್ಪತ್ರೆಗೆ ಮೂರು ಬಾರಿ ರಾಜ್ಯ ಹಾಗೂ ರಾಷ್ಟ್ರಮಟ್ಟದ "ಕಾಯಕ ಪ್ರಶಸ್ತಿ" ಲಭಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು.

# ಗೃಹಲಕ್ಷ್ಮಿ ಯೋಜನೆಗೆ 3 ವರ್ಷ ಪೂರ್ಣ: ವೀರಶೆಟ್ಟಿ ಮಾನಕರ್

• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ



ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆಯು ಜಾರಿಯಾಗಿ ಮೂರು ವರ್ಷಗಳು ಪೂರ್ಣಗೊಂಡಿ, ಪ್ರಯುಕ್ತ ತಾಲೂಕಿನ ಇಟಗಾ ಗ್ರಾಮ ಪಂಚಾಯತ್ ಆವರಣದಲ್ಲಿ ಸಸಿಗಳನ್ನು ನೆಟ್ಟು ಯೋಜನೆ ಸಾಧನೆಯನ್ನು ಸಂಭ್ರಮಿಸಿ ಬಳಿಕ ಫಲಾನುಭವಿಗಳೊಂದಿಗೆ ಸಂವಾದ ನಡೆಸಲಾಯಿತು. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯ ವೀರಶೆಟ್ಟಿ ಮಾನಕರ್ ಮಾತನಾಡಿ, ಗೃಹಲಕ್ಷ್ಮಿಯಿಂದಾಗಿ ಮಹಿಳೆಯರಿಗೆ ಅನುಕೂಲವಾಗಿದ್ದು, ಕಾಂಗ್ರೆಸ್ ಸರ್ಕಾರ ಮಹಿಳಾ ಸಬಲೀಕರಣಕ್ಕೆ ಬದ್ಧವಾಗಿದೆ. ಉಳಿದ ಗ್ಯಾರಂಟಿಗಳು ನಮ್ಮ ಸರ್ಕಾರ ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಿದೆ, ಇದು ಖುಷಿಯ ಸಂಗತಿ ಎಂದರು. ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿ ಸದಸ್ಯ ಪ್ರಕಾಶ ಮಾಶೆಟ್ಟಿ ಗ್ರಾಮ ಪಂಚಾಯತ್ ಕರ ವಸೂಲಿಗಾರ ಗೋಪಾಲ್ ಫುಲೇ, ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಬರ ಎದುರಿಸಲು ಪರ್ಯಾಯ ಬೆಳೆ ಮತ್ತು ಸೂಕ್ತ ನಿರ್ವಹಣಾ ಕ್ರಮ ಅನುಸರಿಸಲು ಸಲಹೆ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಜಿಲ್ಲೆಯಾದ್ಯಂತ ಬರ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಎದುರಿಸಲು ರೈತರು ಪರ್ಯಾಯ ಬೆಳೆಗಳನ್ನು ಮತ್ತು ಅದಕ್ಕೆ ಬೇಕಾದ ಸೂಕ್ತ ನಿರ್ವಹಣಾ ಕ್ರಮಗಳನ್ನು ಅನುಸರಿಸಬೇಕು ಎಂದು ರೈತರಿಗೆ ತೋಟಗಾರಿಕೆ ಜಂಟಿ ನಿರ್ದೇಶಕರು ಪ್ರಮುಖ ಸಲಹೆ ಹಾಗೂ ಮಾರ್ಗದರ್ಶನಗಳನ್ನು ನೀಡಿದ್ದಾರೆ.

ಮಳೆ ಅಭಾವ ಅಥವಾ ವಿಳಂಬವಾದ ಸಂದರ್ಭದಲ್ಲಿ ರೈತರು ನಷ್ಟ ತಪ್ಪಿಸಲು ಕಾಯುವ ಬದಲು ಸೂಕ್ತ ಪರ್ಯಾಯ ಬೆಳೆಗಳಿಗೆ ಹೋಗುವುದು ಸೂಕ್ತ ಎಂದು ಅವರು ತಿಳಿಸಿದ್ದಾರೆ.ಜುಲೈ ಮಧ್ಯ ಅಥವಾ ಕೊನೆಯ ವಾರದಲ್ಲಿ ಮಳೆಯಾದರೆ, 'ಕೃಷ್ಣ ಪ್ರಭಾ ರುದ್ರ' ತಳಿಯ ಸಸಿಗಳನ್ನು ತಯಾರಿಸಿ ಮೆಣಸಿನಕಾಯಿ ಸಸಿ ನಾಟಿ ಮಾಡಬಹುದು. ಜುಲೈ 2 ನೇ ಅಥವಾ 3 ನೇ ವಾರದಲ್ಲಿ ಮಳೆಯಾದಲ್ಲಿ, ಅಲ್ಪಾವಧಿ ತಳಿಯಾದ 'ಭೀಮಾ ರೆಡ್' ಈರುಳ್ಳಿ ಬಿತ್ತನೆ/ನಾಟಿ ಮಾಡುವುದು ಸೂಕ್ತ ಎಂದು ಹೇಳಿದ್ದಾರೆ.

*ಆಗಸ್ಟ್ ಮೊದಲ ವಾರಕ್ಕೆ ಪರ್ಯಾಯ ಬೆಳೆಗಳು:* ಕೊತ್ತಂಬರಿ, ಚೌಳೆಕಾಯಿ, ಅಜ್ವಾನ ಹಾಗೂ ಚೆಂಡು–ಹೂ ಬೆಳೆಯಲು ಅವಕಾಶವಿದೆ.

*ಕಡಿಮೆ ನೀರಾವರಿ ಸೌಲಭ್ಯವಿದ್ದರೆ:* ಬೆಂಡಿಕಾಯಿ, ಬದನೆ ಹಾಗೂ ಕುಂಬಳ ಜಾತಿಯ ತರಕಾರಿಗಳಾದ ಸೌತೆಕಾಯಿ, ಹೀರೆಕಾಯಿ ಮತ್ತು ಹಾಗಲಕಾಯಿಯನ್ನು ಆಯ್ಕೆ ಮಾಡಿಕೊಳ್ಳಬಹುದು.

ಬಿತ್ತನೆ ಪೂರ್ವ ಹಾಗೂ ಬೆಳೆ ನಿರ್ವಹಣಾ ಕ್ರಮಗಳು:

ಕಡಿಮೆ ನೀರಿನ ಬಳಕೆ ಮತ್ತು ತೇವಾಂಶ ಕಾಪಾಡಿಕೊಳ್ಳಲು ತಂತ್ರಜ್ಞಾನ ಹಾಗೂ ಕ್ರಮಗಳನ್ನು ಅಳವಡಿಸಿಕೊಳ್ಳಬೇಕು. ಮಣ್ಣು ಮತ್ತು ತೇವಾಂಶ ಸಂರಕ್ಷಣೆಗಾಗಿ ಪ್ರತಿ 15–20 ಮೀಟರ್ ಅಂತರದಲ್ಲಿ ಬಾಹ್ಯರೇಖೆ ಕಂದಕ ಹಾಗೂ ಸಣ್ಣ ಚೌಕು ಮಡಿಗಳನ್ನು ನಿರ್ಮಿಸಬೇಕು. ಸಾಂದ್ರವಾಗಿ ಬೆಳೆದ ಮೆಣಸಿನಕಾಯಿ ಹಾಗೂ ಈರುಳ್ಳಿ ಸಾಲುಗಳಲ್ಲಿ ಹೆಚ್ಚುವರಿ ಸಸಿಗಳನ್ನು ತೆಗೆದು ವಿರಳಗೊಳಿಸಬೇಕು.

*ಮಲ್ಚಿಂಗ್ ಮತ್ತು ಹನಿ ನೀರಾವರಿ:*ಸಾವಯವ ಅಥವಾ ಪ್ಲಾಸ್ಟಿಕ್ ಹೊದಿಕೆ ಬಳಸಿ, ಹನಿ ನೀರಾವರಿ ಪದ್ಧತಿಯಲ್ಲಿ ಸಾಲು ಬಿಟ್ಟು ಸಾಲು ನೀರುಣಿಸುವುದರಿಂದ ನೀರನ್ನು ಸಮರ್ಪಕವಾಗಿ ಉಳಿಸಬಹುದು. ಬಿತ್ತನೆ ಸಮಯದಲ್ಲಿ ಪ್ರತಿ ಎಕರೆಗೆ 3 ರಿಂದ 4 ಕೆ.ಜಿ. ಮೈಕ್ರೋರೈಜಾ ಗೊಬ್ಬರವನ್ನು ಸಾವಯವ ಗೊಬ್ಬರದಲ್ಲಿ ಬೆರೆಸಿ ಭೂಮಿಗೆ ಸೇರಿಸಬೇಕು.*ಬರ ನಿರೋಧಕ ಶಕ್ತಿ ಹೆಚ್ಚಿಸಲು ಸಿಂಪಡಣೆಗಳು:*ಬರದ ತೀವ್ರತೆಯಿದ್ದಾಗ ಸಸ್ಯಗಳು ಒಣಗದಂತೆ ತಡೆಯಲು ಮತ್ತು ಮಳೆ ಬಂದ ನಂತರ ಬೆಳವಣಿಗೆ ಪ್ರಚೋದಿಸಲು ವಿವಿಧ ಸಿಂಪಡಣೆಗಳನ್ನು ಕೈಗೊಳ್ಳಬಹುದು. ಪೊಟ್ಯಾಸಿಯಂ ನೈಟ್ರೇಟ್ ಅಥವಾ ಟ್ರೈಕಾಂಟಿನಾಲ್‌ಗಳನ್ನು ಒಮ್ಮೆ ಮಾತ್ರ ಸಿಂಪಡಿಸಬೇಕು. ಬರ ಮುಂದುವರಿದರೆ ಮೇಲು ಗೊಬ್ಬರ ನೀಡುವುದನ್ನು ಮುಂದೂಡಬೇಕು.

1 ಲೀಟರ್ ನೀರಿಗೆ 5 ಗ್ರಾಂ ಪೊಟ್ಯಾಸಿಯಂ ನೈಟ್ರೇಟ್ ಅಥವಾ 0.5 ರಿಂದ 1.0 ಗ್ರಾಂ ಟ್ರೈಕಾಂಟಿನಾಲ್ ಬೆರೆಸಿ ಸಿಂಪಡಿಸುವುದರಿಂದ ಗಿಡಗಳ ಬರ ಎದುರಿಸುವ ಶಕ್ತಿ ಹೆಚ್ಚುತ್ತದೆ. ಮಳೆ ಬಂದ ನಂತರ ಬೆಳೆ ಚೇತರಿಕೆಗೆ ದೀರ್ಘಾವಧಿ ಬರದ ನಂತರ ಮಳೆಯಾದರೆ, ಗಿಡಗಳು ಬೇಗ ಚೇತರಿಸಿಕೊಳ್ಳಲು 1 ಲೀಟರ್ ನೀರಿಗೆ 20 ಗ್ರಾಂ ಯೂರಿಯಾ ಅಥವಾ 20 ಗ್ರಾಂ ಡಿ.ಎ.ಪಿ ಬೆರೆಸಿ ಸಿಂಪಡಿಸಬೇಕು.

200 ಲೀಟರ್ ನೀರಿಗೆ 100 ಗ್ರಾಂ ಮೆಗ್ನೀಷಿಯಂ ಮತ್ತು ಜಿಂಕ್, ಅಥವಾ ಸೀ–ವೀಡ್ ಎಕ್ಸ್ಟ್ರಾ??ಕ್ಟ್ ಅಥವಾ ಮಣ್ಣಿನಲ್ಲಿ ತೇವಾಂಶವಿದ್ದಾಗ ಪ್ರತಿ ಲೀಟರ್ ನೀರಿಗೆ 100 ಮಿ.ಲೀ. ಎರೆಜಲ/ಜೀವಾಮೃತವನ್ನು ಸಿಂಪಡಿಸಬಹುದು.

*ಹಣ್ಣು ಮತ್ತು ಬಹುವಾರ್ಷಿಕ ತೋಟದ ಬೆಳೆಗಳ ರಕ್ಷಣೆ:*

ಫಲ ಕೊಡುವ ಹಾಗೂ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳನ್ನು ಬಿಸಿಲು ಮತ್ತು ನೀರಿನ ಅಭಾವದಿಂದ ರಕ್ಷಿಸಲು ರೈತರು ವಿಶೇಷ ಗಮನಹರಿಸಬೇಕು. ದಟ್ಟವಾದ ಟೊಂಗೆಗಳನ್ನು ನಿಯಮಿತವಾಗಿ ಸವರಬೇಕು. ಹೊಸದಾಗಿ ನೆಟ್ಟ ಹಣ್ಣಿನ ಸಸಿಗಳಿಗೆ ಚೊಗಚೆ, ತೊಗರಿ ಬೀಜಗಳನ್ನು ಬಿತ್ತಿ ನೆರಳು ಒದಗಿಸಬೇಕು.

ದಾಳಿಂಬೆ ಮತ್ತು ಲಿಂಬೆಯಲ್ಲಿ ನೀರು ಕಾಂಡಗಳನ್ನು 'ವಾಟರ್ ಶೂಟ್ಸ್' ತೆಗೆಯಬೇಕು. ಬಾಳೆಯಲ್ಲಿ ಹೆಚ್ಚುವರಿ ಮರಿಗಳನ್ನು ನಿಯಂತ್ರಿಸಬೇಕು ಹಾಗೂ ಮಾವಿನಲ್ಲಿ ಮೇಲ್ಭಾವಣೆ ನಿರ್ವಹಣೆ ಮಾಡಬೇಕು. ತೋಟಗಳಲ್ಲಿ ಹುರುಳಿ, ಅಲಸಂದಿ ಅಥವಾ ಮಕುನಾ ಬೆಳೆದು ಮಣ್ಣಿನ ತೇವಾಂಶ ಆವಿಯಾಗದಂತೆ ತಡೆಯಬಹುದು. ಪ್ರತಿ ಗಿಡಕ್ಕೆ 5 ಕೆ.ಜಿ. ಬೇವಿನ ಹಿಂಡಿ ಅಥವಾ ಇತರೆ ಸಾವಯವ ಹಿಂಡಿಗಳನ್ನು ನೀಡಬೇಕು.*ಇತರ ಕ್ರಮಗಳು:*ಗಡಿಗೆ/ಪ್ಲಾಸ್ಟಿಕ್ ಬಳಸಿ ತೇವಾಂಶ ನಿರ್ವಹಣೆ ಮಾಡುವುದು, 'ಕ್ಯಾಚ್ ಪಿಟ್' ಕಂದಕ ನಿರ್ಮಿಸುವುದು ಹಾಗೂ ಕೆಂಪು ಮಸಾರಿ ನೆಲದಲ್ಲಿ ತಜ್ಞರ ಸಲಹೆಯಂತೆ ಹೈಡ್ರೋಜೆಲ್ ಅಥವಾ ಬಯೋಚಾರ್ ಬಳಸುವುದು ಉಪಯುಕ್ತ ಎಂದಿದ್ದಾರೆ.

ಕಾಲಕಾಲಕ್ಕೆ ಸೂಚಿಸಿದ ಪ್ರಮಾಣದಲ್ಲಿ ಈ ಕ್ರಮಗಳನ್ನು ಕೈಗೊಂಡರೆ ಬರ ಪರಿಸ್ಥಿತಿಯಲ್ಲೂ ತೋಟಗಾರಿಕೆ ಬೆಳೆಗಳನ್ನು ಯಶಸ್ವಿಯಾಗಿ ರಕ್ಷಿಸಿಕೊಳ್ಳಬಹುದು ಎಂದು ತೋಟಗಾರಿಕೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸ್ವಾವಲಂಬನೆಗೆ ಮಹಿಳೆಯರ ಭಾಗವಹಿಸುವಿಕೆ ಅತ್ಯಗತ್ಯ ಜಿಪಂ ಉಪಕಾರ್ಯದರ್ಶಿ ಶಶಿಕಾಂತ್ ಶಿವಪುರೆ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಹಿಳೆಯರು ಪ್ರತಿಯೊಂದು ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದು, ಆಸಕ್ತಿಯಿಂದ ಕೌಶಲ್ಯಗಳನ್ನು ಕಲಿತು ಸಮಾಜದ ಮುಂಚೂಣಿಗೆ ಬರಬೇಕು ಎಂದು ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಶಶಿಕಾಂತ್ ಶಿವಪುರೆ ಅವರು ಕರೆ ನೀಡಿದರು.

ನಗರದ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ–ಉದ್ಯೋಗ ತರಬೇತಿ ಸಂಸ್ಥೆಯ ಆವರಣದಲ್ಲಿ ಗ್ರಾಮೀಣ ಭಾಗದ ಮಹಿಳೆಯರಿಗಾಗಿ ಆಯೋಜಿಸಲಾಗಿದ್ದ 35 ದಿನಗಳ ಉಚಿತ ಮಹಿಳಾ ಬ್ಯೂಟಿ ಪಾರ್ಲರ್ ತರಬೇತಿ ಶಿಬಿರವನ್ನು ಸೋಮವಾರ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಕೌಶಲ್ಯಗಳನ್ನು ಅಳವಡಿಸಿಕೊಂಡು ಯಶಸ್ಸು ಕಾಣಬೇಕು ಮತ್ತು ತನ್ಮೂಲಕ ಸ್ವಂತ ಕಾಲಿನ ಮೇಲೆ ನಿಂತು ಕುಟುಂಬದ ಆರ್ಥಿಕ ಅಭಿವೃದ್ಧಿಗೆ ನೆರವಾಗಬೇಕು ಎಂದು ಸಲಹೆ ನೀಡಿದರು.

ಕೆನರಾ ಬ್ಯಾಂಕ್ ನ ಜಿಲ್ಲಾ ಲೀಡ್ ವ್ಯವಸ್ಥಾಪಕರಾದ ಗಿರೀಶ್ ವಿ. ಕುಲಕರ್ಣಿ ಅವರು ಮಾತನಾಡಿ, ಮಹಿಳಾ ಉದ್ಯಮಿಗಳಿಗಾಗಿ ವಿವಿಧ ಬ್ಯಾಂಕ್‌ಗಳಲ್ಲಿ ಲಭ್ಯವಿರುವ ಆರ್ಥಿಕ ನೆರವು ಹಾಗೂ ಸಾಲ ಸೌಲಭ್ಯಗಳ ಕುರಿತು ವಿವರವಾದ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ–ಉದ್ಯೋಗ ತರಬೇತಿ ಸಂಸ್ಥೆಯ ನಿರ್ದೇಶಕ ವಿನಯ್ ಕುಮಾರ್ ಬಿ. ಕೊಳ್ಳೂರ್‌ಮಠ್, ಕೆನರಾ ಬ್ಯಾಂಕ್ ಜಿ.ಪಂ. ಶಾಖೆಯ ವ್ಯವಸ್ಥಾಪಕ ಜಯಕೃಷ್ಣ, ಜಿಪಂ ಜಿಲ್ಲಾ ವ್ಯವಸ್ಥಾಪಕರಾದ ರಾಜೇಂದ್ರ ಹಾಗೂ ವಿಜಯ ಕುಮಾರ ಮತ್ತು ಎನ್‌ಎಲ್‌ಆರ್‌ಎಂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಸಂಸ್ಥೆಯ ಉಪನ್ಯಾಸಕರಾದ ಜಡೆಪ್ಪ ಜಿ. ಮತ್ತು ದಿನೇಶ ಕುಮಾರ್ ಜಿ., ಸಿಬ್ಬಂದಿಗಳಾದ ಸಿದ್ದಲಿಂಗಮ್ಮ, ಸಂತೋಷಕುಮಾರ್, ಪರಮೇಶ್ ಹಾಗೂ ತರಬೇತಿಯಲ್ಲಿ ಭಾಗವಹಿಸಿರುವ 35 ಜನ ಮಹಿಳಾ ಶಿಬಿರಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಎಐಎಂಐಎಂ ಪಕ್ಷ ಸಂಘಟನೆಗೆ ಒತ್ತು:ಲತೀಫ್ ಖಾನ್



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಬಳ್ಳಾರಿಯಲ್ಲಿ ಎಐಎಂಐಎಂ ಪಕ್ಷ ಸಂಘಟನೆಗೆ – ಒತ್ತು ನೀಡಲಾಗುವುದು ಎಂದು ಪಕ್ಷದ ರಾಜ್ಯಾಧ್ಯಕ್ಷ ಲತೀಫ್ ಖಾನ್ ಹೇಳಿದರು. – ನಗರದ ಗೃಹದಲ್ಲಿ : ಭಾನುವಾರ ನಡೆದ = ಅವರು. ಪಕ್ಷವನ್ನು ರಾಜ್ಯಾದ್ಯಂತ ಬಲಪಡಿಸುವ : ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಉದ್ದೇಶದಿಂದ ಜಿಲ್ಲಾ ಪ್ರವಾಸ ಕೈಗೊಂಡಿರುವುದಾಗಿ ತಿಳಿಸಿದರು.2012ರಿಂದ ಕರ್ನಾಟಕದಲ್ಲಿ ಎಐಎಂಐಎಂ ಪಕ್ಷ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದು, ಜಿಲ್ಲಾ ಪಂಚಾಯಿತಿ, ಮಹಾನಗರ ಪಾಲಿಕೆ ಹಾಗೂ ವಿಧಾನಸಭೆ ಚುನಾವಣೆಯಲ್ಲಿ ಪಕ್ಷವು ಸ್ಪರ್ಧಿಸುತ್ತ ಬಂದಿದೆ ಎಂದು ಹೇಳಿದರು. ಮುಂದಿನ ದಿನಗಳಲ್ಲಿ ಪಕ್ಷದ ಸಂಘಟನೆಯನ್ನು ಮತ್ತಷ್ಟು ಬಲಪಡಿಸಲು ರಾಜ್ಯದಾದ್ಯಂತ ಬೂತ್ ಮಟ್ಟದಲ್ಲಿ ವಿಶೇಷ ಸದಸ್ಯತ್ವ ಹಾಗೂ ಸಂಘಟನೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಅವರು ತಿಳಿಸಿದರು.ಪಕ್ಷದ ಈ ನಿಟ್ಟಿನಲ್ಲಿ ಬಳ್ಳಾರಿ ಜಿಲ್ಲೆಯಲ್ಲಿಯೂ ಕಾರ್ಯಕರ್ತರೊಂದಿಗೆ ಸಭೆ ನಡೆಸಿ, ಸಂಘಟನೆಯನ್ನು ಬಲಪಡಿಸುವ ಕುರಿತು ಚರ್ಚಿಸಲಾಗಿದೆ. ಮುಂಬರುವ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಪಕ್ಷವನ್ನು ಗ್ರಾಮ ಮಟ್ಟದವರೆಗೆ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅವರು ಹೇಳಿದರು.ಸುದ್ದಿಗೋಷ್ಠಿಯಲ್ಲಿ ಎಐಎಂಐಎಂ ಪಕ್ಷದ ಮುಖಂಡರಾದ ನಜೀರ್ ಹುನಯಲ್, ದಾದಾಪೀರ್ ಬೆಟ್ಟಗೇರಿ, ಮೊಹಮ್ಮದ್ ಶಾರುಖ್ ಪಾಟೀಲ್, ಶಫಾಕತ್ ಬಡಗೇರಿ, ಬಳ್ಳಾರಿಯ ಝಾಕೀರ್ ಸೇರಿದಂತೆ ಪಕ್ಷದ ಪ್ರಮುಖ ಮುಖಂಡರು ಉಪಸ್ಥಿತರಿದ್ದರು.

# ಗೃಹಲಕ್ಷ್ಮೀ ಯೋಜನೆಯು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪೂರಕ: ಚಿದಾನಂದಪ್ಪ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ಗೃಹಲಕ್ಷ್ಮೀ ಯೋಜನೆಯು ಮಹಿಳೆಯರ ಆರ್ಥಿಕ ಸಬಲೀಕರಣದತ್ತ ಇಟ್ಟ ಪ್ರಮುಖ ಹೆಜ್ಜೆಯಾಗಿದೆ ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ. ಚಿದಾನಂದಪ್ಪ ಅವರು ಹೇಳಿದರು.ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮೀ ಯೋಜನೆ ಯಶಸ್ವಿಯಾಗಿ ಮೂರು ವರ್ಷಗಳನ್ನು ಪೂರ್ಣಗೊಳಿಸಿ ನಾಲ್ಕನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ ಹಿನ್ನೆಲೆಯಲ್ಲಿ ಬಳ್ಳಾರಿ ತಾಲೂಕಿನ ಎಂ. ಗೋನಾಳ್ ಗ್ರಾಮ ಪಂಚಾಯಿತಿಯಲ್ಲಿ ಆವರಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ವಿಶೇಷ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಗೃಹಲಕ್ಷ್ಮೀ ಯೋಜನೆಯ ನೆರವನ್ನು ಮಹಿಳೆಯರು ತಮ್ಮ ಮಕ್ಕಳ ಶಿಕ್ಷಣ, ಆರೋಗ್ಯ, ಪೌಷ್ಟಿಕ ಆಹಾರ ಹಾಗೂ ಮನೆ ನಿರ್ವಹಣೆಗೆ ಸಮರ್ಪಕವಾಗಿ ಬಳಸಿಕೊಳ್ಳುತ್ತಿದ್ದು, ಇದು ಅವರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ಗ್ರಾಮೀಣ ಭಾಗದಲ್ಲಿ ಇಂತಹ ಜಾಗೃತಿ ಕಾರ್ಯಕ್ರಮಗಳು ಸರ್ಕಾರದ ಸೌಲಭ್ಯಗಳನ್ನು ಕಟ್ಟಕಡೆಯ ವ್ಯಕ್ತಿಗೂ ತಲುಪಿಸಲು ಸಹಕಾರಿಯಾಗಲಿವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.ರಾಜ್ಯ ಸರ್ಕಾರ ಜಾರಿಗೆ ತಂದಿರುವ ಪಂಚ ಗ್ಯಾರಂಟಿ ಯೋಜನೆಗಳಿಗೆ ಜಿಲ್ಲೆಗೆ ಒಟ್ಟಾರೆಯಾಗಿ ರೂ.2,470 ಕೋಟಿಗೂ ಅಧಿಕ (2,470,01,87,371) ಅನುದಾನ ವಿನಿಯೋಗವಾಗಿದೆ. ಗೃಹಲಕ್ಷ್ಮೀ ಯೋಜನೆಗೆ 1,167.58 ಕೋಟಿ ಅನುದಾನ, ಅನ್ನಭಾಗ್ಯ ಯೋಜನೆಗೆ ಒಟ್ಟು ಅನುದಾನ ರೂ.471.28 ಕೋಟಿ, ಗೃಹಜ್ಯೋತಿ ಯೋಜನೆಗೆ ರೂ.494.82 ಕೋಟಿ, ಶಕ್ತಿ ಯೋಜನೆಯಡಿ ರೂ.303.29 ಕೋಟಿ ಮತ್ತು ಯುವನಿಧಿ ಯೋಜನೆಗೆ ಒಟ್ಟು ಬಿಡುಗಡೆಯಾದ ನೆರವು 33.04 ಕೋಟಿ ರೂ. ಆಗಿದೆ ಎಂದು ಅವರು ಮಾಹಿತಿ ನೀಡಿದರು.ಬಳ್ಳಾರಿ ತಾಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಎಂ. ನಾಗಭೂಷಣ್ ಗೌಡ ಅವರು ಮಾತನಾಡಿ, ಮಾಹಿತಿಯ ಕೊರತೆಯಿಂದ ಯಾವುದೇ ಅರ್ಹ ಫಲಾನುಭವಿ ಸೌಲಭ್ಯದಿಂದ ವಂಚಿತರಾಗಬಾರದು. ಫಲಾನುಭವಿಗಳು ತಮ್ಮ ಬ್ಯಾಂಕ್ ಖಾತೆ, ಆಧಾರ್ ಇತ್ಯಾದಿ ದಾಖಲೆಗಳನ್ನು ಸರಿಯಾಗಿ ನಿರ್ವಹಿಸಬೇಕು ಹಾಗೂ ವದಂತಿಗಳಿಗೆ ಕಿವಿಗೊಡಬಾರದು ಎಂದು ಹೇಳಿದರು.ಸರ್ಕಾರದ ಜನಪರ ಯೋಜನೆಗಳ ಕುರಿತು ಅರ್ಹ ಫಲಾನುಭವಿಗಳಲ್ಲಿ ಅರಿವು ಮೂಡಿಸುವುದು, ತಾಂತ್ರಿಕ ಗೊಂದಲಗಳನ್ನು ನಿವಾರಿಸುವುದು ಹಾಗೂ ಗ್ಯಾರಂಟಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಸಾರ್ವಜನಿಕರ ಸಹಭಾಗಿತ್ವವನ್ನು ಹೆಚ್ಚಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಬಳ್ಳಾರಿ ತಾಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಧರ ಬಾರಿಕರ್ ಹಾಗೂ ಎಂ.ಗೋನಾಳ್ ಗ್ರಾಪಂ ನ ಪಂಚಾಯತ್ ಅಭಿವೃದ್ಧಿ ಅಧಿಕಾರಿ ರಾಜಕುಮಾರ ಅವರು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ದೊರೆಯುವ ಯೋಜನೆಗಳು, ಸ್ವಚ್ಛತೆ, ಉದ್ಯೋಗ ಖಾತರಿ ಹಾಗೂ ಅರ್ಜಿ ಸಲ್ಲಿಸುವ ವಿಧಾನಗಳ ಕುರಿತು ಮಾಹಿತಿ ನೀಡಿದರು.ಜೆಸ್ಕಾಂ ಇಇ ಹುಸೇನಪ್ಪ ಅವರು, 'ಗೃಹಜ್ಯೋತಿ' ಯೋಜನೆ ಹಾಗೂ ವಿದ್ಯುತ್ ಉಳಿತಾಯದ ಕುರಿತು ಮಾಹಿತಿ ನೀಡಿದರು. ಸಿಡಿಪಿಒ ಸಿಂಧೆ ನಂದಿನಿ ಅವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸೌಲಭ್ಯಗಳ ಕುರಿತು ವಿವರಿಸಿದರು.

ಬಳ್ಳಾರಿ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸದಸ್ಯೆ ಎನ್. ಗೀತ ಅವರು ಮಹಿಳೆಯರು ಯೋಜನೆಯ ಸದುಪಯೋಗ ಪಡೆಯುವಂತೆ ಕರೆ ನೀಡಿದರು.

ಬ್ಯಾಂಕ್ ಖಾತೆ, ಆಧಾರ್ ಜೋಡಣೆ ಹಾಗೂ ಹಣ ಜಮೆಯಾಗುವ ಪ್ರಕ್ರಿಯೆಯಲ್ಲಿನ ಗೊಂದಲಗಳಿಗೆ ಅಧಿಕಾರಿಗಳು ಸ್ಥಳದಲ್ಲೇ ಸ್ಪಷ್ಟನೆ ನೀಡಿದರು.

ಕಾರ್ಯಕ್ರಮದಲ್ಲಿ ಗ್ಯಾರಂಟಿ ಯೋಜನೆಗಳ ಜಾಗೃತಿ ಮೂಡಿಸುವ ಪ್ರತಿಜ್ಞಾವಿಧಿ ಸ್ವೀಕರಿಸಲಾಯಿತು ಹಾಗೂ ಮಾಹಿತಿ ಕರಪತ್ರಗಳನ್ನು ವಿತರಿಸಲಾಯಿತು. ಹಲವು ಮಹಿಳೆಯರು ಗೃಹಲಕ್ಷಿ ?? ಹಣದಿಂದ ತಮ್ಮ ಕುಟುಂಬ ನಿರ್ವಹಣೆಗೆ ಆಗುತ್ತಿರುವ ಅನುಕೂಲಗಳ ಕುರಿತು ತಮ್ಮ ಅನುಭವಗಳನ್ನು ಹಂಚಿಕೊಂಡರು.ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರು, ಅಧಿಕಾರಿಗಳು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ಮಹಿಳಾ ಸ್ವಸಹಾಯ ಸಂಘಗಳ ಪ್ರತಿನಿಧಿಗಳು ಹಾಗೂ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

# ಅಂಗನವಾಡಿ ಕಾರ್ಯಕರ್ತೆಯರ ಪಾತ್ರ ದೊಡ್ಡದು: ಶಶಿಕಾಂತ್ ಶಿವಪೂರೆ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯು ಅತ್ಯಂತ ಪ್ರಮುಖವಾಗಿದ್ದು, ಅರ್ಹ ನಾಗರಿಕರು ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ ಮಾಡಿಕೊಳ್ಳಲು ಮತ್ತು ಅಗತ್ಯ ತಿದ್ದುಪಡಿಗಳನ್ನು ತಂದುಕೊಳ್ಳಲು ಇದು ಸಕಾಲವಾಗಿದೆ ಎಂದು ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಶಶಿಕಾಂತ್ ಶಿವಪೂರೆ ಅವರು ಹೇಳಿದರು.

ಜಿಲ್ಲಾ ಪಂಚಾಯತ್, ಜಿಲ್ಲಾ ಸ್ವೀಪ್ ಸಮಿತಿ ಮತ್ತು ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರ ಸಹಯೋಗದೊಂದಿಗೆ ಬಿಎಂಸಿಆರ್‌ಸಿ ಸಭಾಂಗಣದಲ್ಲಿ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗಾಗಿ ಅಪೌಷ್ಟಿಕತೆ ನಿರ್ಮೂಲನಾ ಕಾರ್ಯಕ್ರಮದೊಂದಿಗೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಹಾಗೂ ವ್ಯವಸ್ಥಿತ ಮತದಾರರ ಶಿಕ್ಷಣ ಮತ್ತು ಚುನಾವಣಾ ಭಾಗವಹಿಸುವಿಕೆ ಕುರಿತು ಭಾನುವಾರ ಹಮ್ಮಿಕೊಂಡಿದ್ದ ವಿಶೇಷ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.ತಳಮಟ್ಟದಲ್ಲಿ ಸಾರ್ವಜನಿಕರೊಂದಿಗೆ ನೇರ ಸಂಪರ್ಕ ಹೊಂದಿರುವ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಈ ಕುರಿತು ಅರಿವು ಮೂಡಿಸುವಲ್ಲಿ ಮಹತ್ವದ ಪಾತ್ರವಹಿಸಬೇಕು ಎಂದು ಅವರು ಕರೆ ನೀಡಿದರು.

ಪ್ರತಿಯೊಬ್ಬ ಅರ್ಹ ಮತದಾರನೂ ಮತದಾನದ ಹಕ್ಕು ಪಡೆಯುವಂತಾಗಲು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ವ್ಯಾಪಕ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಪಂ ಸಹಾಯಕ ನಿರ್ದೇಶಕ ಎಂ. ಬಸವರಾಜ ಹಿರೇಮಠ, ಬಿಎಂಸಿಆರ್‌ಸಿಯ ಮಕ್ಕಳ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕ ಡಾ.ದುರ್ಗಪ್ಪ, ಜಿಲ್ಲಾ ವಿಬಿಡಿಸಿ ಅಧಿಕಾರಿ ಡಾ. ಅಬ್ದುಲ್, ಬಿಎಂಸಿಆರ್‌ಸಿ ಯ ಪ್ರಾಂಶುಪಾಲ ಡಾ. ಮಲ್ಲಿಕಾರ್ಜುನ, ಐಎಪಿ ಡಾ. ರಾಜೇಶ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ನೂರಾರು ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ ಎಆರ್ ಮತ್ತು ಸ್ವೀಪ್ ಅಭಿಯಾನದ ಉದ್ದೇಶಗಳನ್ನು ಮನವರಿಕೆ ಮಾಡಿಕೊಡಲಾಯಿತು.

# ಮಂಡ್ಯ ನಗರಸಭೆ ಅಧ್ಯಯನ ತಂಡದಿಂದ ಪರಿವೀಕ್ಷಣೆ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ಮಂಡ್ಯ ನಗರಸಭೆಯ ಅಧ್ಯಯನ ತಂಡ ಬಳ್ಳಾರಿಗೆ ಮಹಾನಗರ ಪಾಲಿಕೆ ಮೇಯರ್ ಗಾದೆಪ್ಪರೊಂದಿಗೆ ಪರಿವೀಕ್ಷಣೆ

ನೀರಿನ ಘನತ್ಯಾಜ್ಯ ಮತ್ತು ತ್ಯಾಜ್ಯ ಸಂಗ್ರಹಣೆ, ನಿರ್ವಹಣೆ ಹಾಗೂ ಶುದ್ದೀಕರಣ ವ್ಯವಸ್ಥೆಯ ಕುರಿತು ಅಧ್ಯಯನ ನಡೆಸುವ ಉದ್ದೇಶದಿಂದ ಮಂಡ್ಯ ನಗರಸಭೆಯವರು ಬಳ್ಳಾರಿ ಜಿಲ್ಲೆಯಲ್ಲಿ ಖಾಸಗಿ ಸಂಸ್ಥೆ ನಿರ್ವಹಿಸುತ್ತಿರುವ ಘನತ್ಯಾಜ್ಯ ಮತ್ತು ತ್ಯಾಜ್ಯ ನೀರಿನ ಸಂಗ್ರಹಣಾ ಘಟಕಕ್ಕೆ ಇಂದು ಭೇಟಿ ನೀಡಿ, ಪರಿವೀಕ್ಷಣೆ ನಡೆಸಿದರು.

ಮಂಡ್ಯ ನಗರಸಭೆಯ ಅಧ್ಯಯನ ತಂಡದ ಜೊತೆ ಬಳ್ಳಾರಿ ಮಹಾನಗರ ಪಾಲಿಕೆಯ ಮಹಾಪೌರರಾದ ಪೂಜಾರಿ ಗಾದೆಪ್ಪರವರು ಘನತ್ಯಾಜ್ಯ ಮತ್ತು ತ್ಯಾಜ್ಯ ನೀರಿನ ಸಂಗ್ರಹಣಾ ಘಟಕಗಳ ನಿರ್ವಹಣೆಯ ಬಗ್ಗೆ ಮಾಹಿತಿ ವಿನಿಮಯ ಮಾಡಿಕೊಂಡರು.

ಈ ಸಂದರ್ಭದಲ್ಲಿ ಬಳ್ಳಾರಿ ಮಹಾನಗರ ಪಾಲಿಕೆಯ ಸ್ಥಾಯಿ ಸಮಿತಿ ಅಧ್ಯಕ್ಷರಾದ ಪೇರಂ ವಿವೇಕ್ ಹಾಗೂ ವಿ. ಕುಬೇರ ಮತ್ತು ಪಾಲಿಕೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಕಲಬುರಗಿಯಲ್ಲಿ ಡೆಂಗೆ ನಿಯಂತ್ರಣಕ್ಕೆ ಸಮರೋಪಾದಿ ಕಾರ್ಯಾಚರಣೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಜು.20: ರಾಜ್ಯದ ವಿವಿಧ ಭಾಗಗಳಲ್ಲಿ ಮಳೆಗಾಲದ ಹಿನ್ನೆಲೆಯಲ್ಲಿ ಡೆಂಗ್ಯೂ ಪ್ರಕರಣಗಳು ಹೆಚ್ಚಾಗುತ್ತಿರುವ ನಡುವೆ, ಕಲಬುರಗಿ ಜಿಲ್ಲೆಯಲ್ಲಿ ರೋಗ ಹರಡುವಿಕೆಯನ್ನು ಸಂಪೂರ್ಣವಾಗಿ ತಡೆಗಟ್ಟಲು ಜಿಲ್ಲಾಡಳಿತ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಮರೋಪಾದಿ ಕಾರ್ಯಾಚರಣೆಗೆ ಇಳಿದಿವೆ.ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮದ ಅಡಿಯಲ್ಲಿ ಜಿಲ್ಲೆಯಾದ್ಯಂತ ಸಮಗ್ರ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ ಶರಣಬಸಪ್ಪ ಖ್ಯಾತನಾಳ ತಿಳಿಸಿದ್ದಾರೆ.

2026ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಇದುವರೆಗೆ 21,088 ಶಂಕಿತ ಡೆಂಗ್ಯೂ ಪ್ರಕರಣಗಳ ರಕ್ತ ಪರೀಕ್ಷೆ ನಡೆಸಲಾಗಿದ್ದು, ಕೇವಲ 111 ಪ್ರಕರಣಗಳು ಮಾತ್ರ ದೃಢಪಟ್ಟಿವೆ. ಇವುಗಳಲ್ಲಿ 76 ಪ್ರಕರಣಗಳು ಖರಂಒ ಒಂಅ ಇಐಖಖಂ ಹಾಗೂ 35 ಪ್ರಕರಣಗಳು ಓಖಖ ಇಐಖಖಂ ಪರೀಕ್ಷೆಯಲ್ಲಿ ದೃಢಪಟ್ಟಿವೆ. ನೆಮ್ಮದಿಯ ಸಂಗತಿಯೆಂದರೆ, ಜಿಲ್ಲೆಯಲ್ಲಿ ಇದುವರೆಗೆ ಯಾವುದೇ ಡೆಂಗ್ಯೂ ಸಂಬಂಧಿತ ಸಾವು ಸಂಭವಿಸಿಲ್ಲ. ಕಳೆದ ವರ್ಷಕ್ಕೆ ಹೋಲಿಸಿದರೆ ಹೆಚ್ಚಿನ ಸಂಖ್ಯೆಯ ಶಂಕಿತ ಪ್ರಕರಣಗಳನ್ನು ಪರೀಕ್ಷಿಸಿದ್ದರೂ, ನಿರಂತರ ಜ್ವರ ಸಮೀಕ್ಷೆ ಹಾಗೂ ಲಾರ್ವಾ ಸಮೀಕ್ಷೆಯ ಫಲವಾಗಿ ರೋಗವನ್ನು ಹದಬಸ್ತಿನಲ್ಲಿಡಲು ಇಲಾಖೆಗೆ ಸಾಧ್ಯವಾಗಿದೆ.

## ಬಿಜೆಪಿ ಎಸ್‌ಟಿ ಮೋರ್ಚಾ ಜಿಲ್ಲಾ ಉಪಾಧ್ಯಕ್ಷರಾಗಿ ಅರ್ಜುನ್ ನಾಯಕ ನೇಮಕ



**ಗಂಗಾವತಿ:** ಭಾರತೀಯ ಜನತಾ ಪಾರ್ಟಿ (ಬಿಜೆಪಿ) ಕೊಪ್ಪಳ ಜಿಲ್ಲಾ ಎಸ್‌ಟಿ ಮೋರ್ಚಾದ ಜಿಲ್ಲಾ ಉಪಾಧ್ಯಕ್ಷರಾಗಿ ಅರ್ಜುನ್ ನಾಯಕ ನೇಮಕಗೊಂಡಿದ್ದಾರೆ.

ನೇಮಕದ ನಂತರ ಅವರು ಪಕ್ಷದ ಹಿರಿಯ ನಾಯಕರು ಹಾಗೂ ಪದಾಧಿಕಾರಿಗಳಿಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿ ಮಾತನಾಡಿದರು. ಮಾಜಿ ಸಚಿವರು ಹಾಗೂ ಗಂಗಾವತಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಗಾಲಿ ಜನಾರ್ಧನ ರೆಡ್ಡಿ, ಮಾಜಿ ಶಾಸಕರಾದ ಪರಣ್ಣ ಮನುವಳ್ಳಿ, ಬಿಜೆಪಿ ಕೊಪ್ಪಳ ಜಿಲ್ಲಾ ಅಧ್ಯಕ್ಷ ನವೀನ್ ಗುಳಗಣ್ಣ, ಮಾಜಿ ಸಂಸದ ಶಿವರಾಮಗೌಡ, ಮಾಜಿ ಜಿಲ್ಲಾಧ್ಯಕ್ಷ ವಿರುಪಾಕ್ಷಪ್ಪ ಸಿಂಗನಾಳ ಸೇರಿದಂತೆ ಪಕ್ಷದ ಎಲ್ಲಾ ಹಿರಿಯ ಮುಖಂಡರು, ಜಿಲ್ಲಾ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ತಮ್ಮ ಮೇಲೆ ನಂಬಿಕೆ ಇಟ್ಟು ಈ ಜವಾಬ್ದಾರಿಯನ್ನು ನೀಡಿರುವುದಕ್ಕೆ ಧನ್ಯವಾದಗಳನ್ನು ಅರ್ಪಿಸಿದರು. ಈ ಕುರಿತು ಮಾತನಾಡಿದ ಅರ್ಜುನ್ ನಾಯಕ, "ಬಿಜೆಪಿ ಕೊಪ್ಪಳ ಜಿಲ್ಲಾ ಎಸ್‌ಟಿ ಮೋರ್ಚಾ ಜಿಲ್ಲಾ ಉಪಾಧ್ಯಕ್ಷರಾಗಿ ನನ್ನನ್ನು ನೇಮಕ ಮಾಡಿರುವುದು ನನಗೆ ಹೆಮ್ಮೆಯ ವಿಷಯವಾಗಿದೆ. ನನ್ನ ಮೇಲೆ ವಿಶ್ವಾಸವಿಟ್ಟು ಜವಾಬ್ದಾರಿ ನೀಡಿದ ಪಕ್ಷದ ಎಲ್ಲ ನಾಯಕರಿಗೂ ಹೃದಯಪೂರ್ವಕ ಕೃತಜ್ಞತೆಗಳು. ಪಕ್ಷದ ಸಿದ್ಧಾಂತ ಹಾಗೂ ಸಂಘಟನೆ ಬಲಪಡಿಸುವ ನಿಟ್ಟಿನಲ್ಲಿ ಸಂಪೂರ್ಣ ಸಮರ್ಪಣಾ ಮನೋಭಾವದಿಂದ ಕಾರ್ಯನಿರ್ವಹಿಸುತ್ತೇನೆ. ಎಸ್‌ಟಿ ಸಮುದಾಯದ ಅಭಿವೃದ್ಧಿ ಹಾಗೂ ಪಕ್ಷದ ಬೆಳವಣಿಗೆಗೆ ಶ್ರಮಿಸಿ, ನೀಡಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸುತ್ತೇನೆ" ಎಂದು ತಿಳಿಸಿದ್ದಾರೆ.ಅವರ ನೇಮಕಕ್ಕೆ ಬಿಜೆಪಿ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಅಭಿನಂದನೆಗಳನ್ನು ಸಲ್ಲಿಸಿ, ಮುಂದಿನ ರಾಜಕೀಯ ಜೀವನಕ್ಕೆ ಶುಭ ಹಾರೈಸಿದ್ದಾರೆ.

## ಜು.29 ಹಡಪದ ಅಪ್ಪಣ್ಣ ಜಯಂತಿ

**ಬಾಗಲಕೋಟೆ:** ಜಿಲ್ಲಾಡಳಿತ, ಜಿ.ಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜುಲೈ 29 ರಂದು ಹಡಪದ ಅಪ್ಪಣ್ಣನವರ ಜಯಂತಿಯನ್ನು ಅರ್ಥಪೂರ್ಣವಾಗಿ ಹಾಗೂ ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕಚೇರಿಯ ಸಹಾಯಕ ಅಧಿಕಾರಿ ಬಿ.ಎಸ್.ಕಡಕಬಾವಿ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಹಡಪದ ಅಪ್ಪಣ್ಣ ಜಯಂತಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹಡಪದ ಅಪ್ಪಣ್ಣ ಅವರ ಜೀವನ, ತತ್ವಾದರ್ಶಗಳು ಹಾಗೂ ಸಮಾಜಮುಖಿ ಕೊಡುಗೆಗಳನ್ನು ಜನರಿಗೆ ಪರಿಚಯಿಸುವ ಉದ್ದೇಶದಿಂದ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಸಿದ್ದತೆಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ತಿಳಿಸಿದರು. ಹಡಪದ ಅಪ್ಪಣ್ಣನವರ ಕುರಿತು ಮಾತನಾಡಲು ಉತ್ತಮ ಉಪನ್ಯಾಸಕರನ್ನು ಕರೆಯಿಸುವಂತೆ ತಿಳಿಸಿದರು. ಜಯಂತಿ ದಿನದಂದು ಬೆಳಿಗ್ಗೆ ಹಡಪದ ಅಪ್ಪಣ್ಣನವರ ಭಾವಚಿತ್ರದ ಮೆರವಣಿಗೆ ನಡೆಯಲಿದ್ದು, ನಂತರ ವೇದಿಕೆ ಕಾರ್ಯಕ್ರಮ ನವನಗರದ ಡಾ.ಬಿ.ಆರ್.ಅಂಬೇಡ್ಕರ ಭವನದಲ್ಲಿ ಜರುಗಿಸಲಾಗುತ್ತದೆ. ಕಾರ್ಯಕ್ರಮದಲ್ಲಿ ಸಮುದಾಯ ಮುಖಂಡರು, ಸಾರ್ವಜನಿಕರು ಹೆಚ್ಚಿನ ಪ್ರಮಾಣದಲ್ಲಿ ಭಾಗವಹಿಸುವಂತೆ ಅಗತ್ಯ ವ್ಯವಸ್ಥೆ ಮಾಡಬೇಕು. ಶಿಷ್ಠಾಚಾರದ ಪ್ರಕಾರ ಆಮಂತ್ರಣ ಪತ್ರಿಕೆ ಮುದ್ರಣ, ವೇದಿಕೆ ನಿರ್ಮಾಣ ಸೇರಿದಂತೆ ಇತರ ಕಾರ್ಯಗಳನ್ನು ಅಚ್ಚುಕಟ್ಟಾಗಿ ಮಾಡಲು ತಿಳಿಸಿದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ ಹಾಗೂ ಸಮುದಾಯದ ಮುಖಂಡರಾದ ಮಲ್ಲಣ್ಣ ಚೊಳಚಗುಡ್ಡ, ಲಕ್ಷ್ಮಣ ಹಡಪದ, ಎ.ಜಿ.ಹಡಪದ, ಎಚ್.ಡಿ.ವೈದ್ಯ, ಮಲ್ಲಪ್ಪ ಸೂಳಿಕೇರಿ ಉಪಸ್ಥಿತರಿದ್ದರು.

## ಅರಣ್ಯೀಕರಣ ನಿರ್ಲಕ್ಷ್ಯ: ದೊಡ್ಡ ಸಮಸ್ಯೆ




**ಬಾಗಲಕೋಟೆ:** ನಮ್ಮ ಭೌಗೋಳಿಕ ಪ್ರದೇಶದಲ್ಲಿ ಶೇ.35ರಷ್ಟು ಅರಣ್ಯ ಪ್ರದೇಶ ಇರಬೇಕು. ಹಾಗಿದ್ದಾಗ ಮಾತ್ರ ಇಡೀ ವಾತಾವರಣ ಚೆನ್ನಾಗಿರುತ್ತದೆ. ಆದರೆ ಆಧುನಿಕತೆ ಹೆಸರಿನಲ್ಲಿ ಅರಣ್ಯ ನಾಶ ನಿರಂತರ ಮುಂದುವರೆದಿದೆ. ಇದು ದೊಡ್ಡ ಸಮಸ್ಯೆ ತಂದೊಡ್ಡುವ ಸಂಭವವಿದೆ ಈ ಬಗ್ಗೆ ಎಚ್ಚರವಹಿಸುವುದು ಸೂಕ್ತ ಎಂದು ರೋಟರಿ ಕ್ಲಬ್ ಅಧ್ಯಕ್ಷ ವಿಜಯಕುಮಾರ ಹೊಸೂರ ಹೇಳಿದರು.

ನಗರದ ವಿನಾಯಕ ನಗರದಲ್ಲಿ ರೋಟರಿ ಕ್ಲಬ್‌ನಿಂದ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿ, ಒಂದು ಗಿಡ ಕಡಿದರೆ ಪರ್ಯಾಯವಾಗಿ 10 ಸಸಿ ನೆಡುವ ಕಾರ್ಯ ಪ್ರತಿಯೊಬ್ಬರೂ ಮಾಡಬೇಕು. ಆದರೆ ಈಚಿನ ದಿನಗಳಲ್ಲಿ ಮರಗಳ ಮಾರಣಹೋಮ ನಿರಂತರವಾಗಿ ನಡೆಯುತ್ತಿದೆ. ಹೀಗಾಗಿ ಸಂಘ-ಸಂಸ್ಥೆಗಳು, ಸಾಮಾಜಿಕ ಕಾರ್ಯಕರ್ತರು ಈ ಕುರಿತು ಹೆಚ್ಚಿನ ಮುತುವರ್ಜಿವಹಿಸಬೇಕಿದೆ ಎಂದರು. ಬಾಗಲಕೋಟೆಯ ರೋಟರಿ ಕ್ಲಬ್‌ನಿಂದ ಅರಣ್ಯೀಕರಣಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಸರ್ಕಾರಿ ಜಾಗೆ, ಶಾಲೆ, ಕಾಲೇಜುಗಳ ಆವರಣದಲ್ಲಿ ಸಸಿ ನೆಡಲು ಯೋಜನೆ ಹಾಕಿಕೊಳ್ಳಲಾಗಿದೆ. ಸಧ್ಯ ವಿವಿಧ ಬಗೆಯ 100ಕ್ಕೂ ಹೆಚ್ಚು ಸಸಿಗಳನ್ನು ನೆಡಲಾಗಿದೆ. ಕೇವಲ ಸಸಿಗಳನ್ನು ನೆಟ್ಟು ಸುಮ್ಮನೆ ಬಿಡುವುದಲ್ಲ. ಅವುಗಳ ಪಾಲನೆಯೂ ಮಾಡಲಾಗುತ್ತದೆ ಎಂದು ಅವರು ತಿಳಿಸಿದರು. ಅರಣ್ಯ ಇಲಾಖೆಯ ಆರ್‌ಎಫ್‌ಓ ಬಸವರಾಜ ಅರಿಶಿಣದ, ರೋಟರಿ ಕ್ಲಬ್‌ನ ಖಜಾಂಜಿ ತುಕಾರಾಮ ಟಿ.ಎನ್, ಸದಸ್ಯರಾದ ಚಂದ್ರಶೇಖರ ಕಟಗೇರಿ, ಅಶೋಕ ಶಿರಬೂರ, ಚೆನ್ನಣ್ಣವರ್ ಎಸ್.ಎಲ್, ಬಿ.ಕೆ. ದೇವಶೆಟ್ಟಿ, ಗಂಗಾಧರ ಬೀಳಗಿ, ಪರಶುರಾಮ ಮುಳಗುಂದ, ಸಂತೋಷ ಕೊಠಾರಿ, ಜಯಪ್ರಕಾಶ ಬನ್ನಿ, ಸತೀಶ ಬೇತಾಳ, ದಿನೇಶ ಬಾರ್ಸಿ, ಸೋಮು ಪರಾಂಡೆ, ಸಂತೋಷ ನಾವಲಗಿ, ಸುರೇಂದ್ರಕುಮಾರ್ ಕೆ.ಎಂ ಹಾಗೂ ಇನ್ನರ್‌ವೀಲ್ ಸದಸ್ಯರು, ವಿನಾಯಕ ನಗರದ ನಿವಾಸಿಗಳು ಪಾಲ್ಗೊಂಡಿದ್ದರು. ನಂತರ ರೋಟರಿ ಕ್ಲಬ್ ಹಾಗೂ ಅರಣ್ಯ ಇಲಾಖೆ ಸಹಯೋಗದೊಂದಿಗೆ 100 ಸಸಿಗಳನ್ನು ವಿನಾಯಕ ನಗರದ ರುದ್ರಾಕ್ಷಿ ಲೇಔಟ್‌ನಲ್ಲಿ ನೆಡಲಾಯಿತು.

# ಯುವ ದಂತವೈದ್ಯರಿಗೆ ತರಬೇತಿ ಅಗತ್ಯ: ಡಾ.ವೆಂಕಟೇಶ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ತಂತ್ರಜ್ಞಾನದ ಪರಿಣಾಮ ಇಂದಿನ ದಿನಗಳಲ್ಲಿ ದಂತ ವಿಜ್ಞಾನದ ಅಧ್ಯಯನಕ್ಕೆ ಅಗತ್ಯವಾದ ಮಾಹಿತಿ ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಾಗುತ್ತಿದೆ. ಲಭ್ಯವಿರುವ ಸಂಪನ್ಮೂಲ ಬಳಸಿಕೊಂಡು ದಂತ ವೈದ್ಯಕೀಯ ಕ್ಷೇತ್ರದಲ್ಲಿ ಪರಿಣಿತಿ ಸಾಧಿಸಲು ಸಾಧ್ಯವಿದೆ. ಅಧ್ಯಯನದ ಜೊತೆಗೆ ಯುವದಂತವೈದ್ಯರಿಗೆ ತರಬೇತಿಯನ್ನು ನೀಡುವುದು ಅಗತ್ಯವಿದೆ ಎಂದು ಭಾರತೀಯ ಬಾಯಿ ಮತ್ತು ಮುಖದ ಶಸ್ತ್ರಚಿಕಿತ್ಸಾ ತಜ್ಞರ ಕರ್ನಾಟಕ ಶಾಖೆಯ ಅಧ್ಯಕ್ಷ ಮತ್ತು ಎಸ್.ಡಿ.ಎಮ್ ಡೆಂಟಲ್ ಕಾಲೇಜ್ ಪ್ರಾಧ್ಯಾಪಕ ಡಾ.ವೆಂಕಟೇಶ ಆನೆಹೊಸುರ ಅಭಿಪ್ರಾಯಪಟ್ಟರು.

ಬಿ.ವಿ.ವಿ ಸಂಘದ ಪಿ.ಎಮ್.ನಾಡಗೌಡ ಮೆಮೋರಿಯಲ್ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ ಸೋಮವಾರ ಬಾಯಿ ಮತ್ತು ಮುಖದ ಶಸ್ತ್ರಚಿಕಿತ್ಸಾ ವಿಭಾಗ ಮತ್ತು ಭಾರತೀಯ ಬಾಯಿ ಮತ್ತು ಮುಖದ ಶಸ್ತ್ರಚಿಕಿತ್ಸಾ ತಜ್ಞರ ಸಂಘದ ಕರ್ನಾಟಕ ಶಾಖೆಯ ಸಹಯೋಗದಲ್ಲಿ ಆಯೋಜಿಸಿದ್ದ ದಂತ ವಿಜ್ಞಾನ ಶಿಕ್ಷಣ ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಭಾರತೀಯ ಬಾಯಿ ಮತ್ತು ಮುಖದ ಶಸ್ತ್ರಚಿಕಿತ್ಸಾ ತಜ್ಞರ ಕರ್ನಾಟಕ ಶಾಖೆಯ ಮೂಲಕ ದಂತ ವೈದ್ಯಕೀಯ ಕಾರ್ಯಾಗಾರಗಳನ್ನು ರಾಜ್ಯದಾದ್ಯಂತ ಆಯೋಜಿಸಲು ಯೋಜನೆ ರೂಪಿಸಲಾಗಿದೆ. ಈ ಮೂಲಕ ದಂತವೈದ್ಯಕೀಯ ಸ್ನಾತಕೋತ್ತರ



ವಿದ್ಯಾರ್ಥಿಗಳಿಗೆ ಮತ್ತು ದಂತವೈದ್ಯರಿಗೆ ಪರಿಣತಿ ಹೊಂದಲು ಪ್ರಯೋಜನವಾಗಲಿದೆ. ಕಾರ್ಯಾಗಾರಗಳ ಮೂಲಕ ಹೆಚ್ಚಿನ ಪರಿಣತಿ ಸಾಧಿಸಿ ರೋಗಿಗಳಿಗೆ ತೊಂದರೆಯಾಗದಂತೆ ಚಿಕಿತ್ಸೆ ನೀಡಿ ಎಂದರು.

ಅಧ್ಯಕ್ಷತೆವಹಿಸಿ ಮಾತನಾಡಿದ ಬಿ.ವಿ.ವಿ ಸಂಘದ ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಎಮ್.ಸಜ್ಜನ (ಬೇವೂರ) ಅವರು ಪಿ.ಎಮ್.ಎನ್.ಎಮ್ ಡೆಂಟಲ್ ಕಾಲೇಜು ಮತ್ತು ಆಸ್ಪತ್ರೆ ರಾಜ್ಯದ ಪ್ರತಿಷ್ಠಿತ ಸಂಸ್ಥೆ ಎನ್ನುವ ಗೌರವಕ್ಕೆ ಪಾತ್ರವಾಗಿದೆ. ಬಿ.ವಿ.ವಿ ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ ಡೆಂಟಲ್ ಕಾಲೇಜು ಮತ್ತು ಆಸ್ಪತ್ರೆ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಲು ಅಗತ್ಯದ ಸೌಲಭ್ಯಗಳನ್ನು ಒದಗಿಸಿರುವರು. ಕಾರ್ಯಾಗಾರದಲ್ಲಿನ ವಿಷಯ ಪರಿಣತರ ಚರ್ಚೆ ಮತ್ತು ಸಂವಾದಗಳಿಂದ ಹೊಸ ಅವಿಷ್ಕಾರಗಳು ದಂತವೈದ್ಯಕೀಯ ಕ್ಷೇತ್ರಕ್ಕೆ ಲಭ್ಯವಾಗಲಿ ಎಂದರು.

ಡೆಂಟಲ್ ಕಾಲೇಜ್ ಪ್ರಾಚಾರ್ಯ ಡಾ.ರವಿರಾಜ ದೇಸಾಯಿ ದಂತ ವೈದ್ಯರಲ್ಲಿ ದಂತ ವಿಜ್ಞಾನದ ಹೊಸ ಅವಿಷ್ಕಾರಗಳ ಕುರಿತು ಚರ್ಚೆ ಮತ್ತು ಸಂವಾದ ನಡೆಸಲು ಕಾರ್ಯಾಗಾರಗಳು ಉಪಯುಕ್ತವಾಗಿವೆ. ವಿಶೇಷವಾಗಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಮತ್ತು ಯುವವೈದ್ಯರಿಗೆ ಪ್ರಯೋಜನವಾಗಲಿದೆ ಎಂದು ನುಡಿದರು. ವೇದಿಕೆಯಲ್ಲಿ ಭಾರತೀಯ ಬಾಯಿ ಮತ್ತು ಮುಖದ ಶಸ್ತ್ರಚಿಕಿತ್ಸಾತಜ್ಞರ ಸಂಘದ ಕರ್ನಾಟಕ ಶಾಖೆಯ ವಿದ್ಯುನ್ಮಾನ ವಾರ್ತಾಪತ್ರಿಕೆಯನ್ನು (ಇ-ನ್ಯೂಸ್ ಲೆಟರ್) ಬಿಡುಗಡೆಗೊಳಿಸಲಾಯಿತು. ಪತ್ರಿಕೆ ಕುರಿತು ಸಂಪಾದಕಿ ಡಾ.ಮಮತಾ ಪ್ರಾಸ್ತಾವಿಕ ಮಾತನಾಡಿದರು.

ನಾಡಗೀತೆ ಮತ್ತು ಪ್ರಾರ್ಥನಾ ಗೀತೆಯೊಂದಿಗೆ ಆರಂಭಗೊಂಡ ಸಮಾರಂಭದಲ್ಲಿ ಬಾಯಿ ಮತ್ತು ಮುಖದ ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥೆ ಡಾ.ಸುಮಾ ಸರಾಫ ಸ್ವಾಗತಿಸಿ ಕಾರ್ಯಾಗಾರದ ಬಗ್ಗೆ ಪ್ರಾಸ್ತಾವಿಕ ಮಾತನಾಡಿದರು. ಡಾ.ಆಶಾ ಬಡದೇಸಾಯಿ, ಡಾ.ಸೌಮ್ಯ ಸೂಳಿಭಾವಿ ಮತ್ತು ಡಾ.ಸೌಮ್ಯದೇಸಾಯಿ ಪರಿಚಯಿಸಿದರು. ಡಾ.ಗಿರೀಶ ಚೌರ ವಂದಿಸಿದರು. ಡಾ.ಶ್ರದ್ಧಾ ಮತ್ತು ಡಾ.ಶ್ರೇಯಾ ಕಾರ್ಯಕ್ರಮ ನಿರೂಪಿಸಿದರು.

ಖ್ಯಾತ ಬಾಯಿ ಮತ್ತು ಮುಖದ ಶಸ್ತ್ರಚಿಕಿತ್ಸಾ ತಜ್ಞರಾದ ಡಾ.ಸತ್ಯಜೀತ ದಂಡಗಿ ಮತ್ತು ಡಾ.ಮಮತಾ ವಿಶೇಷ ಉಪನ್ಯಾಸ ಆಯೋಜಿಸಲಾಗಿತ್ತು. ವಿವಿಧ ದಂತ ವೈದ್ಯಕೀಯ ಕಾಲೇಜುಗಳಿಂದ ವಿಷಯ ಪರಿಣಿತರು ಸಂಪನ್ಮೂಲ ವ್ಯಕ್ತಿಗಳಾಗಿ ಉಪನ್ಯಾಸ ನೀಡಿದರು. ಕಾರ್ಯಾಗಾರದಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಮತ್ತು ನೆರೆಯ ರಾಜ್ಯಗಳಿಂದ ಐವತ್ತಕ್ಕೂ ಹೆಚ್ಚು ದಂತವೈದ್ಯರು ಮತ್ತು ದಂತ ವೈದ್ಯಕೀಯ ವಿದ್ಯಾರ್ಥಿಗಳು ಶಿಬಿರಾರ್ಥಿಗಳಾಗಿ ಪಾಲ್ಗೊಂಡಿದ್ದರು. ಬಾಯಿ ಮತ್ತು ಮುಖದ ಶಸ್ತ್ರಚಿಕಿತ್ಸಾ ವಿಭಾಗದ ವೈದ್ಯರಾದ ಡಾ.ಭೀಮಪ್ಪ, ಡಾ.ಗಂಗಾಧರ, ಡಾ.ಪಾರ್ವತಿ, ಡಾ.ವಿಶ್ವನಾಥ, ಮಹಾವಿದ್ಯಾಲಯದ ಎಲ್ಲ ವಿಭಾಗಗಳ ಮುಖ್ಯಸ್ಥರು, ವೈದ್ಯರು, ವಿದ್ಯಾರ್ಥಿಗಳು ಮತ್ತು ರಾಜ್ಯದ ಹಾಗೂ ನೆರೆಯ ರಾಜ್ಯಗಳಿಂದ ಆಗಮಿಸಿದ್ದ ಶಿಬಿರಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಮಕ್ಕಳ ಹಕ್ಕು ರಕ್ಷಣಾ ಆಯೋಗದ ಸದಸ್ಯರ ಭೇಟಿ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಜಗನ್ನಾಥ ಹಲಮಡಗಿ ಸೋಮವಾರ ಜಿಲ್ಲಾಧಿಕಾರಿ ಸಂಗಪ್ಪ, ಜಿ.ಪಂ ಸಿಇಓ ಗಜಾನನ ಬಾಲೆ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್ ಅವರನ್ನು ಭೇಟಿ ಮಾಡಿ ಜಿಲ್ಲೆಯ ಮಕ್ಕಳ ಹಕ್ಕುಗಳ ರಕ್ಷಣೆ, ಶಿಕ್ಷಣ, ಬಾಲ್ಯವಿವಾಹ, ಪೋಕ್ಸೋ ಪ್ರಕರಣಗಳ ಬಗ್ಗೆ ಚರ್ಚೆ ನಡೆಸಿದರು.

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ನೂತನ ಸದಸ್ಯರಾಗಿ ಆಯ್ಕೆಯಾಗಿ ಮೊದಲ ಬಾರಿಗೆ ಜಿಲ್ಲೆಗೆ ಭೇಟಿ ನೀಡಿದ ಜಗನ್ನಾಥ ಹಲಮಡಗಿ, ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮಕ್ಕಳ ಶಿಕ್ಷಣದ ಹಕ್ಕು, ಆರೋಗ್ಯ, ಪೌಷ್ಠಿಕತೆ, ಬಾಲ್ಯವಿವಾಹ ತಡೆ, ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳ ತಡೆ ಹಾಗೂ ಸರ್ಕಾರದ ವಿವಿಧ ಮಕ್ಕಳ ಕಲ್ಯಾಣ ಯೋಜನೆಗಳ ಪರಿಣಾಮಕಾರಿ ಅನುಷ್ಠಾನದ ಕುರಿತು ಸಮಾಲೋಚನೆ ನಡೆಸಿದರು. ಮಕ್ಕಳಿಗೆ ಸುರಕ್ಷಿತ ಹಾಗೂ ಹಕ್ಕು ಸಮ್ಮತ ವಾತಾವರಣ ಕಲ್ಪಿಸಲು ಎಲ್ಲ ಇಲಾಖೆಗಳು ಸಮನ್ವಯದೊಂದಿಗೆ



ಕಾರ್ಯನಿರ್ವಹಿಸುವ ಅಗತ್ಯವಿದೆ ಎಂದು ತಿಳಿಸಿದರು.

ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ವಿವಿಧ ವಸತಿ ನಿಲಯದ ಮಕ್ಕಳಿಗೆ ಗುಣಮಟ್ಟದ ಆಹಾರ ಪೂರೈಸುವ ನಿಟ್ಟಿನಲ್ಲಿ ಪ್ರತ್ಯೇಕ ಎಸ್‌ಓಪಿ ಮಾಡಲಾಗುವುದು. ಸ್ವಚ್ಛತೆಗೆ ಹೆಚ್ಚಿನ ಒತ್ತು ನೀಡುವಂತೆ ಅಧಿಕಾರಿಗಳು ಸೂಚನೆ ನೀಡಲಾಗಿದೆ. ಅಂಗನವಾಡಿ ದುರಸ್ಥಿಗಳು ಇದ್ದಲ್ಲಿ ವಿಬಿ-ಜಿ ರಾಮ್ ಜಿ ಯೋಜನೆಯಡಿ ಕಾಮಗಾರಿ ಕೈಗೊಳ್ಳಲು ಅವಕಾಶವಿದ್ದು, ಅಗತ್ಯ ದುರಸ್ಥಿ ಮಾಡಿಕೊಳ್ಳಲು ತಿಳಿಸಿದರು. ಅಲ್ಲದೇ ಮಕ್ಕಳಿಗೆ ಮೊಟ್ಟೆ ಹಾಗೂ ಊಟದ ಮೆನುವಿನಲ್ಲಿ ಇಲ್ಲಿಯ ವಾತಾವರಣಕ್ಕೆ ತಕ್ಕಂತೆ ಆಹಾರ ನೀಡಲು ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ಭೇಟಿ ನೀಡಿ, ಮಕ್ಕಳ ಮೇಲಿನ ಅಪರಾಧಗಳ ತಡೆ, ಪೋಕ್ಸೋ ಕಾಯ್ದೆ ಪ್ರಕರಣಗಳ ತನಿಖೆ, ಕಾಣೆಯಾದ ಮಕ್ಕಳ ಪತ್ತೆ, ಬಾಲಸ್ನೇಹಿ ಪೊಲೀಸ್ ವ್ಯವಸ್ಥೆ ಹಾಗೂ ಮಕ್ಕಳ ಸುರಕ್ಷತೆಗೆ ಕೈಗೊಂಡಿರುವ ಕ್ರಮಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಜಿ.ಪಂ ಸಿಇಓ ಅವರೊಂದಿಗೆ ನಡೆದ ಚರ್ಚೆಯಲ್ಲಿ ಅಂಗನವಾಡಿ, ಶಾಲಾ ಶಿಕ್ಷಣ, ಪೌಷ್ಠಿಕ ಆಹಾರ, ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಕ್ರಮಗಳು ಹಾಗೂ ಗ್ರಾಮೀಣ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮಗಳ ಅನುಷ್ಠಾನ ಕುರಿತು ಮಾಹಿತಿ ಪಡೆದರು.

ಮಕ್ಕಳ ಹಕ್ಕುಗಳ ರಕ್ಷಣೆ ಕುರಿತು ಪ್ರೌಢಶಾಲಾ ವಿಭಾಗದ ಮುಖ್ಯೋಪಾಧ್ಯಾಯರಿಗೆ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲು ಆಯೋಗದ ಸದಸ್ಯ ಜಗನ್ನಾಥ ಹಲಮಡಗಿ ಅಧಿಕಾರಿಗಳಿಗೆ ಸಲಹೆ ನೀಡಿದರು.

ಭೇಟಿ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಕೆ.ಪ್ರಭಾಕರ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಪಂಕಜ, ಜಿಲ್ಲಾ ಮಕ್ಕಳ ಹಕ್ಕುಗಳ ರಕ್ಷಣಾಧಿಕಾರಿ ಡಾ.ವೀಣಾ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ರಮೇಶ ಸೂಳಿಕೇರಿ ಸೇರಿದಂತೆ ಇತರರು ಇದ್ದರು.

# ಅಂಗವಿಕಲರ ಮಾಸಾಶನ ನಿಲುಗಡೆ ಖಂಡಿಸಿ ಪ್ರತಿಭಟನೆ

• **ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ**

ಅಂಗವಿಕಲರ ಮಾಸಾಶನ ನಿಲುಗಡೆ ಮಾಡಿರುವುದನ್ನು ಖಂಡಿಸಿ, ವಾರ್ಷಿಕ ₹32 ಸಾವಿರ ಆದಾಯ ಮಿತಿಯನ್ನು ರದ್ದುಪಡಿಸುವಂತೆ ಹಾಗೂ ಸ್ಥಗಿತಗೊಂಡಿರುವ ಪಿಂಚಣಿಯನ್ನು ತಕ್ಷಣ ಬಿಡುಗಡೆ ಮಾಡುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ನೇತೃತ್ವದಲ್ಲಿ ಗಂಗಾವತಿ ತಾಲೂಕು ಕಚೇರಿ ಎದುರು ಸೋಮವಾರ ಬೃಹತ್ ಪ್ರತಿಭಟನೆ ನಡೆಯಿತು.

ಪ್ರತಿಭಟನೆಯಲ್ಲಿ ನೂರಾರು ಅಂಗವಿಕಲರು ಹಾಗೂ ಅವರ ಪಾಲಕರು ಭಾಗವಹಿಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ತಹಸೀಲ್ದಾರರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಮಾತನಾಡಲು ಮತ್ತು ಕೇಳಲು ಅಸಮರ್ಥ (ಮೂಕ-ಬಧಿರ) ಅಂಗವಿಕಲರು ತಮ್ಮ ಕೈ ಸನ್ನೆಗಳ ಮೂಲಕವೇ ತಮ್ಮ ನೋವನ್ನು ವ್ಯಕ್ತಪಡಿಸಿದರು. "ನಮ್ಮ ಹೋರಾಟಕ್ಕೆ ನ್ಯಾಯ ಸಿಗಬೇಕು, ಸ್ಥಗಿತಗೊಂಡಿರುವ ಮಾಸಾಶನವನ್ನು



ಕೂಡಲೇ ಬಿಡುಗಡೆ ಮಾಡಬೇಕು" ಎಂಬ ಸಂದೇಶವನ್ನು ಅವರು ಕೈ ಸನ್ನೆಗಳ ಮೂಲಕವೇ ತಿಳಿಸಿದರು. ಈ ದೃಶ್ಯ ಪ್ರತಿಭಟನೆಯಲ್ಲಿ ಭಾಗವಹಿಸಿದ್ದವರ ಮನಸ್ಸನ್ನು ಮಿಡಿಯುವಂತಾಯಿತು.

ಪ್ರತಿಭಟನಾಕಾರರು, ಸರ್ಕಾರ ನಿಗದಿಪಡಿಸಿರುವ ₹32 ಸಾವಿರ ವಾರ್ಷಿಕ ಆದಾಯ ಮಿತಿ ಅವೈಜ್ಞಾನಿಕವಾಗಿದ್ದು, ಇದರಿಂದ ಸಾವಿರಾರು ಅರ್ಹ ಅಂಗವಿಕಲರು ಮಾಸಾಶನದಿಂದ ವಂಚಿತರಾಗುತ್ತಿದ್ದಾರೆ ಎಂದು ಆರೋಪಿಸಿದರು. ಬಿಪಿಎಲ್ ಕುಟುಂಬಗಳಿಗೆ ಅನ್ವಯಿಸುವ ಆದಾಯ ಮಿತಿಯನ್ನೇ ಅಂಗವಿಕಲರ ಮಾಸಾಶನಕ್ಕೂ ಅನ್ವಯಿಸಬೇಕು ಎಂದು ಒತ್ತಾಯಿಸಿದರು.

**ಪ್ರಮುಖ ಬೇಡಿಕೆಗಳು:**

●ಅಂಗವಿಕಲರ ವಾರ್ಷಿಕ ₹32 ಸಾವಿರ ಆದಾಯ ಮಿತಿಯನ್ನು ರದ್ದುಪಡಿಸಬೇಕು.

●ಸ್ಥಗಿತಗೊಂಡಿರುವ ಮಾಸಾಶನವನ್ನು ತಕ್ಷಣ ಬಿಡುಗಡೆ ಮಾಡಬೇಕು.

●ಮಾಸಿಕ ಜೀವನ ನಿರ್ವಹಣಾ ಭತ್ಯೆಯನ್ನು ₹10 ಸಾವಿರಕ್ಕೆ ಹೆಚ್ಚಿಸಬೇಕು.

●ಅಂಗವಿಕಲರ ಬ್ಯಾಕ್‌ಲಾಗ್ ಸರ್ಕಾರಿ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು.

●ಅರ್ಹ ಅಂಗವಿಕಲರಿಗೆ ಉಚಿತ ನಿವೇಶನ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು.

ಪ್ರತಿಭಟನೆಯ ಅಂತ್ಯದಲ್ಲಿ ಸರ್ಕಾರ ಅಂಗವಿಕಲರ ನ್ಯಾಯಸಮ್ಮತ ಬೇಡಿಕೆಗಳನ್ನು ಗಂಭೀರವಾಗಿ ಪರಿಗಣಿಸಿ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಒಕ್ಕೂಟದ ಮುಖಂಡರು ಪ್ರಧಾನ ಕಾರ್ಯದರ್ಶಿ ಯಲ್ಲಪ್ಪ ವಡ್ಡರಹಟ್ಟಿ, ಅಧ್ಯಕ್ಷರು ಬಸವರಾಜ ಗೋನಾಳ, ಸದಸ್ಯರಾದ ಡಾ, ಅಶೋಕ ಡೊಂಬರ್, ಮಲ್ಲೇಶ ಗಂಗಾವತಿ, ಶೇಕ್ಷಾವಲಿ ಗಂಗಾವತಿ, ಶರಣಪ್ಪ ಹೊಸಳ್ಳಿ, ರಾಘವೇಂದ್ರ ಸಿದ್ದಿಕೇರಿ, ಬಾಷ್ ಬಸಾಪಟ್ಟಣ, ಖಾಧರ್ ಪಾಷ್, ಹನುಮಂತಪ್ಪ ದಾಸನಾಳ, ನಾಗರಾಜ ಕೆ, ಹನುಮಂತಪ್ಪ ಹೇರೂರು, ನಾಗರಾಜ ಚಲುವಾದಿ, ಶಿವು ಢಾಣಪೂರ, ಶಬ್ಬೀರ್ ಹುಸೇನ್, ಮೋಹನ್ ಮರಕುಂಬಿ, ದಾವಲ್ ಸಾಬ್, ಜಂಬಣ್ಣ ಮರಳಿ, ಸಣ್ಣ ವೀರೇಶ, ಮಾರುತಿ ಸಂಗಾಪೂರ, ಅಬ್ರಹಂ ಗಂಗಾವತಿ ಆಗ್ರಹಿಸಿದರು.

# ಆರೋಗ್ಯ ಕೇಂದ್ರದಲ್ಲಿ ವೈದ್ಯರ ಕೊರತೆ, ರೋಗಿಗಳ ಪರದಾಟ



• **ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್**

ತಾಲೂಕಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸಮರ್ಪಕ ವೈದ್ಯಕೀಯ ಸೇವೆ ದೊರೆಯುತ್ತಿಲ್ಲ ಎಂಬ ಆರೋಪಗಳು ಸಾರ್ವಜನಿಕರಿಂದ ಕೇಳಿಬರುತ್ತಿವೆ. ವೈದ್ಯರು ನಿಯಮಿತವಾಗಿ ಕರ್ತವ್ಯಕ್ಕೆ ಹಾಜರಾಗದಿರುವುದು, ಅಗತ್ಯ ಔಷಧಿಗಳ ಕೊರತೆ ಹಾಗೂ ಸಿಬ್ಬಂದಿ ಅಭಾವದಿಂದ ರೋಗಿಗಳು ಸಂಕಷ್ಟ ಅನುಭವಿಸುತ್ತಿದ್ದಾರೆ.

ಸರ್ಕಾರವು ಸಾವಿರಾರು ಕೋಟಿ ರೂಪಾಯಿ ವೆಚ್ಚದಲ್ಲಿ 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವನ್ನು 50 ಹಾಸಿಗೆಗಳ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸುವ ಕಾಮಗಾರಿ ಕೈಗೊಂಡಿದ್ದರೂ, ಮೂಲಭೂತ ಆರೋಗ್ಯ ಸೇವೆಗಳು ಮಾತ್ರ ಸಮರ್ಪಕವಾಗಿ ದೊರೆಯುತ್ತಿಲ್ಲ ಎಂಬ ಅಸಮಾಧಾನ ವ್ಯಕ್ತವಾಗಿದೆ. ಆಸ್ಪತ್ರೆಯಲ್ಲಿ ಅಗತ್ಯ ವೈದ್ಯಕೀಯ ಉಪಕರಣಗಳು ಲಭ್ಯವಿದ್ದರೂ, ಅವುಗಳನ್ನು ನಿರ್ವಹಿಸಲು ಬೇಕಾದ ಸಿಬ್ಬಂದಿಯ ಕೊರತೆಯಿಂದ ಅವುಗಳ ಸದುಪಯೋಗವಾಗುತ್ತಿಲ್ಲ ಎಂದು ಹೇಳಲಾಗುತ್ತಿದೆ.

ಆಸ್ಪತ್ರೆಯ ದಂತ ವೈದ್ಯಾಧಿಕಾರಿ ಡಾ. ಜೀನಾತ್ ಅವರು ಕಳೆದ ಒಂದು ತಿಂಗಳಿನಿಂದ ಕರ್ತವ್ಯಕ್ಕೆ ಗೈರಾಗಿರುವುದಾಗಿ ಆರೋಪಿಸಲಾಗಿದೆ. ಇದರಿಂದ ದಂತ ಚಿಕಿತ್ಸೆಗೆ ಬರುವ ರೋಗಿಗಳು ಪರದಾಡುವಂತಾಗಿದೆ.

ಈ ಕುರಿತು ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ನೀಲಾಂಬಿಕಾ ಜಬಟ್ಟಿ ಅವರನ್ನು ಸಂಪರ್ಕಿಸಿದಾಗ, "ಡಾ. ಜೀನಾತ್ ಅವರಿಗೆ ನೋಟಿಸ್ ನೀಡಲಾಗಿದೆ. ಅವರು ಮೊದಲು ಒಂದು ವಾರ ರಜೆ ಪಡೆದಿದ್ದರು. ಬಳಿಕ ಒಂದು ತಿಂಗಳ ರಜೆ ಕೋರಿದ್ದರು. ಆದರೆ ಆ ರಜೆಯನ್ನು ನಿರಾಕರಿಸಿದರೂ ಅವರು ಕರ್ತವ್ಯಕ್ಕೆ ಹಾಜರಾಗಿಲ್ಲ," ಎಂದು ತಿಳಿಸಿದ್ದಾರೆ.


ಇದೇ ವೇಳೆ, ಸರ್ಕಾರದಿಂದ ಕೆಲವು ಅಗತ್ಯ ಔಷಧಿಗಳ ಪೂರೈಕೆಯಲ್ಲಿ ಕೊರತೆ ಉಂಟಾಗಿರುವ ಹಿನ್ನೆಲೆಯಲ್ಲಿ ಯಾದಗಿರಿ ಜಿಲ್ಲೆಯಿಂದ ಔಷಧಿಗಳನ್ನು ತರಿಸಲಾಗುತ್ತಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ತಾಲೂಕು ಕೇಂದ್ರದ ಪ್ರಮುಖ ಸರ್ಕಾರಿ ಆಸ್ಪತ್ರೆಯಲ್ಲೇ ಈ ರೀತಿಯ ಸಮಸ್ಯೆಗಳು ಮುಂದುವರಿದಿರುವುದರಿಂದ, ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳು ತಕ್ಷಣ ಮಧ್ಯಪ್ರವೇಶಿಸಿ ವೈದ್ಯರ ಹಾಜರಾತಿ, ಸಿಬ್ಬಂದಿ ನೇಮಕ ಹಾಗೂ ಔಷಧಿ ಪೂರೈಕೆಯನ್ನು ಸುಧಾರಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.



ಸಮುದಾಯ ಆರೋಗ್ಯ ಕೇಂದ್ರದಲ್ಲಿ ಗರ್ಭಿಣಿಯರಿಗೆ ಸಿಗಬೇಕಾಗಿರುವ ಜಿಂಕ್ ಮತ್ತು ಮಕ್ಕಳಿಗೆ ನಿಮಿಲೈಸರ್ ಸೇರಿದಂತೆ ಕೆಲ ಔಷಧಿಗಳು ಸಮರ್ಪಕವಾಗಿ ಸಿಗುತ್ತಿಲ್ಲ ಹಾಗೆ ವೈದ್ಯರು ಸತತವಾಗಿ ಗೈರಾಗುತ್ತಿರುವುದು ರೋಗಿಗಳಿಗೆ ಸಾಕಷ್ಟು ಸಂಕಷ್ಟ ತಂದು ಒಟ್ಟಿದೆ ಈ ಕುರಿತು ಜಿಲ್ಲಾ ವೈದ್ಯಾಧಿಕಾರಿಗಳು ಇತ್ತಕಡೆ ಗಮನ ಹರಿಸಬೇಕು ಸಮಸ್ಯೆ ಬಗೆಹರಿಸಿ.

–ಶ್ರೀಕಾಂತ್ ತಲಾರಿ, ಅಂಬೇಡ್ಕರ್ ಯುವ ಸೇನೆ ತಾಲೂಕಧ್ಯಕ್ಷ ಗುರುಮಠಕಲ್



ತಾಲೂಕು ಆಗಿರೋದ್ರಿಂದ ಸುತ್ತಮುತ್ತಲಿನ ಸಾಕಷ್ಟು ಹಳ್ಳಿಗಳಿಂದ ಬರ್ತಕ್ಕಂತ ರೋಗಿಗಳಿಗೆ ಇಲ್ಲಿ ಸರಿಯಾಗಿ ಆರೋಗ್ಯ ಸೇವೆಗಳು ಸಿಗುವಲ್ಲಿ ಕೊರತೆ ಎದ್ದು ಕಾಣ್ತಾ ಇದೆ ವೈದ್ಯರ ಕೊರತೆ ಔಷಧಿ ಕೊರತೆ ಕೂಡಲೇ ಸಂಬಂಧ ಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ಜಿಲ್ಲಾ ಉಸ್ತುವಾರಿ ಸಚಿವರು ವೈದ್ಯಕೀಯ ಸಚಿವರು ಮುಖ್ಯಮಂತ್ರಿಗಳು ನೇರವಾಗಿ ಜನರ ಆರೋಗ್ಯ ಕಡೆ ತಾವು ಹೆಚ್ಚಿನ ಗಮನ ಕೊಡಬೇಕು.

–ರಂಗ ಸ್ವಾಮಿ, ಡಿಎಸ್‌ಎಸ್ ತಾಲೂಕ ಸಂಚಾಲಕ(ಡಿಜಿಸಾಗರ) ಗುರುಮಠಕಲ್

## ವಾತಾವರಣದ ಸಮತೋಲನದಲ್ಲಿ ಪರಿಸರದ ಪಾತ್ರ ಪ್ರಮುಖ



**ಭಾಲ್ಕಿ:** ವಾತಾವರಣವನ್ನು ಸಮತೋಲನದಲ್ಲಿಡುವಲ್ಲಿ ಪರಿಸರದ ಪಾತ್ರ ಬಹಳ ಪ್ರಮುಖವಾಗಿದೆ ಎಂದು ಹಿರೇಮಠ ಸಂಸ್ಥಾನ ವಿದ್ಯಾಪೀಠದ ಆಡಳಿತ ಅಧಿಕಾರಿ ಮೋಹನರೆಡ್ಡಿ ಹೇಳಿದರು.

ತಾಲ್ಲೂಕಿನ ತಳವಾಡ (ಕೆ) ಗ್ರಾಮದಲ್ಲಿ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ ಭಾಲ್ಕಿ, ಗ್ರಾಮ ಪಂಚಾಯಿತಿ ತಳವಾಡ (ಕೆ), ಶ್ರೀ ಚನ್ನಬಸವೇಶ್ವರ ಗುರುಕುಲ ಪಬ್ಲಿಕ್ ಶಾಲೆ ಸಹಯೋಗದಲ್ಲಿ ಆಯೋಜಿಸಿದ್ದ ವನಮಹೋತ್ಸವ, ಪರಿಸರ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಮಕ್ಕಳು, ಯುವಕರು, ಹಿರಿಯರು ಪರಿಸರ ಸಂರಕ್ಷಣೆಯ ಜವಬ್ದಾರಿ ಹೋರುವುದು ಅತ್ಯಂತ ಅಗತ್ಯವಾಗಿದೆ. ಪರಿಸರ ಉಳಿದಲ್ಲಿ ಮಾತ್ರ ಮನುಕುಲ ಉಳಿಯಲು ಸಾಧ್ಯವಿದೆ ಎಂದು ತಿಳಿಸಿದರು. ವೈದ್ಯ ಅಭಿಷೇಕ್ ಸ್ವಾಮಿ ಮಾತನಾಡಿ, ನಮ್ಮ ಆರೋಗ್ಯದ ಸಮತೋಲನದಲ್ಲಿ ಪರಿಸರದ ಪಾತ್ರ ಬಹಳ ವೈಶಿಷ್ಟವಾದದ್ದು. ಕಲ್ಯಾಣ ಕರ್ನಾಟಕ ಭಾಗದಲ್ಲಿ ಶೈಕ್ಷಣಿಕ ಕ್ರಾಂತಿ ತರವಲ್ಲಿ ಗುರುಕುಲ ಶಾಲೆ, ಭಾಲ್ಕಿಯ ಶ್ರೀಗಳ ಪಾತ್ರ ಬಹಳ ದೊಡ್ಡದಿದೆ ಎಂದು ಹೇಳಿದರು.

ವಿದ್ಯಾರ್ಥಿಗಳು ಪರಿಸರ ಜಾಗೃತಿ ಕುರಿತು ನಾಟಕ, ಭಾಷಣ, ನೃತ್ಯ ಪ್ರದರ್ಶಿಸಿದರು. ಗ್ರಾಮದ ಮುಖ್ಯ ರಸ್ತೆಗಳಲ್ಲಿ ವಿದ್ಯಾರ್ಥಿಗಳು ವನಮಹೋತ್ಸವ ಜಾಗೃತಿ ಜಾಥಾ ನಡೆಸಿದರು. ಅಭಿವೃದ್ಧಿ ಅಧಿಕಾರಿ ಪ್ರಭುಶೆಟ್ಟಿ, ಅರಣ್ಯ ಅಧಿಕಾರಿ ಸಮೃದ್ಧ, ಗಂಗಾಧರ, ಮಲ್ಲಿಕಾರ್ಜುನ ರಾಜಾಪುರೆ, ಯುವರಾಜ ರಾಜಾಪುರೆ, ಕಲ್ಲಪ್ಪ ಕಮಲಾಪುರೆ, ಓಂಕಾರ ಕನಶೆಟ್ಟೆ, ರವಿ ಪಾಟೀಲ, ಸಿದ್ರಾಮ ಪಾಟೀಲ, ಸಂಜು ಪಾಟೀಲ, ರವಿ ರಾಚಣ್ಣ, ಸೋಮಣ್ಣ ಕನಶೆಟ್ಟೆ, ನೂರಂದಪ್ಪ, ರಾಮ ಕಾರಬಾರಿ, ಶಾಂತಪ್ಪ ಪಾಟೀಲ, ಪ್ರಾಚಾರ್ಯ ವಿಜಯಕುಮಾರ, ಸಂಯೋಜಕ ಶಶಿಕುಮಾರ ಸೇರಿದಂತೆ ಇತರರು ಇದ್ದರು.

## ನೂತನ ನ್ಯಾಯಾಲಯ ಆರಂಭ



**ಕನಕಗಿರಿ:** ತಾಲೂಕಿನ ಎಪಿಎಂಸಿ ಆವರಣದಲ್ಲಿ ಜುಲೈ 17ರಂದು ನೂತನ ನ್ಯಾಯಾಲಯ ಉದ್ಘಾಟನೆಯಾಗಿರುವುದು ತಾಲೂಕಿನ ಜನತೆಗೆ ಐತಿಹಾಸಿಕ ಕ್ಷಣವಾಗಿದೆ ಎಂದು ಹಿರೇಮಾದಿನಾಳದ ಹಿರಿಯ ವಕೀಲ ಮಾರುತಿ ಮೆತಗಲ್ ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಕುರಿತು ಮಾತನಾಡಿದ ಅವರು, "ಇದುವರೆಗೆ ನ್ಯಾಯಾಲಯದ ಕೆಲಸಗಳಿಗಾಗಿ ಗಂಗಾವತಿ ಅಥವಾ ಜಿಲ್ಲಾ ಕೇಂದ್ರಕ್ಕೆ ತೆರಳಬೇಕಾಗುತ್ತಿತ್ತು. ಇದೀಗ ಕನಕಗಿರಿಯಲ್ಲೇ ನ್ಯಾಯಾಲಯ ಆರಂಭವಾಗಿರುವುದರಿಂದ ಸಾಮಾನ್ಯ ಜನರು, ರೈತರು ಹಾಗೂ ಬಡವರಿಗೆ ಸಮಯ ಮತ್ತು ಹಣದ ಉಳಿತಾಯವಾಗಲಿದೆ. ನ್ಯಾಯ ಸೇವೆ ಜನರ ಮನೆಬಾಗಿಲಿಗೆ ಬಂದಂತಾಗಿದೆ" ಎಂದು ಹೇಳಿದರು.

ನೂತನ ನ್ಯಾಯಾಲಯದಿಂದ ಪ್ರಕರಣಗಳ ವಿಚಾರಣೆ ಮತ್ತಷ್ಟು ವೇಗವಾಗಿ ನಡೆಯಲಿದ್ದು, ಗ್ರಾಮೀಣ ಭಾಗದ ವಕೀಲರಿಗೂ ತಮ್ಮ ವೃತ್ತಿ ನಿರ್ವಹಣೆಗೆ ಅನುಕೂಲವಾಗಲಿದೆ. ನ್ಯಾಯಾಂಗ ಇಲಾಖೆ ಹಾಗೂ ರಾಜ್ಯ ಸರ್ಕಾರಕ್ಕೆ ತಾಲೂಕಿನ ಜನರ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇವೆ ಎಂದು ಅವರು ತಿಳಿಸಿದರು.

**46ಕ್ಕೂ ಹೆಚ್ಚು ಗ್ರಾಮಗಳಿಗೆ ಅನುಕೂಲ:** ಕನಕಗಿರಿ ತಾಲೂಕು ಸೇರಿದಂತೆ ಸುತ್ತಮುತ್ತಲಿನ 46ಕ್ಕೂ ಹೆಚ್ಚು ಗ್ರಾಮಗಳ ಜನರಿಗೆ ಈ ನ್ಯಾಯಾಲಯದಿಂದ ನೇರ ಪ್ರಯೋಜನವಾಗಲಿದೆ. ಸಿವಿಲ್, ಕ್ರಿಮಿನಲ್ ಹಾಗೂ ಜಮೀನು ಸಂಬಂಧಿತ ಹಲವು ಪ್ರಕರಣಗಳನ್ನು ಇನ್ನು ಮುಂದೆ ಕನಕಗಿರಿಯಲ್ಲೇ ವಿಚಾರಣೆ ನಡೆಸಬಹುದಾಗಿದ್ದು, ಪ್ರಯಾಣ ವೆಚ್ಚ ಮತ್ತು ಸಮಯ ಉಳಿತಾಯವಾಗಲಿದೆ ಎಂದು ಮಾರುತಿ ಮೆತಗಲ್ ಹೇಳಿದರು.

**ವಕೀಲರ ಸಂತಸ:** ಕನಕಗಿರಿ ತಾಲೂಕು ವಕೀಲರ ಪರವಾಗಿ ಮಾತನಾಡಿದ ಮಾರುತಿ ಮೆತಗಲ್, "ಈ ನ್ಯಾಯಾಲಯ ನಮ್ಮೆಲ್ಲರ ಬಹುದಿನಗಳ ಕನಸು ಮತ್ತು ಶ್ರಮದ ಫಲವಾಗಿದೆ. ಇನ್ನು ಮುಂದೆ ಜನರಿಗೆ ಗುಣಮಟ್ಟದ, ಪಾರದರ್ಶಕ ಹಾಗೂ ಶೀಘ್ರ ನ್ಯಾಯ ದೊರಕುವಂತೆ ಕೆಲಸ ಮಾಡುವುದು ನಮ್ಮೆಲ್ಲ ವಕೀಲರ ಜವಾಬ್ದಾರಿಯಾಗಿದೆ" ಎಂದು ಹೇಳಿದರು. ಒಟ್ಟಾರೆಯಾಗಿ, ಕನಕಗಿರಿಯಲ್ಲಿ ನೂತನ ನ್ಯಾಯಾಲಯ ಆರಂಭವಾಗಿರುವುದು ಇಡೀ ತಾಲೂಕಿನ ಜನರಿಗೆ ನ್ಯಾಯದ ಬಾಗಿಲನ್ನು ಇನ್ನಷ್ಟು ಹತ್ತಿರ ತಂದ ಮಹತ್ವದ ಬೆಳವಣಿಗೆಯಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

## ಭ್ರಷ್ಟರ ವಿರುದ್ಧ ಹೋರಾಟಕ್ಕೆ ಸನ್ನದ್ಧ



**ಭಾಲ್ಕಿ:** ನಗರದ ಪ್ರವಾಸಿ ಮಂದಿರದಲ್ಲಿ ಈಚೆಗೆ ವಿಜಯ ಕರ್ನಾಟಕ ರಕ್ಷಣಾ ವೇದಿಕೆ ಮಹಿಳಾ ಘಟಕದ ಪದಾಧಿಕಾರಿಗಳ ಸೇರ್ಪಡೆ ಕಾರ್ಯಕ್ರಮ ಜರುಗಿತು. ವಿಕ ರಕ್ಷಣಾ ವೇದಿಕೆ ರಾಜ್ಯ ಯುವ ಘಟಕದ ಅಧ್ಯಕ್ಷ ಶಿವರಾಜ ಪಟ್ನೆ ಅವರು ಮಹಿಳೆಯರಿಗೆ ಕೊರಳ ಪಟ್ಟಿ ಹಾಕಿ, ಸನ್ಮಾನಿಸಿ ಮಹಿಳಾ ಸಂಘಟನೆಗೆ ಬರಮಾಡಿಕೊಂಡರು.

ನಂತರ ಮಾತನಾಡಿದ ಅವರು, ತಾಲೂಕು ಸೇರಿ ಜಿಲ್ಲೆಯಲ್ಲಿ ಸರಕಾರದ ವಿವಿಧ ಇಲಾಖೆಗಳಲ್ಲಿ ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ತೊಡಗಿರುವುದು ಅಂತಹವರ ವಿರುದ್ಧ ನಾವೆಲ್ಲರೂ ಹೋರಾಟ ನಡೆಸಲು ಸನ್ನದ್ಧರಾಗಬೇಕಿದೆ ಎಂದರು. ಸಂಘಟನೆಯ ರಾಜ್ಯಾದಾಧ್ಯಕ್ಷ ಬಿ.ಎಂ.ಮಹೇಶ ಮಾರ್ಗದರ್ಶನದಲ್ಲಿ ನೀಡುವ ಎಲ್ಲ ಜವಾಬ್ದಾರಿಗಳನ್ನು ಪದಾಧಿಕಾರಿಗಳು ಪಾಲಿಸಿ ಸಂಘಟನೆಯನ್ನು ಬಲಪಡಿಸುವ ಕೆಲಸ ಮಾಡಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸಂಘಟನೆ ತಾಲೂಕು ಅಧ್ಯಕ್ಷ ಸಂಜಯ, ಉಪಾಧ್ಯಕ್ಷ ಸೋಮನಾಥ, ಪ್ರಮುಖರಾದ ಗೌತಮ, ಆದೇಶ, ರವಿ, ಸತೀಶ, ಪ್ರವೀಣ, ಅಮರ ಮಹಿಳೆಯರಾದ ಕವಿತಾ, ಕರುಣಾದೇವಿ, ಪುಷ್ಪಾವತಿ, ಚಿತ್ರಮ್ಮ, ಪಾರ್ವತಿ, ಕಲ್ಪನಾ, ಬಾಲಿಕಾ ಸೇರಿದಂತೆ ಹಲವರು ಇದ್ದರು.

# ಜಿಲ್ಲಾಸ್ಪತ್ರೆ ಆವರಣದಲ್ಲಿ ಸ್ವಚ್ಛ ಭಾರತ ಅಭಿಯಾನ, ಶ್ರಮದಾನ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ



ರಾಷ್ಟ್ರೀಯ ಸ್ವಚ್ಛ ಭಾರತ ಅಭಿಯಾನದ ಅಂಗವಾಗಿ ವಿಜಯಪುರ ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಆವರಣದಲ್ಲಿ ಬೃಹತ್ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಜಿಲ್ಲಾ ಆರೋಗ್ಯ ಅಧಿಕಾರಿ ಮಲ್ಲನಗೌಡ ಬಿರಾದಾರ್, ಜಿಲ್ಲಾಸ್ಪತ್ರೆಯ ಶಸ್ತ್ರ ಚಿಕಿತ್ಸಕ ಶಿವಾನಂದ ಮಾಸ್ತಿಹೋಳಿ ಅವರ ಸ್ವಚ್ಚತಾ ಅಭಿಯಾನಕ್ಕೆ ಚಾಲನೆ ನೀಡಿದರು , ಆಸ್ಪತ್ರೆಯ ವೈದ್ಯಾಧಿಕಾರಿಗಳು, ಸಿಬ್ಬಂದಿ ವರ್ಗ ಹಾಗೂ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳಿಗೆ ಇದೇ ಸಂದರ್ಭದಲ್ಲಿ ಸ್ವಚ್ಚತೆಯ ಕುರಿತು ಪ್ರತಿಜ್ಞೆ ವಿಧಿ ಬೋಧಿಸಲಾಯಿತು.


ಜಿಲ್ಲಾ ಆಸ್ಪತ್ರೆಯ ವೈದ್ಯರು ಸೇರಿದಂತೆ ನರ್ಸಿಂಗ್ ವಿದ್ಯಾರ್ಥಿಗಳು ಜಂಟಿಯಾಗಿ ಇಡೀ ಆವರಣವನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸುವ ಮೂಲಕ ಸಾರ್ವಜನಿಕರಲ್ಲಿ ಕೂಡಾ ಸ್ವಚ್ಚತೆಯ ಕುರಿತು ಜಾಗೃತಿ ಮೂಡಿಸಿದರು. ಈ ಸ್ವಚ್ಛತಾ ಕಾರ್ಯದಲ್ಲಿ ನೂರಾರು ಜನ ಉತ್ಸಾಹದಿಂದ ಪಾಲ್ಗೊಂಡಿದ್ದರು. ಆಸ್ಪತ್ರೆಯ ಮುಂಭಾಗ, ತುರ್ತು ಚಿಕಿತ್ಸಾ ಘಟಕದ ಸುತ್ತಮುತ್ತಲಿನ ಜಾಗ ಹಾಗೂ ಆಸ್ಪತ್ರೆಯ ಆವರಣದಲ್ಲಿ ಬಿದ್ದಿದ್ದ ಪ್ಲಾಸ್ಟಿಕ್ ತ್ಯಾಜ್ಯ, ಒಣ ಎಲೆಗಳು ಮತ್ತು ಇತರ ಕಸಕಡ್ಡಿಗಳನ್ನು ಸಂಪೂರ್ಣವಾಗಿ ಗುಡಿಸಿ ವಿಲೇವಾರಿ ಮಾಡಿದರು. ಆಸ್ಪತ್ರೆಗೆ ಬರುವ ರೋಗಿಗಳಿಗೆ ಮತ್ತು ಅವರ ಸಂಬಂಧಿಕರಿಗೆ ಹಿತಕರ ಹಾಗೂ ಆರೋಗ್ಯಕರ ವಾತಾವರಣ ನಿರ್ಮಿಸುವ ನಿಟ್ಟಿನಲ್ಲಿ ಆಸ್ಪತ್ರೆಯ ಸಿಬ್ಬಂದಿ ಮತ್ತು ನರ್ಸಿಂಗ್ ವಿದ್ಯಾರ್ಥಿಗಳು ಸ್ವಚ್ಚತಾ ಅಭಿಯಾನ ನಡೆಸಿದರು.

ಸ್ವಚ್ಛತಾ ಕಾರ್ಯದ ಕುರಿತು ಮಾತನಾಡಿದ ಜಿಲ್ಲಾ ಆರೋಗ್ಯ ಅಧಿಕಾರಿ ಮಲ್ಲನಗೌಡ ಬಿರಾದಾರ ವಿಜಯಪುರ ಜಿಲ್ಲಾ ಆಸ್ಪತ್ರೆಯ ಆವರಣವು ಸುಮಾರು 155 ಎಕರೆ ವಿಶಾಲ ಜಾಗ ಹೊಂದಿದೆ. ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ. ಶಿವಾನಂದ ಮಾಸ್ತಿಹೋಳಿ ಹಾಗೂ ಜಿಲ್ಲಾ ಆಸ್ಪತ್ರೆಯ ಎಲ್ಲಾ ವೈದ್ಯ ವೃಂದದವರು, ರೋಟರಿ ಕ್ಲಬ್‌ನ ಸದಸ್ಯರು, ಬಿ.ಎಸ್ಸಿ ಪ್ಯಾರಾಮೆಡಿಕಲ್ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಎಲ್ಲರೂ ಸ್ವಚ್ಛತಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾರೆ. ನಮ್ಮ ಪ್ರಧಾನ ಮಂತ್ರಿಗಳು ಹೇಳಿದಂತೆ 'ಸ್ವಚ್ಛ ಭಾರತ ಸ್ವಚ್ಛ ಆಂದೋಲನ', ಹಾಗೂ ಮಹಾತ್ಮ ಗಾಂಧಿಯವರು ಹೇಳಿದ ಹಾಗೆ ನಾವು ಯಾವಾಗಲೂ ನಮ್ಮ ಪರಿಸರ ಸ್ವಚ್ಛವಾಗಿ ಇಟ್ಟುಕೊಳ್ಳಬೇಕು ಇದರಿಂದ ನಮ್ಮ ಮನಸ್ಸು ಸ್ವಚ್ಛ ಇರುತ್ತದೆ. ಹೀಗಾಗಿ, ನಾವು ನಮ್ಮ ಆವರಣವನ್ನು ತಿಂಗಳಿಗೊಮ್ಮೆ, ವರ್ಷಕ್ಕೆ 12 ಸಲ ಸ್ವಚ್ಛ ಮಾಡ್ತಾ ಇದ್ದರೆ ಒಂದು ಸ್ವಚ್ಛತೆಯ ಅರಿವು ವಿದ್ಯಾರ್ಥಿಗಳಲ್ಲಿ ಮೂಡುತ್ತದೆ. ಅವರು ತಮ್ಮ ಮನೆಯನ್ನೂ, ಸುತ್ತಮುತ್ತಲನೂ ಸ್ವಚ್ಛ ಇಡುತ್ತಾರೆ ಎಂದರು.

ಈ ಕುರಿತು ಮಾತನಾಡಿದ ಜಿಲ್ಲಾಸ್ಪತ್ರೆಯ ಶಸ್ತ್ರ ಚಿಕಿತ್ಸಕ ಡಾ.ಶಿವಾನಂದ ಮಾಸ್ತಿಹೋಳಿ ನಾನು ಜಿಲ್ಲಾಸ್ಪತ್ರೆಯ ವತಿಯಿಂದ ಪ್ರತಿ ಮೂರು ತಿಂಗಳಿಗೆ ಆರು ತಿಂಗಳಿಗೆ ನಾವು ಜಿಲ್ಲಾ ಆಸ್ಪತ್ರೆಯಲ್ಲಿ 'ಸ್ವಚ್ಛ ಭಾರತ ಅಭಿಯಾನ' ಮಾಡುತ್ತೇವೆ. ಈ ಆಸ್ಪತ್ರೆ ಸಂಪೂರ್ಣ ಸ್ವಚ್ಛವಾಗಿರಬೇಕು ಅಂದರೆ ನಾವು ಅಭಿಯಾನದ ಮೂಲಕ ಜನರಲ್ಲಿ ಜಾಗೃತಿ ಮೂಡಿಸಬೇಕು. ನಮ್ಮ ಆಸ್ಪತ್ರೆ ವೈದ್ಯರು, ಸಿಬ್ಬಂದಿಗಳು, ವಿದ್ಯಾರ್ಥಿ, ವಿದ್ಯಾರ್ಥಿನಿಯರು, ನರ್ಸಿಂಗ್ ಶಾಲೆ ವಿದ್ಯಾರ್ಥಿ ವಿದ್ಯಾರ್ಥಿನಿಯರ ಜೊತೆಯಾಗಿ ಹಾಗೂ ಪ್ರತಿ ವರ್ಷ ರೋಟರಿ ಕ್ಲಬ್ ಸಂಘದ ಸಹಯೋಗದೊಂದಿಗೆ ಈ ಕಾರ್ಯಕ್ರಮ ಪ್ರತಿವರ್ಷ ಮಾಡುತ್ತೇವೆ. ಇದರ ಉದ್ದೇಶ ನಮ್ಮ ಆವರಣ ಸ್ವಚ್ಛವಾಗಿಟ್ಟರೆ ನಾವು ಆರೋಗ್ಯವಾಗಿರ್ತೀವಿ, ರೋಗಿಗಳೂ ಆರೋಗ್ಯವಾಗಿ, ಸುರಕ್ಷಿತವಾಗಿ ಮನೆಗೆ ತೆರಳುತ್ತಾರೆ. ಇಲ್ಲಿ ಟ್ರೀಟ್ಮೆಂಟ್ ಅಷ್ಟೇ ಕೊಡೋದಲ್ಲ, ಇಲ್ಲಿ ಆರೋಗ್ಯಕರ ವಾತಾವರಣ ಮೂಡಿಸಿದ್ದೇ ಆದರೆ ರೋಗಿಗಳು ಬೇಗ ಗುಣಮುಖ ಆಗ್ತಾರೆ. ಯಾವುದೇ ಸೋಂಕಿಲ್ಲದೇ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಹೋಗುತ್ತಾರೆ. ಇದರಿಂದ ನಮ್ಮ ಸಿಬ್ಬಂದಿಗಳಿಗೆ, ವೈದ್ಯರಿಗೂ ಕೂಡ ಸೋಂಕು ತಗುಲೋದಿಲ್ಲ ಹಾಗೆ ರೋಗಿಗಳು ಕೂಡ ಆದಷ್ಟು ಬೇಗ ಗುಣಮುಖ ಆಗ್ತಾರೆ ಅನ್ನೋ ಉದ್ದೇಶದಿಂದ ಈ 'ಸ್ವಚ್ಛ ಭಾರತ' ಅಭಿಯಾನ ಮಾಡುತ್ತಿದ್ದೇವೆ ಎಂದರು.

## ಬೀದಿ ಆಕಳ ಹಾವಳಿ: ಸಾರ್ವಜನಿಕರಲ್ಲಿ ಆತಂಕ

• ಮಲ್ಲಮ್ಮ ನುಡಿ ವಾರ್ತೆ ದಾಂಡೇಲಿ



ನಗರದ ಸೋಮನಿ ವೃತ್ತದಲ್ಲಿ ಶುಕ್ರವಾರ ರಾತ್ರಿ ಸುಮಾರು 11:15 ಗಂಟೆ ವೇಳೆಗೆ ಸೋಮನಿ ವೃತ್ತದಲ್ಲಿ ಬೀದಿ ಆಕಳ ಹಾವಳಿ ಹೆಚ್ಚಾಗಿ ವಾಹನ ಸಂಚಾರಕ್ಕೆ ತೀವ್ರ ಅಡಚಣೆ ಉಂಟಾಯಿತು.

ಕಂದು ಬಣ್ಣದ ಆಕಳು ರಸ್ತೆ ಮಧ್ಯೆ ನಿಂತು ಬರುವ–ಹೋಗುವ ವಾಹನಗಳನ್ನು ತಡೆಗಟ್ಟುವುದರ ಜೊತೆಗೆ ಅಲ್ಲಿಂದ ಸಂಚರಿಸುತ್ತಿದ್ದ ಕೆಲ ಸಾರ್ವಜನಿಕರ ಮೇಲೆ ಎರಗಿ, ಕೆಲವರಿಗೆ ಕಚ್ಚಿ ಗಾಯಗೊಳಿಸಿದ ಘಟನೆ ನಡೆದಿದೆ. ಇದರಿಂದ ಕೆಲಕಾಲ ಸ್ಥಳದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಅಲ್ಲಿಯೇ ಕರ್ತವ್ಯದಲ್ಲಿದ್ದ ಪೊಲೀಸರು ಕೂಡಲೇ ಸ್ಥಳದಲ್ಲಿದ್ದ ಆಕಳನ್ನು ಓಡಿಸಿ ಸಂಚಾರ ಸುಗಮಗೊಳಿಸಲು ಪ್ರಯತ್ನಿಸಿದರು. ಆದರೆ ಆಕಳುಗಳು ಪೊಲೀಸರ ಮೇಲೆಯೂ ಎರಗಲು ಮುಂದಾದ ಕಾರಣ ಅವುಗಳನ್ನು ನಿಯಂತ್ರಿಸಲು ಕೆಲಕಾಲ ಹರಸಾಹಸ ಪಡಬೇಕಾಯಿತು.

ಈ ಕುರಿತು ಸ್ಥಳದಲ್ಲೇ ಅಂಗಡಿ ನಡೆಸುತ್ತಿರುವ ದಾಂಡೇಲಿ ಬೀದಿ ಬದಿ ವ್ಯಾಪಾರ ಸಂಘದ ಅಧ್ಯಕ್ಷರಾದ ಸುಲೇಮಾನ್ ಸೈಪುದ್ದೀನ್ ಶೇಕ್ ಅವರು ಶುಕ್ರವಾರ ರಾತ್ರಿ 11:15 ಗಂಟೆಗೆ ಮಾಹಿತಿ ನೀಡಿ, ಸೋಮನಿ ವೃತ್ತದಲ್ಲಿ ಬೀದಿ ಆಕಳ ಹಾವಳಿ ದಿನೇದಿನೇ ಹೆಚ್ಚುತ್ತಿದ್ದು, ಸಾರ್ವಜನಿಕರು ಹಾಗೂ ವಾಹನ ಸವಾರರ ಸುರಕ್ಷತೆಗೆ ಗಂಭೀರ ಧಕ್ಕೆಯಾಗುತ್ತಿದೆ ಎಂದು ತಿಳಿಸಿದ್ದಾರೆ.

ನಗರಸಭೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಬೀದಿ ಆಕಳ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಿ, ಸಾರ್ವಜನಿಕರು ಮತ್ತು ವಾಹನ ಸವಾರರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಅವರು ಆಗ್ರಹಿಸಿದ್ದಾರೆ.

## ವಾಹನ ನಿಲುಗಡೆ ಸಮಸ್ಯೆ ಪರಿಹಾರಕ್ಕೆ ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ ದಾಂಡೇಲಿ



ನಗರದ ಸಂಡೇ ಮಾರ್ಕೆಟ್ ಹಾಗೂ ಲಿಂಕ್ ರೋಡ್ ಪ್ರದೇಶಗಳಲ್ಲಿ ಅಂಗಡಿ ಮಾಲೀಕರು ಅಳವಡಿಸಿದ್ದ ವಾಹನ ನಿಲುಗಡೆ ಸ್ಟ್ಯಾಂಡ್‌ಗಳು ಹಾಗೂ ಅಂಗಡಿಗಳ ಮುಂಭಾಗದಲ್ಲಿದ್ದ ನಾಮಫಲಕಗಳನ್ನು ಶನಿವಾರ ಬೆಳಿಗ್ಗೆ ನಗರಸಭೆ ಸಿಬ್ಬಂದಿ ಯಾವುದೇ ಪೂರ್ವ ಸೂಚನೆ ನೀಡದೆ ತೆರವುಗೊಳಿಸಿರುವುದಾಗಿ ಅಂಗಡಿ ಮಾಲೀಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಅಂಗಡಿ ಮಾಲೀಕರ ಪ್ರಕಾರ, ಈಗಾಗಲೇ ಈ ಪ್ರದೇಶದಲ್ಲಿ ವಾಹನ ನಿಲುಗಡೆಗೆ ಸೂಕ್ತ ವ್ಯವಸ್ಥೆ ಇಲ್ಲದ ಕಾರಣ ಸಾರ್ವಜನಿಕರು ತಮ್ಮ ದ್ವಿಚಕ್ರ ಹಾಗೂ ನಾಲ್ಕು ಚಕ್ರದ ವಾಹನಗಳನ್ನು ಅಂಗಡಿಗಳ ಪ್ರವೇಶ ದ್ವಾರದ ಎದುರಲ್ಲೇ ನಿಲ್ಲಿಸುತ್ತಿದ್ದಾರೆ. ಇದರಿಂದ ಗ್ರಾಹಕರು ಅಂಗಡಿಗಳಿಗೆ ಸುಗಮವಾಗಿ ಪ್ರವೇಶಿಸಲು ಹಾಗೂ ವ್ಯಾಪಾರ ನಡೆಸಲು ತೀವ್ರ ತೊಂದರೆ ಉಂಟಾಗುತ್ತಿದೆ ಎಂದು ತಿಳಿಸಿದ್ದಾರೆ.

ನಗರದ ವ್ಯಾಪಾರ ಚಟುವಟಿಕೆಗಳು ಸುಗಮವಾಗಿ ನಡೆಯಬೇಕಾದರೆ ವಾಹನ ನಿಲುಗಡೆಗೆ ಶಾಶ್ವತ ವ್ಯವಸ್ಥೆ ಕಲ್ಪಿಸುವುದು ಅತ್ಯಗತ್ಯವಾಗಿದೆ. ವರ್ಷಗಳಿಂದ ದಾಂಡೇಲಿಯ ಜನರು ಹಾಗೂ ವ್ಯಾಪಾರಿಗಳು ವಾಹನ ನಿಲ್ದಾಣ ನಿರ್ಮಾಣಕ್ಕೆ ಬೇಡಿಕೆ ಸಲ್ಲಿಸುತ್ತಿದ್ದರೂ ಇದುವರೆಗೆ ಯಾವುದೇ ಶಾಶ್ವತ ಕ್ರಮ ಕೈಗೊಳ್ಳದಿರುವುದಕ್ಕೆ ಅವರು ಬೇಸರ ವ್ಯಕ್ತಪಡಿಸಿದ್ದಾರೆ. ಆದ್ದರಿಂದ ನಗರಸಭೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ವ್ಯಾಪಾರಿಗಳ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ದಾಂಡೇಲಿಯ ಸಂಡೇ ಮಾರ್ಕೆಟ್ ಮತ್ತು ಲಿಂಕ್ ರೋಡ್ ಪ್ರದೇಶಗಳಲ್ಲಿ ಸಾರ್ವಜನಿಕರ ಅನುಕೂಲಕ್ಕೆ ತಕ್ಕಂತೆ ವಾಹನ ನಿಲುಗಡೆ ಸ್ಥಳವನ್ನು ಶೀಘ್ರದಲ್ಲಿ ನಿರ್ಮಿಸಿ, ವ್ಯಾಪಾರಿಗಳು ಹಾಗೂ ಗ್ರಾಹಕರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಬೇಕು ಎಂದು ಅಂಗಡಿ ಮಾಲೀಕರು ನಗರಸಭೆ ಸಿಬ್ಬಂದಿಯನ್ನು ಆಗ್ರಹಿಸಿದ್ದಾರೆ.

# ಕುಮಾರ ಶಿವಾಜಿ ಪರಶುರಾಮಗೆ ಎರಡು ಬೆಳ್ಳಿ ಪದಕ

• ಮಲ್ಲಮ್ಮ ನುಡಿ ವಾರ್ತೆ ಹಳಿಯಾಳ



ತಾಲೂಕಿನ ಬೆಳವಟಗಿ ಗ್ರಾಮದ ಪ್ರತಿಭಾವಂತ ಅಥ್ಲಿಟಕ್ ಕು.ಶಿವಾ ಜಿ ಪರಶುರಾಮ ಮಾದಪ್ಪಗೌಡ ಅವರು ಚೀನಾದಲ್ಲಿ ನಡೆದ ಯು–23 ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್ ಶಿಪನಲ್ಲಿ ಎರಡು ಬೆಳ್ಳಿ ಪದಕಗಳನ್ನು ಗೆದ್ದು ಭಾರತದ ತ್ರಿವರ್ಣ ಧ್ವಜವನ್ನು ಅಂತರಾಷ್ಟ್ರೀಯ ವೇದಿಕೆಯಲ್ಲಿ ಹೆಮ್ಮೆಯಿಂದ ಹಾರಿಸಿ ಐತಿಹಾಸಿಕ ಸಾಧನೆ ಮಾಡಿದ ಸಲುವಾಗಿ ಇಂದು ಅವರನ್ನು ನಗರದಲ್ಲಿ ಮಾಜಿ ವಿ.ಪ ಸದಸ್ಯರು, ಕೆ.ಡಿ.ಸಿ.ಸಿ ಬ್ಯಾಂಕನ ನಿರ್ದೇ ಶಕರಾದ ಎಸ್. ಎಲ .ಘೋಟ್ನೇಕರ ಹಾಗೂ ಹಳಿಯಾಳ ವಿಧಾನಸಭಾ ಕ್ಷೇತ್ರದ ಬಿಜೆಪಿ ಯುವ ನಾಯಕರಾದ ಶ್ರೀನಿವಾಸ ಘೋಟ್ನೇಕರ ಅವರು ಸನ್ಮಾನಿಸಿ, ಗೌರವಿಸಿದರು.

ಗ್ರಾಮೀಣ ಹಿನ್ನೆ ಲೆಯಿಂದ ಅಂತರಾಷ್ಟ್ರೀಯ ಕ್ರೀಡಾಂಗಣದವರೆಗೆ ತಮ್ಮ ಪ್ರತಿಭೆಯನ್ನು ಸಾಬೀತು ಪಡಿಸಿರುವ ಶಿವಾಜಿ ಅವರ ಸಾಧನೆ ಯುವ ಕ್ರೀಡಾಪಟುಗಳಿಗೆ ಸ್ಪೂರ್ತಿದಾಯಕವಾಗಿದೆ. ಮುಂದಿನ ದಿನಗ ಳಲ್ಲಿ ಇನ್ನಷ್ಟು ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಪದಕ ಗೆದ್ದು ಭಾರತಕ್ಕೆ ಮತ್ತಷ್ಟು ಕೀರ್ತಿ ತಂದು ಕೊಡಲಿ ಎಂಬುದು ನಮ್ಮೆಲ್ಲರ ಹಾರೈಕೆ ಎಂದು ಎಸ್.ಎಲ. ಘೋಟ್ನೇಕರ ಅವರು ಸಂತಸ ವ್ಯಕ್ತಪಡಿಸಿದರು.

ಈ ವೇಳೆ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಾಜಿ ನರಸಾನಿ, ಜಿಲ್ಲಾ ವಿಶೇಷ ಆ ಹ್ವಾನಿತರಾದ ಅನಿಲ್ ಮುತ್ನಾಳೆ, ಮಂಡಲ ಪ್ರಧಾನ ಕಾರ್ಯದರ್ಶಿ ವಿ.ಎಂ.ಪಾಟೀಲ್, ಮಂಡಲ ಉಪಾಧ್ಯಕ್ಷರಾದ ತುಕಾರಾಮ ಗೌಡಾ, ಪ್ರಮುಖರಾದ ನಾಗರಾಜ ಪಾಟೀಲ್, ವಿಜಯ ಬೋ ಬಾಟಿ, ಯಲ್ಲಪ್ಪ ಹೊನ್ನೋಜಿ, ವಾಮನ ಮಿರಾಶಿ, ಆನಂದ ಕಂಚನಾಳಕರ, ಅಶೋಕ ಬೆಳಗಾಂವಕರ, ಮಾರುತಿ ಕಾಮ್ರೇಕರ, ಗುಲಾಬ ಶ್ಯಾಲತೀಫನವರ, ಬಾಬು ಪಾಗೋಜಿ, ನಾರಾಯಣ ಬೆಳಗಾಂವಕರ, ವಿನಾಯಕ, ಹಿರೇಕರ, ತುಕಾರಾಮ ಜಾವಳ್ಳಿ, ಕುಮಾರ ಕಲಭಾವಿ, ರಾಮಚಂದ್ರ ತಾಂಬಿಡಕರ, ಅಶೋಕ ಕಂಬಾರ ಗಣವಿ, ಬಾಲಕೃಷ್ಣಗೌಡಾ, ಮಂಜುನಾಥ ಗೌಡಾ, ರಾಜು ವಾಲೇಕರ, ಗಣಪತಿ ಮಂಗನ ಗೌಡ್ರ, ಮಾರುತಿ ಕೆಳೋಜಿ, ನಾಗರಾಜ ಗೌಡಾ, ಕೃಷ್ಣಾ ತೋರ್ಲೇಕರ, ಮಂಜುನಾಥ ಸಾವಂತ ಹಾಗೂ ಮೊದಲಾದವರು ಇದ್ದರು.

# ಶಿಕ್ಷಣ, ಸಂಸ್ಕಾರ ಮತ್ತು ಪರಿಶ್ರಮದಿಂದ ಉನ್ನತಿ ಸಾಧ್ಯ

• ಮಲ್ಲಮ್ಮ ನುಡಿ ವಾರ್ತೆ ಬೀದರ್





ಆಧುನಿಕ ಜೀವನ ಶೈಲಿಯಲ್ಲಿ ಬದುಕುತ್ತಿರುವ ಜನರು ನಮ್ಮ ನಿಜ ಸಂಸ್ಕೃತಿಯನ್ನು ಮರೆಯುತ್ತಿರುವುದು ವಿಷಾದನೀಯ ಸಂಗತಿಯಾಗಿದೆ. ಇಂದಿನ ಯುವ ಪಿಳಿಗೆಗೆ ನಮ್ಮ ತಲೆ ತಲಾಂತರದಿಂದ ಬಂದ ಸಂಸ್ಕೃತಿಯನ್ನು ಪರಿಚುವುದು ಬಳಹ ಮುಖ್ಯವಾಗಿದೆ ಎಂದು ಮಾಜಿ ಸಭಾಪತಿ ರಘುನಾಥರಾವ್ ಮಲ್ಕಾಪೂರೆ ಕರೆ ನೀಡಿದರು.

ರವಿವಾರ ಬೆಳಿಗ್ಗೆ ಬೀದರ ನಗರದ ಪೂಜ್ಯ ಡಾ. ಚನ್ನಬಸವ ಪಟ್ಟದೇವರ ರಂಗಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಬೆಂಗಳೂರು ಜಿಲ್ಲಾ ಗೊಂಡ ವಿದ್ಯಾರ್ಥಿ ಸಂಘ (ರಿ), ಬೀದರ ಇವರ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ "ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸಂಭ್ರಮ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮ ಗುರಿಯನ್ನು ಸ್ಪಷ್ಟವಾಗಿ ನಿಗದಿಪಡಿಸಿಕೊಂಡು ನಿರಂತರ ಪ್ರಯತ್ನದ ಮೂಲಕ ಜೀವನದಲ್ಲಿ ಉನ್ನತ ಸ್ಥಾನವನ್ನು ಗಳಿಸಬೇಕು ಎಂದು ಅವರು ಕರೆ ನೀಡಿದರು.

ಪಬ್ಲಿಕ್ ಟಿವಿಯ ಪಬ್ಲಿಕ್ ಹೀರೋ ಖ್ಯಾತಿಯ ಮಕ್ಕಳ ಪ್ರತಿಭಾ ಪೋಷಕ ಹಾಗೂ ಪ್ರೇರಕ ವಾಗ್ಮಿ ಪ್ರಕಾಶ ಎಸ್. ದೇಶಮುಖ ಅವರು ವಿಶೇಷ ಉಪನ್ಯಾಸ ನೀಡಿ ಮಾತನಾಡಿ, ಮಕ್ಕಳನ್ನು ಮೈಗಳ್ಳರನ್ನಾಗಿ ಬೆಳೆಸದೇ ಪರಿಶ್ರಮಜೀವಿಗಳಾಗಿ ರೂಪಿಸುವ ಜವಾಬ್ದಾರಿ ಪಾಲಕರು ಮತ್ತು ಶಿಕ್ಷಕರ ಮೇಲಿದೆ ಎಂದು ಹೇಳಿದರು. ಪ್ರತಿಯೊಬ್ಬರೂ ಜೀವನದಲ್ಲಿ ಅಹಂಕಾರವನ್ನು ಬಿಟ್ಟು ವಿನಯ, ಪ್ರೀತಿ ಮತ್ತು ಮಾನವೀಯತೆಯಿಂದ ಇತರರ ಮನಸ್ಸನ್ನು ಗೆಲ್ಲಬೇಕು ಎಂದು ತಿಳಿಸಿದರು.

ಮಕ್ಕಳು ತಮ್ಮ ಗುರಿಯತ್ತ ನಿರಂತರ ಪರಿಶ್ರಮ ಮತ್ತು ಶ್ರದ್ಧೆಯಿಂದ ಮುನ್ನಡೆಯಬೇಕು. ಕಠಿಣ ಪರಿಶ್ರಮಕ್ಕೆ ಪರ್ಯಾಯ ಯಾವುದೂ ಇಲ್ಲ ಎಂಬುದನ್ನು ಅರಿತು, ಶಿಕ್ಷಣದ ಜೊತೆಗೆ ಉತ್ತಮ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಜೀವನದಲ್ಲಿ ಉನ್ನತ ಸಾಧನೆ ಮಾಡಬೇಕು ಎಂದು ಅವರು ಕರೆ ನೀಡಿದರು.

ಜಿಲ್ಲಾ ಗೊಂಡ ವಿದ್ಯಾರ್ಥಿ ಸಂಘದ ಅಧ್ಯಕ್ಷ ಸಂತೋಷಕುಮಾರ ಜೋಳದಾಪಕೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದರು, ಜಿ.ಪಂ. ಮಾಜಿ ಅಧ್ಯಕ್ಷೆ ಶ್ರೀಮತಿ ಗೀತಾ ಚಿದ್ರಿ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಸದಸ್ಯ ಡಾ.ಸಂಜೀವಕುಮಾರ ಅತಿವಾಳೆ, ಕರ್ನಾಟಕ ಜಾನಪದ ಆಕಾಡೆಮಿ ಸದಸ್ಯ ವಿಜಯಕುಮಾರ ಸೋನಾರೆ, ಮಹಾನಗರ ಪಾಲಿಕೆ ಸದಸ್ಯ ಹನಮಂತ ಮಲ್ಕಾಪುರ, ಬಾಬುರಾವ ಬರಿದಾಬಾದೆ, ಖ್ಯಾತ ವೈದ್ಯರಾದ ಬಾಬುರಾವ ಮರಖಲ್, ಡಾ. ಶ್ರೀಕಾಂತ್ ಚಿಂಚೋಳಿಕರ್, ಡಾ. ಜಿ.ಬಿ ಮಲ್ಲಿಕಾರ್ಜುನ, ಪ್ರಮುಖರಾದ ಪೀರಪ್ಪಾ ಯರನಳ್ಳಿ, ರತಿಕಾಂತ ಜೋಜನಾ, ಶಂಭುಲಿಂಗ ವಾಲ್ದೊಡ್ಡಿ, ದೇವಪ್ಪಾ ಚಾಂಬೋಳೆ, ಸಂಗೀತಾ ಬೀರಗೊಂಡ, ರೇಖಾ ಅಪ್ಪಾರಾವ್ ಸೌದಿ, ಬಾಬುರಾವ ಮಲ್ಕಾಪುರ, ತುಕಾರಾಮ ಚಿದ್ರಿ ಕರಾಟೆ, ಶಿವಕುಮಾರ್ ಕುಪ್ಪೆ, ದೀಪಕ ಚೀದ್ರಿ, ತುಕಾರಾಮ ಔದತಪುರ, ಬಕ್ಕಪ್ಪಾ ನಾಗೋರಾ, ಬಾಲಾಜಿ ಜಬಾಡೆ, ಕಲ್ಲಪ್ಪಾ ರಾಯಗೊಂಡ, ಸುನೀಲ ಚಿಲ್ಲರ್ಗಿ, ಗೊವಿಂದ ದುರ್ಗೆ, ಶರಣಪ್ಪಾ ಮಲಗೊಂಡ, ಪ್ರವೀಣ ಇತರರು ವೇದಿಕೆ ಮೇಲಿದ್ದರು. ವಿಜಯಕುಮಾರ ಬ್ಯಾಲಹಳ್ಳಿ ಸ್ವಾಗತಿಸಿದರು. ದೇವಿದಾಸ ಜೋಶಿ ನೀರುಪಿಸಿದರೇ, ಮಲ್ಲಿಕಾರ್ಜುನ್ ಮುರ್ಕೆ ವಂದಿಸಿದರು.

**ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರಿಗೆ ಸನ್ಮಾನ:** ಸಾಮಾಜಿಕ ಸೇವೆಯನ್ನು ಪರಿಗಣಿಸಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಅನೇಕರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಿ ಗೌರವಿಸಲಾಯಿತು. ಸರ್ಕಾರಿ ನೌಕರರು ಹಾಗೂ ನಿವೃತ್ತ ಸರ್ಕಾರಿ ನೌಕರರನ್ನು ಅವರ ಸೇವೆಯನ್ನು ಪರಿಗಣಿಸಿ ಸನ್ಮಾನಿಸಲಾಯಿತು.

**ಸಾಂಸ್ಕೃತಿಕ ಕಾರ್ಯಕ್ರಮ:** ಕಾರ್ಯಕ್ರಮದಲ್ಲಿ ದೇಶಭಕ್ತಿ ಗೀತೆ, ಭರತನಾಟ್ಯ, ನಾಡಗೀತೆ, ವಚನಗಾಯನ, ಮಹಿಳಾ ಕೋಲಾಟ, ಮಹಿಳಾ ಜಾನಪದ ಭಜನೆ, ಜೋಗುತಿ ನೃತ್ಯ, ಪೈತ್ರಿ ಕುಣೀತ, ಜಾನಪದ ಗೀತೆ, ಸಂಪ್ರದಾಯಿಕ ಪದ, ಕುಟ್ಟುವ ಪದ, ಬಿಸುವ ಪದ, ಐರಾಣಿ ಪದ, ಭುಲಾಯಿಪದ, ಜಾನಪದ ಭಜನೆ, ಮುಂತಾದವುಗಳು ನೋಡುಗರ ಕಣ್ಮಣ ಸೇಳೆದವು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000, Telephone Number:08483200222
PRGI NO. 120927
(RNINO:KARKAN/2011/48371)